ಮಿಂಚಿನ ಬಳ್ಳಿಯ ೧೮ನೇ ವರ್ಷದ ಮೂರನೇ ಕುಡಿ

ಯಕ್ಷಗಾನ ಸಾಹಿತ್ಯ

ಲೇಖಕರು :

ಡಾ|| ಕೆ. ಎಂ. ಕೃಷ್ಣರಾವ

M. A. P.H. D.

ಮಿಂಚಿನಬಳ್ಳಿ ಕಾರ್ಯಾಲಯ

ಧಾರವಾಡ

೫ ನೇ ಮೇ ೧೯೫೭

ಉತ್ತಮ ಪ್ರತಿ]
೧—೮—೦

[ಸಾದಾ ಪ್ರತಿ
೧—೦—೦

ಪ್ರಕಾಶಕರು :
ಬುರ್ಲಿ ಬಿಂದುಮಾಧವ
ಮಿಂಚಿನಬಳ್ಳಿ ಕಾರ್ಯಾಲಯ

ಮುಂಬರಲಿರುವ ಪುಸ್ತಕಗಳು

೧ ಲೋಕಮಾನ್ಯ ಟಿಳಕರು
೨ ಪ್ರಸನ್ನ ವೆಂಕಟದಾಸರು
೩ ಭಾರತದ ರಾಜಕಾರಣ
೪ ಶ್ರೀ ಬೇಂದ್ರೆಯವರು

ಮೊದಲ ಮುದ್ರಣ ೧೯೫೬.

ಮುದ್ರಕರು :
ಜಿ. ಆರ್. ಪಂಡಿತ
ಕೇಳಕರ ಪ್ರಿಂಟಿಂಗ ಪ್ರೆಸ್
ಧಾರವಾಡ.

ವಾಚಕರಲ್ಲಿ ಬಿನ್ನಹ

ಯಕ್ಷಗಾನ ಸಾಹಿತ್ಯವು ಈ ವರ್ಷದ ಮೂರನೆ ಕುಡಿ. ಯಕ್ಷಗಾನದ ಬಗೆಗೆ ಅಭ್ಯಾಸ ಪೂರ್ಣ ವಿಮರ್ಶಿತ ಗ್ರಂಥಗಳು ಕಡಿಮೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಇಂದಿನ ನಾಟಕ ಪ್ರಪಂಚಕ್ಕೆ ತಾಯಿಬೇರಿನಂತಿರುವ ಈ ಯಕ್ಷಗಾನದ ಕಲೆಯ ಬಗೆಗೆ ನಮ್ಮ ಜನಾಂಗದಲ್ಲಿ ತಿಳುವಳಿಕೆಯು ಅವಶ್ಯ. ಈ ದೃಷ್ಟಿಯಿಂದ ಈ ಗ್ರಂಥವನ್ನು ಪ್ರಕಟಿಸಲಾಗಿದೆ.

ಯಕ್ಷಗಾನದ ತಂತ್ರ, ಪಾತ್ರಗಳ ವಿವರಣೆ, ನೃತ್ಯಗಳ ವಿಚಾರ ಈ ಎಲ್ಲವುಗಳನ್ನು ಈ ಗ್ರಂಥದಲ್ಲಿ ವಿಚಾರಮಾಡಲಾಗಿದೆ. ಕರ್ನಾಟಕದ ರಂಗ ಭೂಮಿಯನ್ನು ವಿಚಾರಮಾಡುವವರು ಯಕ್ಷಗಾನದ ಬಗೆಗೆ ಅಭ್ಯಾಸ ಮಾಡಿ ಅದರ ತಳಹದಿಯ ಮೇಲೆಯೇ ನಮ್ಮ ಮುಂದಿನ ಮಂದಿರವನ್ನು ಕಟ್ಟುವದು ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ, ಕಲೆಯ ಪುನರುಜ್ಜೀವನದ ವಿಚಾರ ದಿಂದ ನೋಡುವದು ಅವಶ್ಯವಿದೆ.

ಯಕ್ಷಗಾನದ ಬಗೆಗೆ ಡಾ. ಕೆ. ಎಂ. ಕೃಷ್ಣರಾಯರು ಅಭ್ಯಾಸ ಮಾಡಿ ಈ ಪ್ರಬಂಧವನ್ನು ಜನರೆದುರಿಗೆ ಇಟ್ಟಿದ್ದಾರೆ. ಜನತೆಯು ಅವರ ಈ ಶ್ರಮದ ಉಪಯೋಗವನ್ನು ಮಾಡಿಕೊಳ್ಳುವದೆಂದು ನಂಬಿದ್ದೇವೆ. ಮಿಂಚಿನಬಳ್ಳಿಯಲ್ಲಿ ಗ್ರಂಥವನ್ನು ಪ್ರಕಟಿಸಲು ಕೊಟ್ಟದ್ದಕ್ಕಾಗಿ ನಾವು ಅವರಿಗೆ ಋಣಿಯಾಗಿದ್ದೇವೆ. ಪುಸ್ತಕವು ಬೇಗನೇ ಪ್ರಕಟವಾಗಬೇಕಿದ್ದರೂ ಪ್ರೆಸ್ಸಿನವರ ಅನೇಕ ಅನಾನು ಕೂಲತೆಗಳ ಮೂಲಕ ವಿಲಂಬವಾದುದಕ್ಕಾಗಿ ಕ್ಷಮೆಯನ್ನು ಕೇಳುತ್ತೇವೆ. ಅಲ್ಲದೆ ಮುದ್ರಣದ ದೋಷಗಳು ಅನೇಕ ಉಳಿದಿವೆ. ತಿದ್ದುಪಡಿಯನ್ನು ಇದರಲ್ಲಿ ಸೇರಿಸಲಾಗಿದೆ. ಕನ್ನಡಿಗರು ಈ ಗ್ರಂಥದ ಉಪಯೋಗವನ್ನು ಸರಿ ಯಾದ ರೀತಿಯಲ್ಲಿ ಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ಧಾರವಾಡ
೨೪-೪-೫೭.

ತಮ್ಮ ಸೇವಕ
— ಬುರ್ಲಿ ಬಿಂದುಮಾಧವ

ಗ್ರಂಥ ಸಹಾಯ

೧ ಸಂಭಾವನೆ- ಪ್ರೊ| ಬಿ. ಎಂ. ಶ್ರೀಕಂಠಯ್ಯನವರಿಗೆ ಅರ್ಪಿತ ವಿವಿಧ ಲೇಖಕರಿಂದ.

೨ ಮದ್ರಾಸಿನ ಮಿತ್ರ ಮಂಡಳಿ ಕಾಣಿಕೆ.

೩ ಸಮರ್ಪಣೆ- ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಅರ್ಪಿತ.

೪ ಪಾರ್ತಿಸುಬ್ಬ- ಶ್ರೀ. ಮುಳಿಯ ತಿಮ್ಮಪ್ಪಯ್ಯ.

೫ ಯಕ್ಷನಾಟಕಗಳು- ಶ್ರೀ ರಾಮಚಂದ್ರಭಟ್ಟ ಹಾಸಣಗಿ.

೬ ಸಂಸ್ಕೃತ ನಾಟಕ- ಪ್ರೊ| ಎ. ಆರ್. ಕೃಷ್ಣಶಾಸ್ತ್ರಿ.

೭ ಕವಿರಾಜ ಮಾರ್ಗ- ಶ್ರೀ ವಿಜಯ.

೮ ಸಭಾವಂದನೆ.

೯ ಸಭಾಲಕ್ಷಣ.

೧೦ ಕನ್ನಡ ಕೈಪಿಡಿ- ಸಂಪುಟ ೧.

೧೧ ಅನೇಕ ಯಕ್ಷಗಾನ ಕೃತಿಗಳು.

೧೨ South Indian music- Sri P. Samba murthy.

೧೩ The Dramtic History of the world— Sri K. Srinivasarao.

೧೪ Nagavarmas Prosody-Kittells introduction with an essay on Canarese literature.

ಪತ್ರಿಕೆಗಳು

೧ ಜಯಕರ್ಣಾಟಕ.

೨ ಪಂಚಕಜ್ಜಾಯ.

೩ ಕನ್ನಡನುಡಿ.

೪ ಪ್ರಬುದ್ಧ ಭಾರತ.

೫ ತೆಲುಗಿನ ಪ್ರತಿಭಾ ಪತ್ರಿಕೆ.

೬ ಸಂಯುಕ್ತ ಕರ್ಣಾಟಕ.

ಮೊದಲ ಮಾತು

"ಯಕ್ಷಗಾನ" ನಮ್ಮ ನಾಡಿನ ಗ್ರಾಮ ಕಲೆ. ಕ್ರಮೇಣ, ನಿಧಾನವಾಗಿ ನಶಿಸಿ ಶಿಥಿಲವಾಗುತ್ತಿರುವ ಕಲೆ ಎಂದರೂ ಸಲ್ಲುವುದು. ಇದನ್ನು ಉಳಿಸಿ ಬೆಳೆಸಬೇಕಾದುದು ನಮ್ಮ ಜನರ ಕರ್ತವ್ಯವೆಂಬುದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ.

ಆದರೆ "ಯಕ್ಷಗಾನ"ದ ಉಗಮದ ಕಾಲ, ಬೆಳವಣಿಗೆ, ರೀತಿ, ಆ ಮಾತಿನ ಅರ್ಥ, ವ್ಯಾಖ್ಯಾನ, ಸಾಹಿತ್ಯದಲ್ಲಿ ಅದರ ಸ್ಥಾನ, ಇವೇ ಮೊದಲಾದ ವಿಷಯಗಳಲ್ಲಿ ಒಮ್ಮತವಿಲ್ಲ. ಈ ವಿಷಯವಾಗಿ ಅಲ್ಲಲ್ಲೇ ಆಗಾಗ್ಗೆ ಕೆಲವು ಲೇಖನಗಳು ಹೊರಬೀಳುತ್ತಿದ್ದರೂ, 'ಯಕ್ಷಗಾನ' ವಿಷಯವನ್ನೇ ಕುರಿತು ಹೊರಬಿದ್ದ ಪುಸ್ತಕಗಳು ಕನ್ನಡದಲ್ಲಿ ವಿರಳವೇ ಎನ್ನಬಹುದು. ಮೂರುನಾಲ್ಕು ಬಂದಿದ್ದರೆ ಹೆಚ್ಚು! 'ಯಕ್ಷಗಾನ'ದ ಕತೆಗಳನ್ನು ಹೇಳುವ ಚಿಕ್ಕಪೊಸ್ತ ಹೊತ್ತಿಗೆಗಳು ನೂರಾರು ಇದ್ದರೂ, ಅವುಗಳ ಬಗ್ಗೆ ವಿಮರ್ಶಾತ್ಮಕ ಗ್ರಂಥಗಳು ಮಾತ್ರ ಬಹು ವಿರಳ.

ಕಾರಣಾಂತರದಿಂದ ಕನ್ನಡ ಯಕ್ಷಗಾನಗಳ ಬಗ್ಗೆ ಓದುವ ಅವಕಾಶ ನನಗೆ ಸಿಕ್ಕಿ, ಅದರಿಂದ ನನ್ನಲ್ಲಿ ಕುತೂಹಲ ಕೆರಳಿ, ಅದರಲ್ಲಿ ಕೊಂಚ ಹೆಚ್ಚು ಪ್ರವೇಶ ಮಾಡಿದುದರ ಪರಿಣಾಮವಾಗಿ, ಇಂದು ಈ ಪುಟ್ಟ ಪುಸ್ತಕ ಹೊರಬೀಳುತ್ತಿದೆ. ಇದು ಸಂಶೋಧಾತ್ಮಕ ಎಂದು ಬೇರೆ ಹೇಳಬೇಕಾಗಿಲ್ಲ. ಒಮ್ಮತವ ಅಭಿಪ್ರಾಯವಿಲ್ಲದಿರುವ ಪ್ರಯುಕ್ತ, ಸಂಶೋಧನೆಗೆ ಇಲ್ಲಿ ಹೆಚ್ಚು ಅವಕಾಶವಿದೆ. ಅಂತೆಯೇ ಭಿನ್ನಾಭಿಪ್ರಾಯಕ್ಕೂ ಎಡೆಯಿದೆ. ಇಲ್ಲಿ ನಾನು ಪ್ರತಿಪಾದಿಸಿರುವ ವಾದ, ಅದರಿಂದ ನಾನು ಹೇಳಿರುವ ತೀರ್ಮಾನ, ಅನೇಕರಿಗೆ ಹಿಡಿಸದೇ ಇರಬಹುದು. ಅದೇ ಕೊನೆಯ ತೀರ್ಮಾನ ಎಂದು ನಾನೂ ಹೇಳುವವನಲ್ಲ. ಈ ವಿಷಯದಲ್ಲಿ ತುಂಬ ಚರ್ಚೆ ಆಗಬೇಕಾಗಿದೆ. ಈ ಚರ್ಚೆಯಲ್ಲಿ ನನ್ನದೂ ಒಂದು ಭಾಗ, ವಾದ ಎಂದಿಟ್ಟುಕೊಂಡರೆ ಸಾಕು. ತಿಳಿದವರು, ತಿಳಿಯಬೇಕೆನ್ನುವವರು ಇದನ್ನು ಅವಲೋಕಿಸಿ, ನಮ್ಮ ಈ ಕಲೆಯ

ಸಂಗೋಪನೆಗೆ, ಅದರ ಅಭಿವೃದ್ಧಿಗೆ ಮಾಡಬೇಕಾದುದನ್ನು ಮಾಡುವ ಮನಸ್ಸು ಮಾಡಿದರೆ, ಆ ಕಡೆಗೆ ಅವರ ಗಮನ ಹರಿದರೆ ಸಂತೋಷ.

ಯಕ್ಷಗಾನ ಕೃತಿಗಳನ್ನು ಓದಬೇಕೆನ್ನುವವರಿಗೆ ಸಾಮಗ್ರಿಗೇನೂ ಕೊರತೆ ಇಲ್ಲ- ನನ್ನ ಕಣ್ಣಿಗೆ ಬಿದ್ದಷ್ಟು ಕೃತಿಗಳ ಒಂದು ಪಟ್ಟಿಯನ್ನು ಪುಸ್ತಕದ ಕೊನೆಯಲ್ಲಿ ಕೊಟ್ಟಿದೆ. ಆದರೆ ದೊರೆಯುವ ಪುಸ್ತಕಗಳು, ಸಂಖ್ಯೆಯ ದೃಷ್ಟಿಯಿಂದ ಸಂತೋಷವನ್ನು ಕೊಟ್ಟರೂ, ಅವುಗಳ ಪರಿಸ್ಥಿತಿ ಅಷ್ಟೇನೂ ಸಮರ್ಪಕವಾಗಿಲ್ಲ- ಹೇಳಿಕೊಳ್ಳುವದಾಗಿಲ್ಲ ! ಶಾಸ್ತ್ರೀಯವಾಗಿ ಸಂಪಾದಿತವಾದ ಪುಸ್ತಕಗಳನ್ನು ಹೊರತರುವ ಕೆಲಸವೇ ಬೇಕಾದಷ್ಟು. ತುರ್ತಾಗಿ ಆಗಬೇಕಾದುದು ತುಂಬ ಇದೆ. ದೊರೆಯುವ ಸಾಮಗ್ರಿಯೇ ಹೀಗಿರುವಾಗ, ಅದರ ಆಧಾರದ ಮೇಲೆ ಕಟ್ಟುವ ಕಟ್ಟಡದ ವಿಷಯವಾಗಿ ಕೊಂಚ ವಿಚಾರ ಮಾಡಬೇಕಾಗುತ್ತದೆ. ಅಂತೆಯೇ ಅದರ ವಿಮರ್ಶೆ ಸಾಕಷ್ಟು ಬಂದಿಲ್ಲವೇನೋ, ಸದ್ಯಕ್ಕೆ ದೊರೆಯುವ ಕೃತಿಗಳ ಆಧಾರದ ಮೇಲೆಯೇ ಸಂಶೋಧನೆ ನಡೆಸಿ ವಿಮರ್ಶೆಯ ಮಂದಿರವನ್ನು ಸೃಜಿಸಬೇಕಾಗಿದೆ; ಒಂದು ಸಿದ್ಧಾಂತಕ್ಕೆ ಬರಬೇಕಾಗಿದೆ. ಈ ಕೆಲಸ ಒಬ್ಬರಿಂದ, ಒಂದು ಪುಸ್ತಕದಿಂದ ಆಗುವಂತಹವಲ್ಲ ಎಂದು ಹೇಳಬೇಕಾದುದೇನಿದೆ ? ಆ ಪಥದಲ್ಲಿ ಇದೊಂದು ಪುಟ್ಟ ಹೆಜ್ಜೆ ಎಂದು ಮಾತ್ರ ಹೇಳಬಹುದು, ಅಷ್ಟೆ.

ನನಗೆ ದೊರೆತ ಯಕ್ಷಗಾನ ಕೃತಿಗಳ ಆಧಾರದ ಮೇಲೆ ಈ ಕೆಲವು ವಿಷಯಗಳನ್ನು ಬರೆದಿದ್ದೇನೆ. ಯಕ್ಷಗಾನದ ತವರಾದ ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ ಕವಿಗಳು, ನಟರು ಈಗಲೂ ಇದ್ದಾರೆ. ಅಲ್ಲಿ ಇದು ಇನ್ನೂ ಚೆನ್ನಾಗಿ ಜೀವಂತವಾಗಿದೆ. ಅಪಾರ ಸಾಹಿತ್ಯವೂ ಅಲ್ಲಿ ಇರಬೇಕು. ಅವು ಯೋಗ್ಯ ರೀತಿಯಲ್ಲಿ ಹೊರಬಿದ್ದು, ಅಲ್ಲಿಯ ಆ ಕವಿಗಳ, ವಿದ್ವಾಂಸರ, ನಟರ ಸಹಾಯದಿಂದ ಸಂಶೋಧನೆ ಮುಂದುವರಿದು, ಈ ವಿಷಯದಲ್ಲಿ ಹಲವು ನಿರ್ದಿಷ್ಟ ತೀರ್ಮಾನಗಳು ಆಗಬೇಕಾಗಿದೆ. ಆ ಕೆಲಸಕ್ಕೆ ಸಹಾಯವಾಗಬಹುದಾದ ಒಂದು ಸಣ್ಣ ಪ್ರಯತ್ನ ಇದು.

ಅನೇಕ ಯಕ್ಷಗಾನ ಕೃತಿಗಳಂತೆ ಇದೂ ಈಗ ಆರೇಳು ವರ್ಷಗಳಿಂದ ಬೆಳಕು ಕಾಣಲು ಆಗದೆ, ಇದ್ದಲ್ಲೇ ಪವಡಿಸಿ, ಧೂಳು ಸಂಪಾದಿಸಿತ್ತು. "ಮಿಂಚಿನಬಳ್ಳಿ"ಯ ಬೆಳಕು ಅದರ ಮೇಲೆ ಮಿಂಚಿ, ಕತ್ತಲು ಕಳೆದು, ಧೂಳು ಕೊಡವಿಕೊಂಡು ಅದು ಹೊರಬೀಳುವುದಕ್ಕೆ ಈಗ ಸಾಧ್ಯವಾಗಿದೆ— ಶ್ರೀ ಬುರ್ಲಿ ಬಿಂದು ಮಾಧವ ಅವರ ಸ್ನೇಹ ವಿಶ್ವಾಸಗಳ ನೆರವಿನಿಂದ. ಈ ಉಪಕಾರಕ್ಕಾಗಿ ಅವರಿಗೆ ನನ್ನ ಅನೇಕ ವಂದನೆಗಳು.

ಡಿ. ಆರ್. ಎಂ. ಕಾಲೇಜ್,
ದಾವಣಗೆರೆ -೧೫-೪-೧೯೫೬
ಚೈತ್ರ ಶುದ್ಧ ಪಂಚಮಿ ದುರ್ಮುಖಿ.

ಕೆ. ಎಂ. ಕೃಷ್ಣರಾವ್.

ಯಕ್ಷಗಾನ ಸಾಹಿತ್ಯ

೧. ಯಕ್ಷಗಾನ ಪ್ರದರ್ಶನ

ಹಿಂದೊಮ್ಮೆ ಕನ್ನಡನಾಡಿನಲ್ಲೆಲ್ಲ ಪ್ರಚಾರದಲ್ಲಿದ್ದ ಯಕ್ಷಗಾನಗಳು ಈಗಲೀಗ ದಕ್ಷಿಣಕನ್ನಡ ಉತ್ತರಕನ್ನಡ ಎಂಬ ಹೆಸರಿನ ಎರಡು ಕರಾವಳಿ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಾಗಿ ಅಡಗಿ ಕುಳಿತಿವೆ. ಉಳಿದ ಭಾಗಗಳಲ್ಲಿ ವಿರಳ. ಆದರೆ ಜನ ಸಾಮಾನ್ಯರ ಕಲೆಗೆ ನಗರ ವಾಸಿಗಳು, ಪಟ್ಟಣಿಗರು, ಪ್ರೋತ್ಸಾಹ ಕೊಡಬೇಕು, ಅದರಲ್ಲಿ ನಾಡಿನ ಸಂಸ್ಕೃತಿಯ, ನಾಗರಿಕತೆಯ ಜೀವ ಜೀವಾಳವಿದೆ, ನೈಜವಾದ ಸೊಗಸಿದೆ, ಸೊಬಗಿದೆ, ಎಂಬ ಮನೋಭಾವ ಈಚೆಗೆ ಮೂಡಿರುವದರಿಂದ, ಮೈಸೂರು ಬೆಂಗಳೂರಂತಹ ನವ ನಾಗರಿಕತೆಯ ತಿರುಳಿನಂತಿರುವ ಹಿರಿಯ ನಗರಗಳಲ್ಲೂ ಹಲವು ಯಕ್ಷಗಾನ ಪ್ರದರ್ಶನಗಳನ್ನು ನೋಡುವ ಅವಕಾಶ ನನಗೆ ದೊರೆಯಿತು. ಕೆಲವು ವರ್ಷಗಳ ಹಿಂದೆ ಮೈಸೂರ ದೇಶದ ವಯಸ್ಕರ ಶಿಕ್ಷಣಸಮಿತಿಯವರು ಬೆಂಗಳೂರ ನಗರದಲ್ಲಿ ಒಂದು "ಜನತಾ ಕಲಾ ಮಹೋತ್ಸವ" ವನ್ನು ಏರ್ಪಡಿಸಿದ್ದರು. ಅದೇ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ವಸಂತ ಸಾಹಿತ್ಯೋತ್ಸವದ ಅಂಗವಾಗಿ, ಸಾಹಿತ್ಯ ಪರಿಷತ್ತಿನವರು ಒಂದು ಯಕ್ಷಗಾನ ಮಂಡಲಿಯವರನ್ನು ಕರೆಯಿಸಿ ಯಕ್ಷಗಾನ ಪ್ರದರ್ಶನವೊಂದಕ್ಕೆ ಏರ್ಪಾಟು ಮಾಡಿದ್ದರು.

ಶಿಕ್ಷಣಸಮಿತಿಯವರು ಆರಿಸಿದ ಯಕ್ಷಗಾನ "ಕೃಷ್ಣಾರ್ಜುನರಕಾಳಗ" ಆ ಆಟವನ್ನು ನೋಡಲು ಕುತೂಹಲರಾಗಿ ಸಭಾಮಂದಿರದ ತುಂಬ ಕಿಕ್ಕಿರಿದ ಸಭಿಕ ಸ್ತೋಮದಲ್ಲಿ, ನಾನೂ ನಿಟ್ಟನೋಟದಿಂದ ಕುಳಿತಿದ್ದೆ.

ಪರದೆ ಏಳುತ್ತಲೂ, ಭಾಗವತರು, ಮೃದಂಗದವರು, ಶ್ರುತಿಯವರು ಒಟ್ಟು ಆರು ಜನರು ನಿಂತಿದ್ದುದು ಕಂಡುಬಂದಿತು. ಆಟದ ಉದ್ದಕ್ಕೂ ಅವರು ಅಲ್ಲೇ ನಿಂತು, ಹಾಡುಗಾರಿಕೆ ತಾಳ ಮೇಳಗಳನ್ನು ಒದಗಿಸುತ್ತಿದ್ದರು.

ಇತರ

೧ ನವೆಂಬರ್ ೧೯೪೫ ರಲ್ಲಿ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ-
ಶ್ರೀ ಕೊ. ಶಿ. ಕಾರಂತರ ಭಾಷಣ.

೨ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಆಶ್ರಮದಲ್ಲಿ April 1946
ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ನಾಡಿನ ಜನತಾ ಕಲಾ ಮಹೋತ್ಸವ

೩ ೧೯೪೬ ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ
ಸಾಹಿತ್ಯೋತ್ಸವ.

— ಇತ್ಯಾದಿ.

ಪರಿವಿಡಿ

ಅನಂತರ, ಯಕ್ಷಗಾನ ಪಾತ್ರಧಾರಿಗಳೆಲ್ಲರೂ ವೇಷ ಭೂಷಣಾಲಂಕೃತರಾಗಿ, ಒಬ್ಬೊಬ್ಬರಾಗಿ ಬಂದು, ಹಾಡಿ, ಕುಣಿದು, ತಮ್ಮ ತಮ್ಮ ಪಾತ್ರ ಪರಿಚಯವನ್ನು ಸಭಿಕ ವೃಂದಕ್ಕೆ, 'ಸಭಿಕ ಸರ್ವಜ್ಞರಿಗೆ' (!) ಮಾಡಿ ಕೊಟ್ಟು ಹಿಂದಕ್ಕೆ ಸರಿದು ನಿಷ್ಕ್ರಮಿಸಿದರು. ಅವರ ಆ ಕುಣಿತ ಆಕರ್ಷಣೀಯವಾಗಿತ್ತು; ಅದರಲ್ಲೇ ನುರಿತವರಿಗಲ್ಲದೆ, ಹಲವಾರು ವರ್ಷಗಳ ಸತತವಾದ ಅಭ್ಯಾಸ ಬಲವಿರುವರಿಗಲ್ಲದೆ, ಅದು ಸಾಧ್ಯವಿಲ್ಲವೆಂದು ತೋರಿತು. ಆಯಾ ಪಾತ್ರಗಳ ಪರಿಪುಷ್ಟಿಗೆ ಬೇಕಾದ ರಸಾವೇಶ, ಭಾವ ಪ್ರದರ್ಶನಾನುಗುಣವಾದ ನರ್ತನ, ಭಂಗಿ, ಅಭಿನಯ, ಇವು ಪ್ರತಿಯೊಬ್ಬ ವೇಷಧಾರಿಯಲ್ಲಿಯೂ ಕಾಣಬಂದಿತು. ಕೆಲವರಲ್ಲಿ, ನರ್ತನಾಭಿಲಾಷೆ ಅತಿರೇಕಕ್ಕೇರಿತೋ ಎಂಬ ಸಂದೇಹವೂ ಬರುವದಕ್ಕೆ ಆಸ್ಪದವಾಯಿತು, ನನಗೆ. ಏಕೆಂದರೆ, 'ಅರ್ಜುನ' ಕುಣಿದು ಕುಪ್ಪಳಿಸಿ ಅರಿರಾಯರ ಶಿರಗಳನ್ನು ಕತ್ತರಿಸಿ ಕೆಡವಿ ಚೆಂಡಾಡುವ ರಭಸಾವೇಶದಲ್ಲಿ, ಅವನ ಕೃತಕ ಕಿರೀಟ ತನ್ನ ಸ್ವಸ್ಥಾನವಾದ ಉತ್ತಮಾಂಗವನ್ನು ತ್ಯಜಿಸಿ, ಅನಿವಾರ್ಯವಾಗಿ ಧರಣೀ ದೇವಿಯ ಆಶ್ರಯವನ್ನು ಪಡೆಯಿತು! ಇರಲಿ! ಅದರಿಂದ ಅಂತಹ ಪ್ರಮಾದವೇನೂ ಆಗಲಿಲ್ಲ! ಮತ್ತೆ ಅದನ್ನು ತಲೆಗೇರಿಸಿ, ಬಲಗೈಯಿಂದ ಮುಡಿಯನ್ನು ಬಲವಾಗಿ ಅದುಮಿ ಹಿಡಿದು ನರ್ತನವನ್ನೇನೋ ಮುಂದಕ್ಕೆ ಅವ್ಯಾಹತವಾಗಿ ಸಾಗಿಸಿಯೇ ಸಾಗಿಸಿದ ಆ 'ಸವ್ಯಸಾಚಿ'!

ಪಾತ್ರಗಳು ಹಾಡಬೇಕಾದ ಹಾಡುಗಳನ್ನು ಅವರೊಂದಿಗೆ ಭಾಗವತನೂ, ಭಾಗವತನೊಂದಿಗೆ ತೆರೆಯ ಹಿಂದೆ ನಿಂತಿದ್ದ ಇತರ ಎಲ್ಲ ನಟ ವರ್ಗವೂ ಒಟ್ಟಾಗಿ ತಾರಸ್ಥಾಯಿಯಲ್ಲಿ ಕೂಗಿ ಹೇಳುತ್ತಿದ್ದುದರಿಂದ, ಗದ್ದಲವೇ ಹೆಚ್ಚಾಗಿತ್ತು ಹಾಡಿಗಿಂತ, ಎಂಬುದು ನನ್ನ ಅನುಭವಪೂರ್ಣ ಅಭಿಮತ. ಗಾನದ ಸಾಹಿತ್ಯ ಸೊಬಗು ಯಾರಿಗೂ ಮನವರಿಕೆಯಾಗುವಂತೆಯೇ ಇರಲಿಲ್ಲವೆನ್ನಬಹುದು.

'ಭೀಮ' ಬಂದ, ಭೀಮ ಭಯಂಕರವ್ಯಕ್ತಿ ಈತ. ಉರಿಯುವ ಪಂಜನ್ನು ಕೈಯಲ್ಲಿಹಿಡಿದು ಝುಳಪಿಸುತ್ತ ವಿಕಟಾಟ್ಟಹಾಸದಿಂದ ಎಣ್ಣೆಸೆಗಳನ್ನು ಮೂದಲಿಸುತ್ತ ಪ್ರೇಕ್ಷಕವರ್ಗದ ಸಭೆಯನ್ನು ಸೀಳಿಕೊಂಡು ನುಗ್ಗಿ, ತೂರಿಕೊಂಡು ರಂಗಸ್ಥಳಕ್ಕೆ ಒಂದೇನೆಗೆತದಲ್ಲಿ ನೆಗೆದು, ವೇದಿಕೆಗೆ ಜಿಗಿದು, ಪುಟಿನೆಗೆದು ಸೆಟೆದುನಿಂತ!

ವೀರರಸದ ವಿಸ್ತಾರ ಪ್ರದರ್ಶನಕ್ಕೂ ಪ್ರಚೋದನೆಗೂ ಯಕ್ಷಗಾನ ನಮ್ಮ ಜನಕ್ಕೆ ಸಿಕ್ಕಿರುವ ಅಮೂಲ್ಯ ಸಾಧನವೆಂಬುದು ಮನದಟ್ಟಾಯಿತು. ಸಿನಿಮಾ ಹಾಗೂ ನಾಟಕಗಳಿಗೆ ಆಗ ಸೋತಿದ್ದ ನನ್ನ ಮನಸ್ಸಿಗೆ, ಯಾವುದೊ ಒಂದು ಕಡೆಯಿಂದ ಮಲಯಮಾರುತ ಹೊಡೆದು ಬಡಿದೆಬ್ಬಿಸಿದಂತಾಗಿ, ನಮ್ಮ ಅಣ್ಣ ತಮ್ಮಂದಿರೂ, ಅಕ್ಕ ಗೆಳೆಯರ ಆಡಿ ನೋಡಿ ಆನಂದಿಸಿದ್ದ, ಈಗಲೂ ಆನಂದಿಸುತ್ತಿರುವ ಈ ಯಕ್ಷಗಾಯನಗಳ ಸೊಗಸನ್ನು ಸಹಜ ಸಾಹಿತ್ಯಸಂಪದೆಯನ್ನು ಸವಿಯಬೇಕೆಂಬ ಆಕಾಂಕ್ಷೆ ಬಲವಾಗಿ ಹುಟ್ಟಿತು.

"ಶಶಿರೇಖಾ ಪರಿಣಯ" ಎಂಬುದು ನಾನು ಆಗ ನೋಡಿದ ಎರಡನೆಯ ಬಯಲಾಟ. ಭಾಗವತ ರಂಗಸ್ಥಳದಲ್ಲೇ ಇದ್ದು ಎಲ್ಲವನ್ನೂ ಸಾಂಗವಾಗಿ ನೆರವೇರಿಸುವ ದಿಗ್ದರ್ಶಕನಾಗಿದ್ದ. 'ಬಾಲಗೋಪಾಲ' ನ ಪಾತ್ರ ಮನಮೋಹಕವಾಗಿತ್ತು. ಸುಂದರ ರೂಪದ ಬಾಲಕನೊಬ್ಬನನ್ನು ಆರಿಸಿ, ಮೈಗೆ ಶಾಮಲ ವರ್ಣವನ್ನು ಚನ್ನಾಗಿ ಪೂಸಿ, ಕಿರೀಟವಿಟ್ಟು, ಕೈಗೊಂದು ಕೊಳಲುಕೊಟ್ಟು ರಂಗಮಧ್ಯದಲ್ಲಿ ಮೋಹಕವಾಗಿ ನಿಲ್ಲಿಸಿದ್ದರು. ಹುಡುಗ ಹಾಡಿದ ಹಾಡಿನಲ್ಲಿ, ಶ್ರೀ ವಿಷ್ಣುವಿನ ಹತ್ತು ಅವತಾರಗಳ ಕತೆ ಬಹು ರಮ್ಯವಾಗಿ ಅಡಕವಾಗಿತ್ತು.

ಆಮೇಲೆ ಬಂದದ್ದು 'ಬಲರಾಮ'. ಬಲರಾಮ ಬರುವಾಗಲೇ ಕುಣಿಯುತ್ತ ತನ್ನ ಪ್ರತಾಪವನ್ನೆಲ್ಲ ಪರಾಕು ರೂಪವಾಗಿ ವಿವರಿಸಿದನಾದರೂ, 'ಕೃಷ್ಣ' ಅವನನ್ನು ಅನುಕರಿಸಲಿಲ್ಲ. ತಮ್ಮನ್ನು ಪರಿಚಯಮಾಡಿಕೊಳ್ಳುವಾಗ ಪ್ರಸಿದ್ಧ ದೇವಾಂಶಗಳ ಸಂಬಂಧಗಳನ್ನೆಲ್ಲ ಉದ್ದುದ್ದ ವಾಕ್ಯಗಳಲ್ಲಿ ವಿಸ್ತರಿಸಿ ಠೀವಿಯಿಂದ ಹೇಳಿದರು. ಇದರಲ್ಲೆಲ್ಲಾ ಘಟೋತ್ಕಚನ ಪರಿಚಯ ಭಾಷಣವಂತೂ ಚಮತ್ಕಾರ ಚಾಟೋಕ್ತಿಗಳಿಂದ ಪ್ರೇಕ್ಷಕರ ಮನವನ್ನಾಕರ್ಷಿಸಿ, ಅದರ ಉದ್ದವನ್ನೇ ಮರಿಸಿಬಿಟ್ಟಿತು. ಮಹಾಪ್ರಾಣಗಳ ಸರಣಿಯ ಸರಪಳಿಯಿಂದ ಅದು ಹೇಡಿಗಳ ಎದೆಯನ್ನು ಭೇದಿಸಿ, ಕೆಚ್ಚನ್ನು ಹೆಚ್ಚಿಸುವ ಪರಿಯಲ್ಲಿ ರಚಿತವಾಗಿತ್ತು. ಅದನ್ನು ಗಮನವಿಟ್ಟು ಆಲಿಸುತ್ತಿದ್ದ ನನಗೆ, ಯಕ್ಷಗಾನ ಸಾಹಿತಿಗಳ ಕುಶಲತೆಯ ಮೇಲೆ ಗೌರವ, ಪ್ರೀತಿ, ಆಸಕ್ತಿ ಹೆಚ್ಚಿದವು.

ಆಹ! ಅಭಿಮನ್ಯು- ಘಟೋತ್ಕಚರು ಅಂದು ಕುಣಿದ ರೀತಿ, ಆ ಠೀವಿ, ಆ ಜೋಕು, ನನಗೆ ಇಂದಿಗೂ ಮನೋಮಂದಿರದಲ್ಲಿ ಚೆನ್ನಾಗಿ ಕಾಣಿಸುತ್ತಿದೆ.

ಗದ್ಯ ಪದ್ಯಗಳ ಸಹಾಯವಿಲ್ಲದೆ, ಕೇವಲ ಕುಣಿತವೊಂದರಿಂದಲೇ ವಿವಿಧ ಭಾಗಗಳನ್ನು ಹೇಗೆ ಸುಸ್ಪಷ್ಟವಾಗಿ ಪ್ರದರ್ಶಿಸಿ, ನೋಟಕರಮೇಲೆ ಪ್ರಭಾವ ಬೀರಬಹುದೆಂಬುದನ್ನು ನಾನು ಆ ದಿನ ಅರಿತುಕೊಂಡೆ.

ಅಲ್ಲದೆ ಶಶಿರೇಖೆ-ಅಭಿಮನ್ಯು, ಕೃಷ್ಣ-ಸುಭದ್ರೆ, ಕೃಷ್ಣ-ಬಲರಾಮ, ಸುಭದ್ರೆ-ಬಲರಾಮ, ಅಭಿಮನ್ಯು-ಘಟೋತ್ಕಚ, ಇವರ ಸಂವಾದ ಸಾಹಿತ್ಯ ಬಹು ಸ್ವಾರಸ್ಯವಾಗಿತ್ತು. ಬಲರಾಮನನ್ನು ಸುಭದ್ರೆ ಬಗೆ ಬಗೆಯಾಗಿ ಬೇಡಿಕೊಳ್ಳು ವುದು, ಬಲರಾಮ ಪಾಂಡವರನ್ನು ತಿರುಕರು, ನಾಡಾಡಿಗಳು ಎಂದು ಮನ ಬಂದಂತೆ ಹೀಯಾಳಿಸಿ ನಿನ್ನೊಬ್ಬಳನ್ನು ಬಲವಂತವಾಗಿ ಅವರಿಗೆ ಕೊಟ್ಟಿದ್ದೇ ಸಾಕಾಗಿದೆ ಎಂದು, ತಿರಸ್ಕರಿಸುವದು, ಈ ಭಾಗದ ಸಾಹಿತ್ಯ ಬಹು ಚನ್ನಾಗಿತ್ತು. ಆದರೆ ಯಕ್ಷಗಾನದ ಮಟ್ಟ ತಟಕ್ಕನೆ ಆಕಾಶದಿಂದ ಪಾತಾಳಕ್ಕೆ ಇಳಿಯ ಬಹುದೆಂಬುದಕ್ಕೆ ನಿದರ್ಶನವೋ ಎಂಬಂತೆ, ಸುಭದ್ರೆ, ಅಲ್ಲೇ ರಂಗದಮೇಲಿದ್ದ ಕೋಡಂಗಿಯನ್ನು ನ್ಯಾಯಕ್ಕೆ ಕರೆಯುವಳು! ಅವನು ತನ್ನ ವಿವಿಧವಾದ ಚೇಷ್ಟೆ ಕುಹಕಗಳಿಂದ ಈ ಅಣ್ಣ ತಂಗಿಯರ ವಿವಾದವನ್ನು ಬಗೆ ಹರಿಸುವನು!

-- ಕೋಡಂಗಿಯ ಪಾತ್ರವೂ, ನನಗೆ ಹಿಡಿಸದೆ ಉಚಿಸದೆ ಇಲ್ಲ. ಮಧ್ಯೆ ಮಧ್ಯೆ ಅವನು ಬಂದು ಭಾಗವತನನ್ನು ಕೆಣಕಿ, ಅಪಹಾಸ್ಯಮಾಡಿ ಸಭಿಕರಿಗೆ ಉಲ್ಲಾಸವನ್ನುಂಟುಮಾಡುತ್ತಿದ್ದನು. ಅದೂ ಅಲ್ಲದೆ ಆಗಾಗ ಆಶುಸಂಭಾಷಣೆ ಯನ್ನು ಕೂಡ ರಚಿಸಿ ಇಡೀ ಸಭಿಕಸ್ತೋಮವನ್ನು ತನ್ನ ಹಾಸ್ಯಕ್ಕೊಳಪಡಿಸಿ ಕೊಂಡು, ನಗೆಗಡಲಿನಲ್ಲಿ ಮುಳಗಿಸುತ್ತಿದ್ದನು. ಆದರೂ ಅವನ ಪಾತ್ರದ ಮುಖ್ಯ ಗುರಿ, ನಟರನ್ನು ಸಭೆಗೆ ಪರಿಚಯ ಮಾಡಿಕೊಟ್ಟು, ಕಥಾ ಸಂವಿಧಾನದ ಅದುವರೆಗಿನ ಆಗು ಹೋಗುಗಳನ್ನು ಅರಿಕೆಮಾಡಿಸುವದು. ಯಾವ ಪಾತ್ರ ರಂಗಕ್ಕೆ ಬಂದರೂ, ಕೋಡಂಗಿ ಅವನನ್ನು "ನೀವು ದಾರು?" ಎಂದು ಪ್ರಶ್ನಿಸುವನು. ಆಗ ಆ ಪಾತ್ರ(ಧಾರನೇ)ವೇ ತನ್ನ ವಂಶ ಪರಂಪರೆ ಭುಜ ಬಲ ಪರಾಕ್ರಮ, ತಾನು ಬಂದ ಉದ್ದೇಶ, ಪ್ರಸಕ್ತಕಾರ್ಯ, ಎಲ್ಲವನ್ನೂ ಆಟಕ್ಕೆ ತಕ್ಕ ಬಹಿರೂಪ, ಬಹಿರೂಪಕ್ಕೆ ತಕ್ಕ ಧಿಮಿ ಧಿಮಿ ಕುಣಿತ, ಆ ಕುಣಿತಕ್ಕೆ ತಕ್ಕ ಮಾತಿನ ಜೋಡಣೆ ಸಹಿತ ವಿಜೃಂಭಣೆಯಿಂದ ವಿವರಿಸುವ ವನು. ಹೀಗೆ ಸಭೆಗೂ ನಟರಿಗೂ, ಪಾತ್ರಗಳಿಗೂ ನಡುವೆ ಸೇತುವೆಯೇ ಈ ಕೋಡಂಗಿ.

ಮುಖ್ಯ ನಾನು ಮೊದಲು ನೋಡಿದ ಈ ಯಕ್ಷಗಾನ ಪ್ರದರ್ಶನಗಳಿಂದ ನನಗೆ ಅದರ ಮೇಲಿನ ಮಮತೆ ಹೆಚ್ಚಿತು. ಸಹನೆ ಸಹಾನುಭೂತಿ ಎರಡೂ ಇದ್ದರೆ, ನಾವು ಅವುಗಳಲ್ಲಿನ ಸಂಗೀತ, ಸಾಹಿತ್ಯ, ನೃತ್ಯಭಾಗಗಳನ್ನು ಸುಲಭವಾಗಿ ಸವಿಯಬಹುದೆಂದೂ, ಕನ್ನಡ ಜನ ಜೀವನವನ್ನು ಇವುಗಳ ಪುನರುದ್ಧಾರದಿಂದ ಮಧುರತರವಾಗಿಯೂ, ಸುಂದರತರವಾಗಿಯೂ, ಹಸನಾಗಿಯೂ ಮಾಡಿಕೊಳ್ಳಬಹುದೆಂದು ನಾನು ಮನಗಂಡೆ. ಅದಕ್ಕಾಗಿ ಯಕ್ಷಗಾನ ಸಾಹಿತ್ಯದ ವ್ಯಾಸಂಗವನ್ನು ಪ್ರಾರಂಭಿಸಿದೆ.

೩. ಯಕ್ಷಗಾನ ಲಕ್ಷಣಗಳು ಮತ್ತು ರಂಗಭೂಮಿ

ಹೀಗೆ ಅನೇಕ ಯಕ್ಷಗಾನ ಪ್ರದರ್ಶನಗಳನ್ನು ನೋಡಿ, ಕೃತಿಗಳನ್ನು ಓದಿ, ಲಕ್ಷಣ ಗ್ರಂಥಗಳನ್ನು ಪರಿಶೀಲಿಸಿದಾಗ ಯಕ್ಷಗಾನವು ಮೂಲತಃ ನಾಟ್ಯಕ್ಕೆ ಸಂಬಂಧಿಸಿದ್ದು ಎಂದು ತಿಳಿಯಬಂದಿತು. ಇದರಲ್ಲಿ ತಾಳ ಮದ್ದಳೆ ಪ್ರಸಂಗ, ಎಂಬ ಪ್ರಭೇದಗಳೂ ಉಂಟು. ಇದಕ್ಕೆ ರಂಗಭೂಮಿಯ ಅಗತ್ಯವಿಲ್ಲ. ಒಬ್ಬರೇ ಬೇಕಾದರೂ ಓದಿಕೊಳ್ಳಬಹುದು. ಮಲೆನಾಡಿನಲ್ಲಿ ಸೊಯ್ ಎಂದು ಒಂದೇ ಸಮನೆ ಸೋನೆಮಳೆ ಹಿಡಿದು ಮನೆಯಿಂದ ಹೊರಕ್ಕೆ ವಾರಗಟ್ಟಲೆ ಹೊರಡಲವಕಾಶವಿಲ್ಲದಾಗ, ವೇಷ ಭೂಷಣಗಳಿಲ್ಲದೆ ಒಬ್ಬೊಬ್ಬರು ಒಂದೊಂದು ಪಾತ್ರವನ್ನು ವಹಿಸಿ ಕುಳಿತ ಕಡೆಯಲ್ಲಿಯೇ ಈ ಪ್ರಸಂಗವನ್ನು ವಾಚನ ಮಾಡಬಹುದು; ಉತ್ತಮ ರೀತಿಯಲ್ಲಿ ಕಾಲಹರಣ ಮಾಡಬಹುದು. ಇದಕ್ಕೆ 'ಬೈಟಕ್ಕು' ಎಂದೂ ಹೆಸರಿದೆ. ಪದ್ಯಗಳನ್ನು ತಾಳ ಮೃದಂಗ, ಶ್ರುತಿಗಳೊಂದಿಗೆ ಭಾಗವತರು ಹಾಡುವರು. ಇತರರು ಅದಕ್ಕೆ ಅರ್ಥವಿವರಣೆ ಮಾಡುವರು. ಇದು ಯಕ್ಷಗಾನದ ಶ್ರಾವ್ಯ ಪ್ರಭೇದವೆಂದಿಟ್ಟುಕೊಳ್ಳಬಹುದು. ಇಂತಹ ಪ್ರಸಂಗ ಪ್ರಾರಂಭವಾದ ಹಲವು ನಿಮಿಷಗಳಲ್ಲೇ ನಾವು ಅದರಲ್ಲಿನ ಅನೇಕ ಕೊರತೆ, ಕೃತಕತೆಗಳನ್ನು ಮರೆತು ಕತೆಯಲ್ಲೇ ತಲ್ಲೀನರಾಗಿ ಬಿಡುತ್ತೇವೆ. ಇಲ್ಲಿ ಕುಣಿತವಿಲ್ಲ. ರಂಗಸ್ಥಳದ ವೈಖರಿಯಿಲ್ಲ. ವೇಷ ಭೂಷಣಗಳ ಪ್ರದರ್ಶನವಿಲ್ಲ. ಬರಿಯ ಹಾಡು ಆ ಹಾಡಿಗೆ ವಿವರಣೆ ವ್ಯಾಖ್ಯಾನ ಇಷ್ಟೇ! ಆದರೂ ರಾವಣ, ಪ್ರಹಸ್ತ; ವಿಭೀಷಣ ಆಂಜನೇಯ— ಮೊದಲಾದ ಪಾತ್ರಗಳನ್ನು ಪ್ರತಿನಿಧಿಸುವವರ ವಾಕ್ಚಾತುರ್ಯ, ಕುಳಿತಲ್ಲೇ ಅವರು ಮಾಡುವ ಅಭಿನಯ, ಧ್ವನಿಯನ್ನು ಬದಲಾಯಿಸುವ, ಏರಿಸುವ, ಇಳಿಸುವ, ವಾದ ವಿವಾದ ಮಾಡುವ ಅವರ ತರ್ಕಸರಣಿ, ಪುರಾಣ ಪಾಂಡಿತ್ಯ ಇವುಗಳನ್ನು ನೋಡಿ, ಕೇಳಿ, ಮೋಹಗೊಂಡು ಆಕರ್ಷಿತರಾಗುತ್ತೇವೆ. ಮಾತನಾಡುವವರು ನಮ್ಮೂರ ತಿಮ್ಮ ಬೊಮ್ಮಂದಿರಲ್ಲ. ಆ ಪ್ರಾಕ್‌ಯುಗದ ಮಹಾ ವ್ಯಕ್ತಿಗಳಾದ ರಾಮ ಭೀಮರು ಎಂಬ ಭಾವನೆ ನಮ್ಮಲ್ಲಿ ಮೂಡಿಯೇ ಬಿಡುತ್ತದೆ! ಇದು ಈ ಬಗೆಯ ಯಕ್ಷಗಾನದ ಒಂದು ವಿಶೇಷ ವೈಶಿಷ್ಟ್ಯವೆಂದೂ ಹೇಳಬಹುದು. ಇದಕ್ಕೆ "ಜಾಗರಣೆ" "ಓದಿಕೆ" ಎಂಬ ಹೆಸರುಗಳೂ ಕೆಲವು ಕಡೆ ಪ್ರಚಾರ

ದಲ್ಲಿವೆ. ಈ ಬೈಟಕ್ಕುಗಳು ಮನರಂಜಕವಾಗಿಯೂ, ಬೋಧಪ್ರದವಾಗಿಯೂ ಇರುತ್ತವೆ. ಇಲ್ಲಿ ಬಂಡೆ—ಇದರ ಶಬ್ದ ಮೂರು ನಾಲ್ಕು ಮೈಲುಗಳವರೆಗೂ ಕೇಳುತ್ತದೆ ಎಂದು ಹೇಳುತ್ತಾರೆ!—ಎಂಬ ಒಂದು ಚಮನವಾದ್ಯವನ್ನು ಉಪ ಯೋಗಿಸುತ್ತಾರೆ. ಇಲ್ಲಿಯ ಪಾತ್ರದಾರರ ಆಶು ಸಂಭಾಷಣೆಗಳೂ, ವಿಮರ್ಶೆ ಗಳೂ ಸ್ವಾರಸ್ಯವಾಗಿರುತ್ತವೆ. ಪದ್ಯಭಾಗಗಳಿಗೆ, ಪಾತ್ರದ ಮಾತುಗಳಿಗೆ ಅರ್ಥವಿವರಣೆ ಮಾಡುವಾಗ ವ್ಯಾಖ್ಯಾನದ ಕಡೆಗೆ ಹೊರಳಿ, ಪ್ರಸಕ್ತಕಾಲದ, ಅಂದಿನ ಸಮಾಜದ ಪಾತ್ರಧಾರಿಗಳ ಊರಿನ ರಾಜಕೀಯದ ಮತ್ತಿತರ ಸಮ ಸ್ಯಾತ್ಮಕ ವಿಚಾರಗಳ ಕಡೆಗೂ ಈ ವ್ಯಾಖ್ಯಾನ ಚಾಚಬಹುದು. ವೈಯಕ್ತಿಕ ವೈಷಮ್ಯಗಳನ್ನು, ಪಕ್ಷಪ್ರತಿಪಕ್ಷಗಳ ವೈಷಮ್ಯವನ್ನು ಕೆರಳಿಸಿ ಕಿಡಿಕಾರಿಸುವುದೂ ಉಂಟು; ಇದೂ ಸಹ ಕೆಲವು ವೇಳೆ ಮುಖ್ಯ ಆಟದಂತೆಯೇ ಅನೇಕ ಗಂಟೆ ಗಳ ಕಾಲ ನಡೆಯಬಹುದು! ಯಕ್ಷಗಾನದ ಮೂಲ ಕೃತಿಯಂತೆ, ಇಲ್ಲಿಯೂ ಕಾಲ ಪರಿಮಿತಿ ಎಂಬುದಿಲ್ಲ। ಅನೇಕ ವೇಳೆ ಮೂಲ ಕೃತಿಯನ್ನೇ ಬದಿಗೊತ್ತಿ. ಇದೇ ಒಂದು 'ಪ್ರತ್ಯೇಕ ಪ್ರಸಂಗವೇ ಸೃಷ್ಟಿಯಾಗುವ ಮಟ್ಟಿಗೂ ಹೋದರೂ ಹೋಗಬಹುದು. ಈ ಪ್ರಗತಿ ಈಗಲೂ ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳ ಲ್ಲಿಯೂ ಕೊಡಗಿನ ಕಡೆಯೂ ಪ್ರಚಾರದಲ್ಲಿದೆ. ಅಲ್ಲಿಯವರು ಬಂದು ನೆಲೆ ಸಿರುವ ಇತರ ಸ್ಥಳಗಳಲ್ಲಿಯೂ ಆಗಾಗ ಉತ್ಸಾಹೀ ಮಂಡಲಗಳೇರ್ಪಟ್ಟು, ಪ್ರಸಂಗಗಳನ್ನು ನಡೆಸುತ್ತಾರೆ. ಮೈಸೂರಿನ ಶ್ರೀ. ವಿಠಲರಾಯರ ರಾಮ ಮಂದಿರದಲ್ಲಿ ಇಂತಹ ಬೈಟಕ್ಕುಗಳನ್ನು ಆಗಾಗ ಏರ್ಪಡಿಸುತ್ತಾರೆ.

ಯಕ್ಷಗಾನದ ಪಾತ್ರಗಳಲ್ಲಿ ಒಂದೊಂದನ್ನು ಒಬ್ಬೊಬ್ಬರು ಪ್ರತ್ಯೇಕವಾಗಿ ವಹಿಸುವುದು ಈಚೆಗೆ ಬಂದ ರೂಢಿ. ಹಿಂದೆ ಕ್ರಮವಾಗಿ ಒಬ್ಬನೇ ಇಬ್ಬರೇ ಆಮೇಲೆ ಮೂವರೇ ಎಲ್ಲಪಾತ್ರಗಳನ್ನು ನಿರ್ವಹಿಸುತ್ತಿದ್ದರೆಂದು ತಿಳಿದುಬರುತ್ತದೆ. ಗ್ರೀಕ್ ದುರಂತನಾಟಕಗಳಲ್ಲೂ ಮೊದಲು ಹೀಗೆ ಇದ್ದಿತೆಂದು ಹೇಳುತ್ತಾರೆ. ಅಲ್ಲಿಯ ಮೇಳ chorus ಇದ್ದಂತೆ ಇಲ್ಲಿನ ಭಾಗವತ. ಆದರೆ ಇಲ್ಲಿಯ ಭಾಗವತ, ಈಗಿನ ಚಲನಚಿತ್ರದ ದಿಗ್ದರ್ಶಕನಿದ್ದಂತೆ. ಅವನ ಸ್ಥಾನ ಬಹಳ ಪ್ರಮುಖವಾದುದು. ಯಕ್ಷಗಾನ ಪ್ರದರ್ಶನದ ಸೋಲು ಗೆಲವುಗಳೆಲ್ಲ ಇವನ ದಕ್ಷತೆ, ಸಾಮರ್ಥ್ಯ, ಅನುಭವ, ಬುದ್ಧಿಕುಶಲತೆಗಳನ್ನು ಅವಲಂಬಿಸಿರುತ್ತದೆ. ಭಾಗವತ ಸಪ್ಪೆಯಂದರೆ, ಆಟವು ಸಪ್ಪೆಯೇ. ಅವನು ಕುಶಲನಾಗಿದ್ದು,

ಮೂರು ಬಾರಿಯೂ ಕುಣಿತವಿದ್ದೇ ಇರುತ್ತದೆ. ಇದು ಯಕ್ಷಗಾನ ಪ್ರದರ್ಶನ ಬಗೆಯ ಪ್ರಮುಖ ವೈಶಿಷ್ಟ್ಯವೆಂದೇ ಹೇಳಬೇಕಾಗುತ್ತದೆ. ಕುಣಿತದಲ್ಲೇ ಭಾವವನ್ನು ತೋರಿಸುವ ಪ್ರಯತ್ನ ನಡೆಯುತ್ತದೆ. ಉತ್ತಮ ತರಗತಿಯ ನಟನಾದರೆ ಈ ಕುಣಿತದಿಂದ ಶರೀರವಿನ್ಯಾಸ, ಭಾವಪ್ರದರ್ಶನ ಅಂದವಾಗಿಯೇ. ಆಕರ್ಷಣೀಯವಾಗಿಯೇ ಇದ್ದು ಮೆಚ್ಚುವಂತಾಗುತ್ತದೆ. ಹಿಂದೆಯೇ ಹೇಳಿದಂತೆ ಇಷ್ಟೆಲ್ಲಾ ರೌದ್ರರಸ ಪ್ರತಿಪಾದನೆಯ ಕಡೆಗೇ ಇವರ ಒಲವು ಹೆಚ್ಚು ! ಏಕೆ, ಯಕ್ಷಗಾನಕ್ಕೆ ಕೆಲವು ಕಡೆ 'ಕಾಳಗ' ಎಂದೇ ಹೆಸರಿದೆ!

ಆಡುವ ಯಕ್ಷಗಾನಗಳಲ್ಲಿ ಎರಡು ವಿಧ. ಮೊದಲಿನದು ಪೂರ್ವರಂಗ ಅಥವಾ ಸಭಾಲಕ್ಷಣ. ಎರಡನೆಯದು ಕಥಾವಿಷಯಕ್ಕೆ ಸಂಬಂಧಪಟ್ಟಂತೆ ಇರುವ ಕಥಾವಸ್ತು.

ಈ ಪೂರ್ವರಂಗ ಅಥವಾ ಸಭಾಲಕ್ಷಣವು ಎಲ್ಲ ಆಟಗಳಲ್ಲಿಯೂ—ಕತೆ ಯಾವುದೇ ಆಗಿರಲಿ—ಒಂದೇ ಸಮನಾಗಿರುತ್ತದೆ. ಬದಲಾವಣೆ ಇಲ್ಲ. ಇದು 'ನಿತ್ಯ.' ಎರಡನೆಯದು ಕಥಾವಸ್ತುವಿನ ಬೆಳವಣಿಗೆ, ಆಯಾ ಕಥೆಯನ್ನನು ಸರಿಸಿ ಬೇರೆ ಬೇರೆಯಾಗಿರಬೇಕು. ಅದು 'ನೈಮಿತ್ತಿಕ.'

ಪೂರ್ವರಂಗ ಅಥವಾ ಪ್ರಸ್ತಾವನೆ (ಸಭಾಲಕ್ಷಣ)ಯಲ್ಲಿ ಕೋಡಂಗಿಗಳು, ಬಾಲಗೋಪಾಲರು (ನಿತ್ಯವೇಷ್ಯ—ಕಟ್ಟುವೇಷ), ಷಣ್ಮುಖ, ಸುಬ್ಬರಾಯ. ಅರ್ಧನಾರೀಶ್ವರ. ಸ್ತ್ರೀವೇಷ (ಯಕ್ಷಿಣಿ ಎಂದೂ ಹೆಸರು) ಇಷ್ಟು ಇರುತ್ತವೆ. ಇಲ್ಲಿ ಸ್ತ್ರೀವೇಷಕ್ಕೆ 'ಯಕ್ಷಿಣಿ' ಎಂಬ ಹೆಸರು ವಾಡಿಕೆಯಲ್ಲಿ ಬಂದಿರುವದು ಒಂದು ಗಮನೀಯ ವಿಷಯ ! ಕೋಡಂಗಿಯನ್ನು ವಿದೂಷಕ. ಹನುಮನಾಯಕ, ಮಾಧವಿ. ಕೊಕ್ಕೆಚಿಕ್ಕ ಮೊಲಾದ ಬೇರೆ ಬೇರೆ ಹೆಸರುಗಳಿಂದ ಕರೆಯುವ ಸಂಪ್ರದಾಯವಿದೆ. ಇವನು ಅನೇಕ ವೇಳೆ ಯಕ್ಷಗಾನದ ಸಕಲ ಪಾತ್ರಗಳನ್ನೂ ಸಭಿಕರಿಗೆ ಪರಿಚಯ ಮಾಡಿಕೊಡುವ ಸಾಹಸ ಮಾಡುತ್ತಾನೆ—ತನ್ನದೇ ಆದ ಒಂದು ರೀತಿಯಲ್ಲಿ. ಪಾಮರ ರಂಜನೆಗೆ ಈ ಪಾತ್ರ ಅನಿವಾರ್ಯ. ಈ ಪಾತ್ರವನ್ನು ವಹಿಸುವವನಿಗೆ ಸಾಮಾನ್ಯವಾಗಿ ಆ ಮೇಳದ ಇತರ ಎಲ್ಲ ವ್ಯಕ್ತಿಗಳಿಗಿಂತಲೂ ಹೆಚ್ಚು ಅನುಭವಸಂಪತ್ತು ಇರಬೇಕು. ಅಂತಹನನ್ನೇ ಈ ಪಾತ್ರವಹಿಸುವುದಕ್ಕೆ ಆರಿಸುತ್ತಾರೆ.

ಇನ್ನು ಎರಡನೆಯ ನೈಮಿತ್ತಿಕ ಭಾಗದಲ್ಲಿ ಆಯಾ ಕಥಾ ವಸ್ತುಗಳನ್ನನುಸರಿಸಿ ಪಾತ್ರಗಳು ಬಂದು ಕುಣಿದು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತವೆ.

ವೇಷವನ್ನು ಹಾಕುವ ಗೂಡಾರಕ್ಕೆ 'ಚೌಕಿ' ಎನ್ನುತ್ತಾರೆ. ಇದೇ ಸಂಸ್ಕೃತದ 'ನೇಪಥ್ಯ', ಇಂಗ್ಲೀಷ್‌ನ "Green room"

ಯಕ್ಷಗಾನ ಪ್ರದರ್ಶನವೊಂದು ಪ್ರಾರಂಭವಾಗುವುದು ಹೇಗೆ, ಅದನ್ನು ಕೊನೆಯವರೆಗೂ ನಿರ್ವಹಿಸುವುದಕ್ಕೆ ಅನುಸರಿಸಬಹುದಾದ ನಿಯಮಗಳೇನು ಎಂಬ ವಿಷಯಗಳು ಕಿಕ್ಕೇರಿ ಪುಟ್ಟಶಾಮಾಚಾರ್ಯರಿಂದ ರಚಿತವಾದ 'ಸಭಾವಂದನೆ' ಎಂಬ ಯಕ್ಷಗಾನ ಗ್ರಂಥದಲ್ಲಿಯೇ ಹೇಳಿದೆ. ಇದೊಂದು ಲಾಕ್ಷಣಿಕ ಯಕ್ಷಗಾನ. ಅಲ್ಲಿ ನಿರೂಪಿಸಲಾಗಿರುವ ಯಕ್ಷಗಾನದ ರಂಗ ಭೂಮಿಯ ವಿಷಯವನ್ನು ಸ್ಥೂಲವಾಗಿ ಈ ರೀತಿ ಸಂಗ್ರಹಿಸಬಹುದು.

ಗ್ರಂಥಾರಂಭದಲ್ಲಿ "ಸಭಾ ಸರ್ವಾಣಿ ವಂದನಂ" ಎಂದು ಪ್ರಾರಂಭವಾಗುವ ಒಂದು ಸಂಸ್ಕೃತ ಶ್ಲೋಕವನ್ನು ಹೇಳಿ ಸಭಿಕರಿಗೆಲ್ಲ ವಂದನೆಗಳನ್ನರ್ಪಿಸಿ ಮೊದಲು ವಿಘ್ನೇಶ್ವರನ ಸ್ತೋತ್ರ ಮಾಡಿದೆ.

ಯಕ್ಷಗಾನ ಪ್ರದರ್ಶನ ಪ್ರಾರಂಭವಾಗುವಾಗ ಪಾರ್ವತಿ, ಪರಮೇಶ್ವರ, ರಘುರಾಮ ಮೊದಲಾದ ಗುರು ದೇವತಾ ಪ್ರಾರ್ಥನೆಯನ್ನು ಮೊದಲು ಮಾಡಬೇಕು. ಈ ಪ್ರಾರ್ಥನಾ ಸ್ತುತಿಯನ್ನು ಮಾಡಬೇಕಾದವನು ಭಾಗವತ.

ಯಕ್ಷಗಾನ ರಂಗಸ್ಥಳವು 'ಪಂಚಹಸ್ತೇಷು ದಶಹಸ್ತ' ಉದ್ದವಿರಬೇಕು. ರಂಗಸ್ಥಳದ ಮೇಲೆ ಸಂಗೀತಗಾರ, ಮದ್ದಳೆಗಾರ, ಶೃತಿಗಾರ ಮತ್ತು ಭಾಗವತ ಇಷ್ಟು ಜನ ಅರ್ಧಚಂದ್ರಾಕೃತಿಯಲ್ಲಿ ರಂಗದ ಒಂದು ಪಾರ್ಶ್ವದಲ್ಲಿ ನಿಲ್ಲಬೇಕು. ಅವರಲ್ಲಿ ಸತ್ಯ, ಶೀಲ ಇರಬೇಕು! ಹೀಗಿದ್ದವರು ಹಾಗೆ ಮಾಡಿದರೇ ರಂಗಸ್ಥಳವು ಶುದ್ಧಿಯಾಗಿದ್ದು, ಶೋಭಾಯಮಾನವಾಗಿರುತ್ತದೆಯಂತೆ. ಇಂತಹವರು ಪ್ರದರ್ಶಿಸುವ ಯಕ್ಷಗಾನವನ್ನು ನೋಡುವ ಪ್ರೇಕ್ಷಕರೂ ಅದಕ್ಕೆ ತಕ್ಕ ಯೋಗ್ಯತೆಯುಳ್ಳವರಾಗಿರಬೇಕು! ಸಭಿಕರು ಮಿತವಚನರೂ, ಪ್ರಭಾವಿಜ್ಞರೂ, ಕೃತಜ್ಞರೂ, ಕೀರ್ತಿವಂತರೂ, ಸ್ತ್ರೀಯರು ತಮ್ಮ ತಮ್ಮ ಪುರುಷರೊಡನೆಯೂ,

ನೀತಿವಂತ ಗುಣವಂತರಾಗಿಯೂ, ಐಶ್ವರ್ಯವುಳ್ಳ(!)ವರಾಗಿಯೂ, ಸತ್ಯಶೀಲ ಸದಭಿರುಚಿಯುಳ್ಳವರಾಗಿಯೂ ಇರಬೇಕು!

ಭಾಗವತನನು ಯಕ್ಷಗಾನದಲ್ಲಿ ಬಹು ಮುಖ್ಯಪಾತ್ರವಾದ್ದರಿಂದ ಅವನ ಲಕ್ಷಣಗಳನ್ನು ವಿವರವಾಗಿ ಹೇಳಿದೆ. ಅವನು, ತತ್ವಜ್ಞನೂ, ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆದುಕೊಂಡವನೂ, ಭಯಭಕ್ತಿ ವಿನಯಾನ್ವಿತನೂ, ವಾಚಾಳಿಯೂ, ಚತುರನೂ ಆಗಿರಬೇಕು. ಅಷ್ಟೇ ಅಲ್ಲದೆ ಅವನು ಗರ್ವವರ್ಜಿತನೂ, ಭಕ್ತಿಭಾವದಿಂದ ಪುಳಕಿತನಾಗುವವನೂ, ವಾಕ್ಯಪಟುವೂ ಆಗಿರಬೇಕಂತೆ.

ಭಕಾರೋ ಭಕ್ತಿಭಾವೇಶ ಗಕಾರೋ ಗರ್ವ ವರ್ಜಿತ।
ವಕಾರೋ ವಾಕ್ಯಪಾಠೇನ ತಕಾರೋ ತತ್ತ್ವನಿರ್ಣಯ ॥

'ಭಾಗವತ' ಎಂಬ ಮಾತಿನಲ್ಲಿ ನಾಲ್ಕು ಅಕ್ಷರಗಳಿವೆ. ಈ ಒಂದೊಂದು ಅಕ್ಷರಕ್ಕೂ ಒಂದೊಂದು ಅರ್ಥವನ್ನು ಹೇಳಿದೆ. ಭಾ= ವಾಕ್ಪೂಜೆ, ಕರಪೂಜೆ. ಸಭಿಕರಲ್ಲಿ ಅವನಿಗೆ ಭಯಭಕ್ತಿ ವಿಶ್ವಾಸಗಳಿರಬೇಕು. ಗ=ಗರ್ವವನ್ನು ಬಿಟ್ಟಿರಬೇಕು. ವ = ವಾಕ್ಪಟುತ್ವವಿದ್ದವನಾಗಿರಬೇಕು; ಪದ್ಯಕಾರಗಳು ಚನ್ನಾಗಿರಬೇಕು. ತ = ತತ್ವವನ್ನರಿತುಕೊಂಡು ಪರವಾಸುದೇವನನ್ನು ತಿಳಿದವನಾಗಿರಬೇಕು! ಎಂದರೆ ಹಿರಿಯ ಅನುಭಾವಿಯಾಗಿರಬೇಕು ಎಂದಂತಾಯಿತು. ಎಷ್ಟು ದೊಡ್ಡ ಯೋಗ್ಯತೆಯ ಗುರಿ ಇಲ್ಲಿದೆ ಎಂಬುದನ್ನು ಇದರಿಂದ ಅರಿಯಬಹುದು.

ಇಂತಹ ಭಾಗವತ ಮಹಾಶಯನು ಉಪಯೋಗಿಸುವ ತಾಳಕ್ಕೂ ಲಕ್ಷಣಗಳನ್ನು ಹೇಳಿದೆ. ತಾಳದಲ್ಲಿ ಬ್ರಹ್ಮ, ವಾಯು, ಪರಮೇಶ್ವರರಿದ್ದಾರೆ. ತಾ ಎಂದರೆ ತಾಂಡವ ಸ್ವರೂಪಿ ಶಿವ. ಳ ಎಂದರೆ ಶಕ್ತಿದೇವಿ ಎಂದು ಇದಕ್ಕೆ ಅರ್ಥ ಹೇಳಿದ್ದಾರೆ. ಕೆಲವು ಕಡೆ ಈ ತಾಳದ ಬದಲು ಜಾಗಟೆಯನ್ನು ಉಪಯೋಗಿಸುವ ರೂಢಿ ಇದೆ.

ರಂಗಸ್ಥಳದಲ್ಲಿ ಹಾಡುವವರು ಸ್ಥಳ ನಿರ್ದೇಶವನ್ನು ಮಾಡದೆ, ವಾಮಭಾಗದಲ್ಲಿ ಮೃದಂಗ, ದಕ್ಷಿಣದಲ್ಲಿ ಸಂಗೀತಗಾರ ವಾದ್ಯಗಳು ಮತ್ತು ಹಿಂದುಗಡೆ ಶೃತಿ ಇರಬೇಕು. ಇದು ಸಭೆಯ ಸಪ್ತಾಂಗಲಕ್ಷಣ. ಈ ನಿಯಮಗಳನ್ನು

ಈಗಿನ ಸಂಗೀತ ಕಛೇರಿಗಳಲ್ಲೂ ಅನುಸರಿಸುವದನ್ನು ನೋಡಬಹುದು. ಮೃದಂಗದಲ್ಲಿ ಆದಿ, ಮಧ್ಯ ಮತ್ತು ಅಂತ್ಯ ಭಾಗಗಳಲ್ಲಿ ತ್ರಿಮೂರ್ತಿಗಳು ಸನ್ನಿಹಿತರಾಗಿರುವದರಿಂದ ಅದಕ್ಕೆ ಮೊದಲು ನಮಸ್ಕಾರಮಾಡಬೇಕು. ಆದಿತಾಳ ಎಂದ ಧ್ರುವ, ಮಟ್ಟೆ, ರೂಪಕ, ಝಂಪೆ, ತ್ರಿವುಡೆ, ಅಷ್ಟ, ಏಕ ತಾಳಗಳು ಹುಟ್ಟಿದವು. ನರ್ತನ ಮಾಡುವವನು ಗೆಜ್ಜೆಕಟ್ಟಿಕೊಂಡು ಈ ವಿವಿಧ ತಾಳಗಳಿಗನುಸಾರವಾಗಿ ನರ್ತನ ಮಾಡಬೇಕಂತೆ. ಅವನ ದೃಷ್ಟಿಯನ್ನು ಎರಡು ಹಸ್ತಗಳಮೇಲೂ, ಹಸ್ತಗಳಮೇಲೆ ಮನಸ್ಸೂ, ಮನಸ್ಸಿನಮೇಲೆ ಭಾವ, ಆ ಭಾವಕ್ಕೆ ತಕ್ಕಂತೆ ಒನಪು ಒಯ್ಯಾರಗಳಿರಬೇಕು.

ಇಷ್ಟು ಹೇಳಿದಬಳಿಕ ರಾಜ, ರಾಜ್ಯ, ಪ್ರಜೆಗಳ ಲಕ್ಷಣಗಳು, ಅವರಲ್ಲಿರಬೇಕಾದ ಪರಸ್ಪರ ಸಂಬಂಧಗಳನ್ನು ತಿಳಿಸಿಯಾದ ಅನಂತರ ನಕಲಿಯು ಭಾಗವತನನ್ನು ಕುರಿತು ನಾಟ್ಯ ಯಾರಿಂದ ಹುಟ್ಟಿತು ? ಎಂದು ಪ್ರಶ್ನಿಸುತ್ತಾನೆ. ತ್ರಿಮೂರ್ತಿಗಳಲ್ಲೊಬ್ಬನಾದ ಶ್ರೀ ಮಹಾವಿಷ್ಣುವು ಮೋಹಿನೀ ಅವತಾರವನ್ನು ತಾಳಿ ನಾಟ್ಯವಾಡಿ, ಆ ನೆವದಿಂದ ದುಷ್ಟನಾದ ಭಸ್ಮಾಸುರನನ್ನು ಸಂಹರಿಸಿದನು. ಅದೇ ನಾಟ್ಯದ ಮೂಲ ಎಂದು ಉತ್ತರ ಕೊಡುತ್ತಾನೆ ಭಾಗವತ. ಅನಂತರ ನಕಲಿಯ ಇಷ್ಟಾನುಸಾರ ಭಾಗವತ ಆ ಕತೆಯನ್ನು ಹೇಳುತ್ತಾನೆ ಅದು ಹೀಗೆ

ಭಸ್ಮಾಸುರನೆಂಬ ರಾಕ್ಷಸನು ಈಶ್ವರನ ಭಕ್ತನಾಗಿ, ತನ್ನ ಇಷ್ಟಾರ್ಥವನ್ನು ಪಡೆಯಲು ತಪಸ್ಸಿಗೆ ತೆರಳಿದನು. ಅವನ ಘೋರ ತಪಸ್ಸಿಗೆ ಮೆಚ್ಚಿಕೊಂಡು ಪರಮೇಶ್ವರನು ಪ್ರತ್ಯಕ್ಷನಾಗಿ ಭಸ್ಮಾಸುರನನ್ನು ವರ ಕೇಳಿಕೋ ಎಂದಾಗ ಅಸುರನು ವಿಚಿತ್ರ ವರವೊಂದನ್ನು ಕೇಳಿಕೊಳ್ಳುವನು. ತಾನು ಯಾರ ತಲೆಯಮೇಲೆ ಕೈಗಳನ್ನಿಡುವೆನೋ ಅವರು ತತ್‌ಕ್ಷಣವೇ ಮೃತ್ಯುವನ್ನು ಅಪ್ಪಬೇಕು ! ಎಂಬುವೇ ಅವನ ಬೇಡಿಕೆ. ಪರಶಿವನು 'ತಥಾಸ್ತು' ಎಂದೇ ಅಭಯ ನೀಡಿದನು. ಆದರೆ ಅಸುರ ಸಾಮಾನ್ಯನಲ್ಲ. ತನ್ನ ದುಷ್ಟತನ, ಕೃತಘ್ನತೆ, ರಾಕ್ಷಸತ್ವಗಳನ್ನು ತಕ್ಷಣವೇ ಪ್ರದರ್ಶಿಸಲು ಭಸ್ಮಾಸುರನು ಶಿವನ ಮಾತಿನ ಬೆಲೆಯನ್ನು ಅರಿಯಲು, ಶಿವನಮೇಲೆಯೇ ಆ ಪ್ರಯೋಗವನ್ನು ಮಾಡಲು ಇಚ್ಛಿಸುವನು ! ನಿನ್ನ ಮಾತಿನ ಸತ್ಯಾಸತ್ಯತೆಯನ್ನು

ಪರೀಕ್ಷಿಸಬೇಕಾದರೆ ನೀನೇ ಸರಿಯಾದವನು ಎಂದು ಮುಂದಾಲೋಚನೆ ಸ್ವಲ್ಪವೂ ಇಲ್ಲದೆ ಈಶ್ವರನ ತಲೆಯಮೇಲೆಯೇ ಕೈಯಿಡಲು ಪ್ರಯತ್ನಿಸಿ ವರ ಕೊಟ್ಟ ದೈವವನ್ನೇ ಬೆನ್ನಟ್ಟಿಸಿಕೊಂಡು ಓಡುವನು! ಪರಮೇಶ್ವರನೂ ರಾಕ್ಷಸಾಧಮನನ್ನು ಓಡಿಸಿಕೊಂಡು ತಾನೂ ಓಡುವನು. ಈ ಸನ್ನಿವೇಶದಲ್ಲಿ ಮಹಾವಿಷ್ಣುವು ಲೋಕೋತ್ತರ ಸೌಂದರ್ಯದ ಖನಿಯಾದ ಮೋಹಿನಿ ಅವತಾರವನ್ನು ತಾಳಿ, ತಟಕ್ಕನೇ ಅಸುರನಿಗೂ ಈಶ್ವರನಿಗೂ ಮಧ್ಯೆ ಕಾಣಿಸಿಕೊಳ್ಳುವನು. ಆ ಸುರ, ಸುಂದರಿಯ ಸಂದರ್ಶನದಿಂದ ಸೋತುಹೋದ ಭಸ್ಮಾಸುರ, ಈಶ್ವರ ತನಗೆ ಅನುಗ್ರಹಿಸಿದ ಆ ವರವನ್ನೂ, ಅದನ್ನು ಪರೀಕ್ಷೆ ಮಾಡಿ ನೋಡುವ ತನ್ನ ತವಕವನ್ನೂ ಆ ಪರೀಕ್ಷೆಗೆ ತಾನು ಗುರಿಮಾಡಬೇಕೆಂದಿದ್ದ ಈಶ್ವರ ಓಡಿಹೋಗುತ್ತಿರುವದನ್ನೂ, ಮರೆತು ಮೋಹಿನಿಯಲ್ಲೇ ಮೋಹಗೊಂಡು, ಆಕೆಯನ್ನು ಅಡ್ಡಗಟ್ಟಿ, ಒಲಿಸಿಕೊಳ್ಳುವ ಚಾಪಲ್ಯಕ್ಕೆ ಒಳಗಾಗುವನು.

ಮೋಹಿನಿಯು ಭಸ್ಮಾಸುರನನ್ನು ವರಿಸಲು ಸಿದ್ಧಳಾದವಳಂತೆ ನಟಿಸಿ, ಒಂದು ಕರಾರನ್ನು ಸೂಚಿಸುವಳು. ತಾನು ಎಲ್ಲ ಕಲೆಗಳನ್ನು ಬಲ್ಲವಳಾದ್ದರಿಂದ ತನ್ನನ್ನು ಒಲಿಯುವ ಪುರುಷನೂ ಹಾಗೇ ಇರಬೇಕೆಂದು ತನ್ನಿಚ್ಛೆಯಾದುದರಿಂದ ಮೊದಲು ನಾಟ್ಯಕಲೆಯನ್ನು ಅಸುರನು ಕಲಿಯಬೇಕೆಂದು ಹೇಳಿ, ಅದನ್ನು ತಾನೇ ಕಲಿಸಿಕೊಡುವೆನೆಂದೂ ಒಪ್ಪಿಕೊಂಡು ಮೊದಲು ಗುರುವಾದಳು! ಆಕೆಯ ಸೌಂದರ್ಯದಿಂದ ಆಕರ್ಷಿತನಾಗಿ ಮೋಹದ ಬಲೆಯಲ್ಲಿ ಸಿಕ್ಕುಬಿದ್ದಿದ್ದ ಅಸುರನಿಗೆ ಯಾವ ಇತರ ಯೋಜನೆಯೂ ಹೊಳೆಯಲವಕಾಶವಿಲ್ಲದೆ, ಮೋಹಿನಿಯು ಹೇಳಿದ್ದಕ್ಕೆಲ್ಲ ಹೂಗುಟ್ಟುವನು. ಸರಿ ನಾಟ್ಯಶಾಸ್ತ್ರ ಶಿಕ್ಷಣ ಪ್ರಾರಂಭವಾಯಿತು. ಈ ಶಿಕ್ಷಣ ಕ್ರಮದಲ್ಲಿ ಅಂಗಾಂಗ ಚಲನೆ ಮಾಡಿತೋರುತ್ತ, ಹಾಗೆಯೇ ಅವನಿಂದ ಮಾಡಿಸುತ್ತಾ, ಎಲ್ಲವನ್ನೂ ಪೂರ್ಣ ಮರೆಸಿದ ಮೋಹಿನಿ ಕೊನೆಗೆ ಒಮ್ಮೆ ತನ್ನ ಎರಡೂ ಕೈಗಳನ್ನು ಎತ್ತಿ ತಲೆಯಮೇಲೆ ಇಟ್ಟುಕೊಳ್ಳುವ ಅದೊಂದು ಅಪೂರ್ವ ಭಂಗಿಯನ್ನು ಪ್ರದರ್ಶಿಸುವಳು. ನಾಟ್ಯರಾಣಿಯಲ್ಲೂ, ಆಕೆಯ ನಾಟ್ಯಭಂಗಿಯಲ್ಲೂ ಪೂರ್ಣ ಪರವಶನಾಗಿದ್ದ ಭಸ್ಮಾಸುರ, ಆ ರೂಪರಾಶಿಗೆ ಸೋತು ಈಶ್ವರನ ವರವನ್ನು ಮರೆತು ವಿವೇಕ ಶೂನ್ಯನಾಗಿ ಈ ಭಂಗಿಯನ್ನು ಬಹಳ ಚೆನ್ನಾಗಿ

ಹೆಮ್ಮೆಯಿಂದ ಪ್ರದರ್ಶಿಸುವನು – ನಾಟ್ಯಶಾಸ್ತ್ರ – ಪ್ರಯೋಗ–ಪೂರ್ಣ ತನ್ನ ಕರಗತವಾಗಿ ಈ ಮನಮೋಹಿನಿಯು ತನಗೇ ದಕ್ಕಿದಳೆಂಬ ಸಂತೋಷದಿಂದ! ತನ್ನಕೈಗಳನ್ನು ತಲೆಯಮೇಲೆ ಇಟ್ಟುಕೊಂಡ ತತ್‌ಕ್ಷಣ ಶಿವನ ವರ ಫಲಿಸಿ ಅಸುರನು ಭಸ್ಮವಾಗಿ 'ಭಸ್ಮಾಸುರ'ನೆಂಬ ಅನ್ವರ್ಥಕನಾಮವನ್ನು ಪಡೆದು ಕೀರ್ತಿಶೇಷನಾದನು !

ಈ ಮೋಹಿನಿಯ ನಾಟ್ಯವೇ ಈ ಶಾಸ್ತ್ರದ ಮೂಲ ಎಂದು ಹೇಳಿ ಭಾಗವತ, ಮಾನವ ಜನ್ಮ ಬರುವದು ದುರ್ಲಭ. ಪೂರ್ವದಲ್ಲಿ ಮಾಡಿದ ಅಪಾರ ಪುಣ್ಯದಿಂದ ಮನುಷ್ಯನಾಗಿ ಜೀವ ಹುಟ್ಟಿದಾಗ 'ದೇಹಿ' ಎಂದವರಿಗೆ 'ನಾಸ್ತಿ' ಎನ್ನದೆ ದಾನಧರ್ಮ ಕಾರ್ಯಗಳನ್ನು ಮಾಡುತ್ತ ಗುರುಮುಖೇನ ದೇವರನ್ನು ಕಾಣುವ ಯತ್ನ ಮಾಡಬೇಕು ಎಂದು ಹೇಳಿ, ಪಾಪಕ್ಷಯಕ್ಕೆ ಶ್ರೀಹರಿ ಸ್ಮರಣೆಯನ್ನು ಮಾಡುತ್ತೇನೆ ಎನ್ನುವನು.

ಅನಂತರ "ಬಾಲ ಗೋಪಾಲರು" ಬಂದು ಭಾಗವತ, ತಾಳ, ಮೃದಂಗ, ಶ್ರುತಿ, ಮತ್ತು ಸಭಿಕರಿಗೆ ವಂದನೆ ಮಾಡಿ ಗೆಜ್ಜೆಗಳನ್ನು ಕಟ್ಟಿಕೊಂಡು ತೆರೆಯನ್ನು ಎರಡು ಬೆರಳುಗಳಿಂದ ಹಿಡಿದುಕೊಂಡು ಈ ಶ್ಲೋಕವನ್ನು ಹೇಳಬೇಕು.

"ನಾರಾಯಣ ಜಗನ್ನಾಥ | ಶಂಖ ಚಕ್ರಗಧಾಧರಾ |
ಲಕ್ಷ್ಮೀಕಾಂತ ಜಗನ್ಮೋಹ | ಮುಕುಂದೋ ಗರುಡಧ್ವಜಂ ||"
"ಝುಂಕಿಣೀ ||
ಥಾ ತೈಯಾ ತೈದತ್ತಾ ತ್ತಾಂ | ತಕ್ಕಿಟ ಧಿಮಿಕ್ಕಿಟ ಪಳಾಂಗತೋ |
ತಕ್ಕಿಟತೈ | ತಕ್ಕಿಟತೈ ತಾತೈ |
ತಾತೊಂಗ ತಕ್ಕಾತದಿ ಗಿಣಿತೊ ||"

ಇದನ್ನು ಹೇಳಿಕೊಂಡೇ ಕುಣಿಯುವರು. ಕುಣಿಯುತ್ತಲೇ ಮೇಲೆ ಹೇಳಿದಂತೆ ಎರಡು ಬೆರಳುಗಳಿಂದ ತೆರೆಯನ್ನು ಹಿಡಿದುಕೊಂಡೇ ಮುಂದೆ ಬರಬೇಕು. ಆಮೇಲೆ ಮತ್ತೆ ಕುಣಿತ. ನಕಲಿಗೂ ಭಾಗವತನಿಗೂ ಸಂಭಾಷಣೆ. ಇದನ್ನು ಬಹು ಮಟ್ಟಿಗೆ ರಂಗದ ಮೇಲೆಯೇ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಸಿಕೊಂಡು ಸಭಿಕರಿಗೆ ಸಂತೋಷವಾಗುವಂತೆ, ಆಶು ಸಂಭಾಷಣೆಯನ್ನು ನೇಯ್ದು ಪ್ರೇಕ್ಷಕ ವರ್ಗವನ್ನು ನಗಿಸುತ್ತಾರೆ.

ಮೇಲಿನ 'ತಕ್ಕಿಟ' ಹೇಳಿ ಕುಣಿಯುವಾಗಲೇ ನಕಲಿಯು ಅದನ್ನು ಆಲಿಸಿ ಕೇಳಿ 'ನನ್ನ ತಲೆ ತಿರುಗುತ್ತದೆ' ಎನ್ನುತ್ತಾನೆ. ಭಾಗವತನು ಆಗ ಉಚ್ಚಾರಣೆಯನ್ನು ನಿಧಾನವಾಗಿಯೂ, ಸ್ಪಷ್ಟವಾಗಿಯೂ ಹೇಳಲು ಪ್ರಯತ್ನ ಮಾಡುತ್ತಾನೆ. ಆಗಲೂ ನಕಲಿ 'ನನ್ನ ಹಲ್ಲು ತಿರುಗುವುದಿಲ್ಲ' ಎನ್ನುತ್ತಾನೆ. ಇದಾದ ಬಳಿಕ ನಕಲಿ ತಮ್ಮ ಆಟವನ್ನು ಆಡಿಸುವವರಿಗೆ, ನೋಡಿದವರಿಗೆ ಶ್ರೇಯಸ್ಸನ್ನು ಕೋರಿ, ಉಳಿದವರಿಗೆ ಶಾಪವನ್ನೂ ಹಾಕುವನು. ಇದೊಂದು ವಿಶಿಷ್ಟ ರೂಪವಾದ ವಂದನಾರ್ಪಣೆ !

"ನಮ್ಮಾಟ ನೋಡದೇ ಗುಲ್ಲು ಮಾಡುವವರ ಮನೆಗೆ ಬೆಂಕಿ ಬಿತ್ತೋ ಬಿತ್ತು. ನಮ್ಮ ಆಟ ಆಡಿಸಿ ಹಣ ಕೊಡದೇ ಹೋದವರ ತಲೇ ಮೇಲೆ ಎತ್ತ ಲಾರದ ಕಲ್ಲು ಬಿತ್ತೋ ಬಿತ್ತು" ಎಂದು, ತಮಗೆ ಅನುಕೂಲರಾದ ಪ್ರೋತ್ಸಾಹ ಕೊಟ್ಟವರನ್ನು ಹೊಗಳುವುದರ ಜೊತೆಗೆ, ಪ್ರತಿಕೂಲರಾದವರನ್ನು ಬಿರುನುಡಿ ಗಳಿಂದ ಬೈದು ಶಾಪ ಹಾಕುತ್ತಾನೆ.

ಅನಂತರ ತ್ರಿಮೂರ್ತಿಗಳು, ವಾಯು, ಇಂದ್ರ, ಅಗ್ನಿ, ದಿಕ್ಪಾಲಕರುಗಳ ಸ್ತುತಿ ಮಾಡಿ, ಮತ್ತೆ ಗೋವಿಂದನ ಮಹಿಮೆಯನ್ನು ಕೊಂಡಾಡಿ, ಅನಂತರ ದೀರ್ಘವಾದ ವಿಘ್ನೇಶ್ವರನ ಪೂಜೆ, ಸ್ತುತಿ ಪ್ರಾರಂಭವಾಗುತ್ತದೆ. ರಂಗಸ್ಥಳ ದಲ್ಲಿಯೇ ವಿನಾಯಕನ ವಿಗ್ರಹವನ್ನಿಟ್ಟು, ಪೂಜೆ ಮಾಡಿ ಮಂಗಳಾರತಿ ಮಾಡು ತ್ತಾರೆ.

ಈ ಮಧ್ಯೆ ನಕಲಿಯ ಹಾಸ್ಯ ನಡದೇ ಇರುತ್ತದೆ. ನಕಲಿಗೂ-ಭಾಗವತ ನಿಗೂ ನಡೆಯುವ ಸಂಭಾಷಣೆ ಗಮನಾರ್ಹವಾದುದು. ಈ ನಕಲಿ ಫಲವಾದಿ ದೇವತೆಗಳನ್ನು ಹಂಗಿಸುವದಕ್ಕೂ ಇವನು ಹೋಗುವುದಿಲ್ಲ. ರಂಗದ ಮೇಲೆ ಬಂದ ಪಾತ್ರಗಳಿಗೆಲ್ಲ ಪ್ರಶ್ನೆಗಳನ್ನು ಹಾಕಿ, ಅವರಿಂದ ಉತ್ತರ ಪಡೆದು, ಸಭಿ ಕರಿಗೆ ಅವರ ಪರಿಚಯ ಮಾಡಿಕೊಡುವುದರ ಜೊತೆಗೆ, ನಕಲಿ ಹಾಸ್ಯವನ್ನು ಸೃಷ್ಟಿಸಿ ಪ್ರೇಕ್ಷಕರನ್ನು ಉಲ್ಲಾಸಗೊಳಿಸುತ್ತಾನೆ. ಇದರಿಂದ ಸಭಿಕರ ಅನೇಕ ಅನುಮಾನಗಳು ಪರಿಹಾರವಾಗುತ್ತವೆ. ಸಂಪ್ರದಾಯಕನಿಗೂ ಆಧುನಿಕ ನಾಗರಿಕನಿಗೂ ಮಧ್ಯೆ ನಡೆಯುವ ಸಹಜ ಸಂಭಾಷಣೆಯಂತಿರುತ್ತದೆ ಇದು. ಧಾರ್ಮಿಕ ಸಾಮಾಜಿಕ ದೃಷ್ಟಿಗಳೆರಡೂ ಇಲ್ಲಿ ಕಾಣಬರುತ್ತವೆ. ಇವೆಲ್ಲಾ

ಯಥಾ ಸಾವಕಾಶವಾಗಿಯೇ ನಡೆಯುತ್ತವೆ. ಮಧ್ಯೆ ಮಧ್ಯೆ ಅನೇಕ ಸಂಸ್ಕೃತ ಶ್ಲೋಕಗಳನ್ನೂ, ಅಮರ ಕೋಶದಿಂದ ಶ್ಲೋಕಗಳನ್ನೂ ಉದಾಹರಿಸುತ್ತಾರೆ.

ನಕಲಿಯ ಒಗಟುಗಳು, ಭಾಗವತ ಅವನ್ನು ಬಿಡಿಸುವುದು, ಪೂಜೆ ಮಾಡಿದರೆ ಏನಾಗುವುದು, ದೇವರು-ಇಲ್ಲಿ ವಿಘ್ನೇಶ್ವರ-ಅಲ್ಲಿಂದ ಇಲ್ಲಿಗೇಕೆ ಬಂದ ಮೊದಲಾದ ಪ್ರಶ್ನೆಗಳು, ಅವುಗಳಿಗೆ ಭಾಗವತ ಉತ್ತರ ಹೇಳುವುದು; ಇವೆಲ್ಲದರ ಮುಖ್ಯ ಉದ್ದೇಶ ಹಾಸ್ಯದ ತೆರೆಯನ್ನು ಎಬ್ಬಿಸುವುದೇ ಆಗಿದೆ. ಗಣಪತಿ ಷಣ್ಮುಖ, ಪಾರ್ವತಿ, ಪರಮೇಶ್ವರರೆಲ್ಲರೂ ರಂಗದ ಮೇಲೆ ಬಂದು ಪ್ರತ್ಯಕ್ಷವಾಗಿ ಈ ಸಂಭಾಷಣೆಯಲ್ಲಿ ಪಾಲುಗೊಳ್ಳುತ್ತಾರೆ! ನಕಲಿಯೊಂದಿಗೆ ಅವರೂ ನಕಲಿ ಮಾಡುತ್ತಾರೆ. ಅವನ ನಕಲಿಗೂ ಪಕ್ಕಾಗುತ್ತಾರೆ. ಭಾಗವತ ಮಾತ್ರ ನಕಲಿಯನ್ನು ಎಚ್ಚರಗೊಳಿಸಿ ಭಕ್ತಿಯನ್ನೇ ಬೋಧಿಸುತ್ತಾನೆ. ಯಾವ ಪಾತ್ರವೂ ನಕಲಿಯ ಹಾಸ್ಯದವರೆಗೆ ಸಿಗದೆ ಬಿಡಿಸಿಕೊಳ್ಳುವಂತೆಯೇ ಇಲ್ಲ. ಇದು ಕೊಂಚ ಸ್ವಾರಸ್ಯವಾಗಿರುವುದರಿಂದ ಇಲ್ಲಿ ಆಯ್ದ ಕೆಲವು ಭಾಗಗಳನ್ನು ಕೊಟ್ಟಿದೆ—

ಮೇಲೆ ಹೇಳಿದಂತೆ ರಂಗದ ಮೇಲೆ ತಂದ ವಿಘ್ನೇಶ್ವರ ವಿಗ್ರಹವನ್ನು ನೋಡಿದ ನಕಲಿ "ಕಪ್ಪಗೆ, ಬೆಳ್ಳಗೆ ಪರ್ವತದೋಪಾದಿಯಲ್ಲಿ ಬಂದು ರಂಗಸ್ಥಲದಲ್ಲಿ ಮಂಡಿಸಿರುವರಾರು?" ಎಂದು ಭಾಗವತನನ್ನು ಕೇಳುತ್ತಾನೆ. ಭಾಗವತನು ಈ ರೀತಿ ಹಾಸ್ಯ ಮಾಡಿ ಲಘುವಾಗಿ ಮಾತನಾಡಕೂಡದೆಂದೂ, ಭಕ್ತಿಯಿಂದ ಪ್ರಶ್ನೆ ಮಾಡಿದರೆ ಮಾತ್ರ ಉತ್ತರ ಹೇಳುವೆನೆಂದೂ ಹೇಳಿ, ನಕಲಿಯನ್ನು ಎಚ್ಚರಿಸಿ, ಈ ರೀತಿ ಅಲ್ಲಿ ಬಂದು ಕುಳಿತಿರುವವನು ಕೈಲಾಸಕ್ಕೆ ಅಧಿಪತಿಯಾದ ಸಾಂಬಶಿವನ ಸುತ ಸಿದ್ಧಿವಿನಾಯಕ ಎನ್ನುತ್ತಾನೆ. ಅವನು ಬೇಡಿದ ವರಗಳನ್ನು, ಇಷ್ಟಾರ್ಥಗಳನ್ನು ದಯಪಾಲಿಸುವನೆಂಬುದನ್ನು ಕೇಳಿದ ನಕಲಿಯು, ತನಗೆ ೧೦೦೦ ವರಹ ಸರ್ಕಾರಕ್ಕೆ ಕೊಡಲು ಬೇಕಾಗಿದೆಯೆಂದೂ, ಅದನ್ನು ಸಿದ್ಧಿವಿನಾಯಕನು ಕೊಡುತ್ತಾನೆಯೋ ಎಂದೂ ಕೇಳುವನು. ವಿನಾಯಕ ಕೊಡದಿದ್ದರೆ ದೀವಟಿಗೆಯಭಾವನ ಕೈಯಲ್ಲಿ ವಸೂಲ್ಮಾಡುವೆನು ಎಂದೂ ಹೇಳುವನು!

ಭಾಗವತ : ನಿನ್ನಲ್ಲಿ ಏನಾದರೂ 'ಐವಜು' ಇದ್ದರೆ ಸಾಹುಕಾರರಲ್ಲಿ ಒತ್ತೆ ಇಡು, ಹಣ ಸಿಕ್ಕುತ್ತದೆ.

ನಕಲಿ : ಅಂತಹ ಐವಜು ನನ್ನಲ್ಲಿದ್ದಿದ್ದರೆ ನಾನು ಈ ಬದುಕಿಗೇಕೆ ಬರುತ್ತಿದ್ದೆ?

ಭಾವಗತ : ಹಾಗಾದರೆ ಭಕ್ತಿಯಿಂದ ದೇವರನ್ನು ಪೂಜಿಸಿದರೆ ಬಯಸಿದ್ದು ಸಿಗುತ್ತದೆ.

ನಕಲಿ : ಒಂದು ನೂರು ಹೇರು ರಾಯಪುಡಿ ಸಕ್ಕರೆ ತರಿಸಿದ್ದೇನೆ !

ಭಾಗವತ : ಬೆಳ್ಳೀ ಪರಾತದಲ್ಲಿಟ್ಟು ವಿನಾಯಕನಿಗೆ ಸಮರ್ಪಿಸು,

ನಕಲಿ : ಸಕ್ಕರೆ ಎಂದರೆ ತಿಂದೇನಂದೀರಾ ? ಮಕ್ಕಳು ಮರಿಗಳಿಗೆ ಮಧ್ಯಾಹ್ನವೇ ಸಮರ್ಪಣೆಯಾಗಿ ಈಗ ಉಳಿದಿರುವುದು ಬೀದಿಯ ಮರಳೇ !

ಹೀಗೆಯೇ ಕಡಲೆ, ಬೆಲ್ಲ, ತೆಂಗಿನಕಾಯಿ (ಕರಟವನ್ನು "ಕಾಯಿಯ ತಾಯಿ" ಎಂದು ಹೇಳಿರುವುದು ಚೆನ್ನಾಗಿದೆ !), ರಸತಾಳೆ ಕಬ್ಬು ಎಂದು ಕ್ರಮವಾಗಿ ಒಂದೊಂದನ್ನು ಹೇಳಿ ನಕಲಿ ಕೊನೆಗೆ ಏನೂ ಇಲ್ಲವೆನ್ನುತ್ತಾನೆ ! ಭಾಗವತನನ್ನು ಗೇಲಿ ಎಬ್ಬಿಸುತ್ತಾನೆ. ಬಳಿಕ ನಕಲಿ ಕೆಲವು ಒಗಟುಗಳನ್ನು ಹೇಳಿ ಭಾಗವತನನ್ನೂ ಬಿಡಿಸಲು ಹೇಳುತ್ತಾನೆ.

"ಅಡ್ಡ ಕೋದರೆ ಚಕ್ರ, ಉದ್ದ ಕೋದರೆ ಶಂಖ, ತಿಕ್ಕಿದರೆ ದೈವಪರಿಮಳ, ಕಡಗೋಲಾಂಗೆ ಅಡೀಲಿ ಜುಟ್ಟು ಮೇಲೆ ಜಲ್ಲಕಂಡರೆ ಶ್ವೇತ"—ಇದು ಏನು ಹೇಳು ಎನ್ನುತ್ತಾನೆ. ಭಾಗವತನಿಗೆ ಇದು ಅರ್ಥವಾಗದೆ ಹಣ್ಣು, ಸಕ್ಕರೆ, ಮುತ್ತು, ರತ್ನ, ವಜ್ರ, ವೈಢೂರ್ಯ ಎಂದು ಏನೇನೊ ಹೇಳುತ್ತಾನೆ. ಕೊನೆಗೆ ನಕಲಿ ನಗುತ್ತಾ ತಾನೇ ಒಗಟನ್ನು ಬಿಡಿಸಿ ಈರುಳ್ಳಿ, ಬೆಳ್ಳುಳ್ಳಿ ಬಹಳ ಶ್ರೇಷ್ಠವೆನ್ನುತ್ತಾನೆ. ಇಲ್ಲಿ 'ಕುಂದಾಪುರದ ಕುಂಪಣ್ಣೈಯನ ಅಂಗಡಿ' ಎಂಬ ಮಾತು ಬರುವುದರಿಂದ ಕವಿ ಅತ್ತ ಕಡೆಯವನೇನೋ ಎಂಬ ಊಹೆಗೆ ಆಸ್ಪದವಿದೆ.

ಆನಂತರ ಭಾಗವತನನ್ನು ಬಿಟ್ಟು ದೀವಟಿಗೆಯ ಭಾವನನ್ನು ಪರಿ ಪರಿಯಾಗಿ ಹಾಸ್ಯ ಮಾಡುತ್ತಾನೆ ನಕಲಿ. ಸಭಿಕರಿಗೆ ಬೇಜಾರು ಕಡಿಮೆ ಮಾಡಿ ಹಾಸ್ಯ ಒದಗಿಸುವ ಉದ್ದೇಶ ಇಲ್ಲಿದೆಯಾದರೂ ಈ ಹಾಸ್ಯ ಮಾತ್ರ ಲಘುವಾಗಿಯಾಗಲೀ, ಗಂಭೀರವಾದುದಾಗಲೀ, ಮೇಲ್ತರಗತಿಯದ್ದಾಗಲೀ ಆಗಿಲ್ಲ.

ಅಲ್ಲಲ್ಲಿ ಹಲವು ಮಾತಿನ ಕಿಡಿಗಳು ಸೊಗಸಾಗಿವೆ. ಇವನ ಹಾಸ್ಯದ ಹರಟೆಯನ್ನು ಕೇಳಿ ಭಾಗವತ 'ಚಿಕ್ಕಂದ ಮಾತನಾಡುತ್ತೀಯೆ, ಚಿಕ್ಕಂದಿನಿಂದ ಅದೇ ಪಾಟ' ಎಂದು ನಕಲಿಯ ದುರ್ಗುಣಗಳನ್ನು ಎತ್ತಿ ಆಡಿ ಆಕ್ಷೇಪಿಸುತ್ತಾನೆ. ಈ ಹಾಸ್ಯ, ಒಣ ಮಾತುಗಳಿಂದ ಏನೂ ಪ್ರಯೋಜನವಿಲ್ಲ. ಗಣಪತಿಯ ಸ್ತುತಿ ಮಾಡಿ ದೇವರ ತಲೆ ತೂಗಿಸುತ್ತೇನೆ, ಎಂದು ಭಾಗವತ ಹೇಳಿದರೆ, ನಕಲಿ ನೀವು ದೇವರ ತಲೆ ತೂಗಿಸಿದರೆ ನಾನು ದೀವಟಿಗೆಯ ಭಾವನ ತಲೆ. 'ತೂಗಿಸುತ್ತೇನೆ' ಎನ್ನುತ್ತಾನೆ.

ಭಾಗವತ ಸೌರಾಷ್ಟ್ರರಾಗ, ಆದಿತಾಳದಲ್ಲಿ ಷಣ್ಮುಖ ಸ್ವಾಮಿಯನ್ನು ಪ್ರಾರ್ಥಿಸುತ್ತಾನೆ. ಪ್ರಾರ್ಥನೆಯಾದನಂತರ 'ವೇಷಧಾರಿ' ಷಣ್ಮುಖ ಸುಬ್ಬರಾಯ ಸ್ವಾಮಿಯು ರಂಗಸ್ಥಳವನ್ನು ಪ್ರವೇಶಿಸುವನು. ನಕಲಿಯೊಂದಿಗೆ ಸರಸವಾಡುವನು. ಏಕೆಂದರೆ, ನಕಲಿಗೆ ಎಲ್ಲರಲ್ಲೂ ಒಂದೇ ರೀತಿ ಸಲಿಗೆ, ಅಸಮರ್ಪಕವಾದ ಚಾಟೋಕ್ತಿಗಳಿಂದ ಚುಚ್ಚುವಷ್ಟು ಸರಸ.

ನಕಲಿ : (ಸುಬ್ರಹ್ಮಣ್ಯ ಸ್ವಾಮಿಯನ್ನು) ನೀನು ದಾರು ?

ಸು : ನಾನು........ಷಣ್ಮುಖ ಸುಬ್ರಹ್ಮಣ್ಯಸ್ವಾಮಿ.

ನಕಲಿ : ಸುಬ್ರಹ್ಮಣ್ಯವನ್ನು ಬಿಟ್ಟು ಸುಟ್ಟ ಮೋರೆಯಿಂದ ಇಲ್ಲಿಗೇಕೆ ಬಂದೆ ?

ಸುಬ್ರಹ್ಮಣ್ಯಸ್ವಾಮಿ ನಕಲಿಯನ್ನು "ಸುಖಿಯಾಗು ಕಂದಾ ಭಕ್ತನೆ" ಎಂದು ಹರಸುತ್ತಾನೆ. ಅನಂತರ ಪರಮೇಶ್ವರನ ಪ್ರವೇಶ. ಅವನಿಂದಲೂ ನಕಲಿಗೆ ಅದೇ ಆಶೀರ್ವಾದ. ನಕಲಿ ಆಗ "ಬಂದ ಬಂದವರೆಲ್ಲ ಸುಖಿಯಾಗಿರು ಎನ್ನುವುದು ತಪ್ಪೋದಿಲ್ಲ, ನಾವು ಈ ಬೀದಿ ಧೂಳಾಗೆ ಹೊರಳಾಡುವುದು ತಪ್ಪೋದಿಲ್ಲ." ಎಂದು ಯಥಾರ್ಥವನ್ನೇ ನುಡಿದು ತಾನು ಫಲವಾದಿ ಎಂಬುದನ್ನು ಸ್ಪಷ್ಟಪಡಿಸುವನು. 'ಮೃಚ್ಛಕಟಿಕ'ದ ಶಕಾರನು ಅಸಂಬದ್ಧ ಸಂಬಂಧಗಳನ್ನು ಪುರಾಣವ್ಯಕ್ತಿಗಳಲ್ಲಿ ಯೋಚಿಸಿದಂತೆ ಇಲ್ಲಿಯ ನಕಲಿ ತಿಂಡಿ ತಿನಸುಗಳಲ್ಲಿ ಮಾಡುತ್ತಾನೆ. 'ಉಪ್ಪು ಹುಳಿ ಹಾಕಿ ಪರಮಾನ್ನ' ಎನ್ನುತ್ತಾನೆ !

ನಕಲಿಯ ಹಾಸ್ಯಕ್ಕೆ ಪಾರ್ವತೀ ಪರಮೇಶ್ವರರೂ ತುತ್ತಾಗದೆ ವಿಧಿಯಿಲ್ಲ ! "ಜಗದೀಶ್ವರ ನೆನ್ನಿಸಿಕೊಂಡು, ಕೈಲಾಸವಾಸಿ ಎಂದುಕೊಂಡು

"ಜಗಲೀ ಈಶ್ವರನಾಗಿ ಈ ರಂಗಸ್ಥಳಕ್ಕೇಕೆ ಬಂದೆ ?" ಎಂದು ಈಶ್ವರನನ್ನು ಪ್ರಶ್ನಿಸುತ್ತಾನೆ ! ಈಶ್ವರನು ಇದಕ್ಕೆ ಉತ್ತರವಾಗಿ ಪಾರ್ವತಿಯನ್ನು ಹುಡುಕಿಕೊಂಡು ಬಂದೆನೆಂದೂ ವಿರಹ ತಾಪದಿಂದ ತಾನು ಬಳಲುತ್ತಿರುವುದಾಗಿಯೂ ಹೇಳಿಕೊಳ್ಳುತ್ತಾನೆ ! ಈಶ್ವರ ಮರೆಯಾದ ಮೇಲೆ ಪಾರ್ವತಿ ಬರುತ್ತಾಳೆ. ತಾನು 'ಶಿವನ ಅರ್ಧಾಂಗಿ' ಎಂದು ಆಕೆ ಹೇಳಿದರೆ, ನಕಲಿ "ಅರ್ಧ ಅಂಗೀ ನಾನೆಲ್ಲೂ ಕಾಣೆ, ನಾ ಹಾಕೋದೇ ಹರಕಂಗೀ" ಎನ್ನುತ್ತಾನೆ. ಇಲ್ಲಿ ಪಾರ್ವತಿಯು ಸ್ತೋತ್ರ ಮಾಡುವಾಗ ಕಂದ, ವೃತ್ತ, ಎಂದು ಹೇಳಿ ಸಂಸ್ಕೃತದ 'ಅಮರಕೋಶ' ದಿಂದ '....ಕಾಳಿ, ಹೈಮವತೀ, ರುದ್ರಾಣೀ, ಶರ್ವಾಣೀ, ಸರ್ವ ಮಂಗಳಾ' ಎಂಬುವನ್ನು ಹೇಳಿದೆ ! ಪಾರ್ವತಿಯೂ ವಿರಹ ತಾಪದಿಂದ ತನ್ನ ಸ್ವಾಮಿಯ ಸ್ತೋತ್ರ ಮಾಡುತ್ತಾಳೆ ! ಹೀಗೆ ಇವರಿಬ್ಬರೂ ಒಬ್ಬೊಬ್ಬರಾಗಿ ರಂಗಸ್ಥಳಕ್ಕೆ ಬಂದು ಮತ್ತೊಬ್ಬರನ್ನು ಹುಡುಕಿ ಹಲುಬಿ ಹೋಗುತ್ತಾರೆ. ಮಧ್ಯೆ ಮಧ್ಯೆ ನಕಲಿಯ ನವನವೀನ ಕುಹಕ ಬೇರೆ ! ಕೊನೆಗೆ ನಕಲಿಯು ಬೇಸರದಿಂದ "ನನ್ನ ಜೀವಕ್ಕೆ ಹಿತವಾದ ಈರುಳ್ಳಿ ಗಡ್ಡೆ, ಎಮ್ಮೆ ಮೊಸರು, ತಂಗಳನ್ನ ಕೊಡುವ ಹಾಗಾದರೇನೇ ಆಡಿಸಿಕೊಳ್ಳಿ" ಎಂದು ನಿರ್ದಾಕ್ಷಿಣ್ಯವಾಗಿ ಭಾಗವತನಿಗೆ ಹೇಳಿಯೇ ಬಿಡುವನು ! ಪಾರ್ವತೀ ಪರಮೇಶ್ವರರನ್ನು ನಕಲಿಯು "ಇದೇನು ಅರ್ಧ ರಾತ್ರಿಯಲ್ಲಿ ಗಂಡು ಹೆಣ್ಣು ದೆವ್ವಗಳು ಭೂತಗಳು ಬಂದಂತಿವೆ" ಎಂದೂ ಮೂದಲಿಸುವನು. ಕೊನೆಗೆ ಪಾರ್ವತೀ ಪರಮೇಶ್ವರರಿಬ್ಬರೂ ಸಂಧಿಸುವರು. ಕಲ್ಯಾಣಿರಾಗ ಆದಿತಾಳದಲ್ಲಿ ಕೋಲಾಟ ಪದದೊಡನೆ ಯಕ್ಷಗಾನ ಸಭಾವಂದನೆಯು ಮುಗಿಯುವುದು.

ಈ 'ಸಭಾವಂದನೆ' ಆಡುವ ಯಕ್ಷಗಾನ, ಯಕ್ಷಗಾನವನ್ನು ಸಾಮಾನ್ಯವಾಗಿ ಯಾವ ರೀತಿ ನಿರ್ವಹಿಸುತ್ತಾರೆಂಬುದು ಇದರಿಂದ ತಿಳಿಯುತ್ತದೆ. ಇದರಲ್ಲಿ ನಕಲಿಯ ಪಾತ್ರ ಬಹಳ ಮುಖ್ಯ. ಈತನು ಸಭಿಕರ ಪರವಾಗಿಯೋ ಎಂಬಂತೆ ಭಾಗವತ ಹೇಳುವ ಎಷ್ಟೋ ವಿಷಯಗಳ ಮೇಲೆ ವಿವರಣೆ ಕೇಳುವನು. ಈ ಯೋಜನೆ ಒಂದು ದೃಷ್ಟಿಯಿಂದ ಚೆನ್ನಾಗಿದೆ. ಪ್ರೇಕ್ಷಕ ವರ್ಗಕ್ಕೆ ಅನುಮಾನ ಬಂದ ಕಡೆ ಅವರ ಬದಲು ಇವನು ಪ್ರಶ್ನೆ ಹಾಕಿ ಉತ್ತರ ಪಡೆಯುವ, ಪ್ರೇಕ್ಷಕರ ಪ್ರತಿನಿಧಿ ಎಂಬಂತೆ ಏರ್ಪಡಿಸಿರುವುದು ಮೆಚ್ಚತಕ್ಕದ್ದೆ. ಅಲ್ಲದೆ ನಕಲಿ, ಬಂದ ಪಾತ್ರಗಳನ್ನೆಲ್ಲ ಪರಿಚಯ ಮಾಡಿಸಿಕೊಡುವ ಕೆಲಸ

ವನ್ನೂ ನಿರ್ವಹಿಸುತ್ತಾನೆ. ಅವನ ಆದ್ಯಕರ್ತವ್ಯವಾದ 'ನಕಲಿ' ಯನ್ನೂ ಯಥೇಚ್ಛವಾಗಿ ಮಾಡುತ್ತಾನೆ. ಈ ಹಾಸ್ಯದ ಮಟ್ಟ ಮೇಲ್ತರ ಗತಿಯದಲ್ಲ. 'ನಕಲಿ' ಸಮಾಜದ ಸಾಮಾನ್ಯ ಜನದ ಪ್ರತಿನಿಧಿ ಎನ್ನ ಬಹುದು. ದೇವರನ್ನು ಹಂಗಿಸುವುದಕ್ಕೂ ಇವನು ಹೇಸುವದಿಲ್ಲ, ಹೆದರುವದಿಲ್ಲ. ಇವನು ದೊಡ್ಡ ಫಲವಾದಿ.

ಈ ಗ್ರಂಥದಲ್ಲಿ ಅನೇಕ ಸಂಸ್ಕೃತ ಶ್ಲೋಕಗಳು ಉದ್ಧೃತವಾಗಿವೆ. 'ಗ್ರಂಥ,' 'ಶ್ಲೋಕ' ಎಂದು ಸಂಸ್ಕೃತದಲ್ಲಿ ಹೇಳಿ. ಅವುಗಳಿಗೆ ಕನ್ನಡದಲ್ಲಿ ಟೀಕೆಯನ್ನು ಬರೆದಿದೆ. ಇದಕ್ಕೆ 'ಟೀಕಾ ಸಭಾವಂದನೆ' ಎಂದೂ ಹೆಸರು. ಇಲ್ಲಿ ಹೇಳಿರುವ ಬಹುಭಾಗ. ನಕಲಿಯು ಕೇಳುವ ಪ್ರಶ್ನೆಗಳಿಗೆ ಭಾಗವತ ಕೊಡುವ ಉತ್ತರ ರೂಪದಲ್ಲಿದೆ. ಇವರಿಬ್ಬರ ಸಂಭಾಷಣೆಯಿಂದಲೇ ಎಲ್ಲ ವಿಷಯಗಳನ್ನೂ ಕವಿ ಸೂಚಿಸಿದ್ದಾನೆ-ಪ್ರದರ್ಶನಕ್ಕೆ ಅನುಕೂಲವಾಗುವಂತೆ.

ಸೌರಾಷ್ಟ್ರ, ಶಂಕರಾಭರಣ, ಭೈರವಿ, ಕಲ್ಯಾಣಿ ರಾಗಗಳೂ ತ್ರಿವುಡೆ ಆದಿತಾಳಗಳೂ ಸೂಚಿತವಾಗಿವೆ. ಕಂದ ವೃತ್ತಗಳೂ ಇವೆ.

ಯಕ್ಷಗಾನದ ಲಕ್ಷಣಗಳನ್ನು, ಅದರ ರಂಗಭೂಮಿಯನ್ನು ವರ್ಣಿಸಿ, ಹೇಳುವ ಮತ್ತೊಂದು ಲಾಕ್ಷಣಿಕ ಕೃತಿಯೂ ಇದೆ. ಅದಕ್ಕೆ "ಸಭಾಲಕ್ಷಣ" ವೆಂದೇ ಹೆಸರು.

"ಸಭಾಲಕ್ಷಣ" ಯಕ್ಷಗಾನ ದಿವಂಗತ ಶ್ರೀ. ಬಿ. ರಾಮರಾಯರಿಂದ ಸಂಗ್ರಹವಾಗಿ, ಉಡುಪಿ ಶ್ರೀ. ಮನ್ಮಧ್ವ ಸಿದ್ಧಾಂತ ಗ್ರಂಥಾಲಯದಿಂದ ಪ್ರಕಾಶಿತವಾಗಿದೆ. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಬರೆದ 'ಪಾರ್ತಿಸುಬ್ಬ' ಎಂಬ ಗ್ರಂಥದ ೧೪ ನೆಯ ಪುಟದಲ್ಲಿ 'ಸಭಾಲಕ್ಷಣ'ವನ್ನು ಬರೆದವನು ಸುಬ್ಬನಿಗಿಂತಲೂ ಹಿಂದೆ ಇದ್ದ ಚೆನಕಯ್ಯ ಭಾಗವತನೆಂದೂ, ಈತ ಮದವೂರಿನ ವಿಘ್ನೇಶ್ವರಸ್ವಾಮಿಯ ಸದ್ಭಕ್ತನೆಂದೂ ಹೇಳಿದ್ದಾರೆ.

ಈ ಗ್ರಂಥದಿಂದಲೂ ಸ್ಥೂಲವಾಗಿ ಯಕ್ಷಗಾನದ ರಂಗಲಕ್ಷಣಗಳನ್ನು ತಿಳಿಯಬಹುದು. ಇದರಲ್ಲಿ ಎರಡು ಭಾಗಗಳಿದ್ದು, ಮೊದಲನೆಯದು ಬಹುಮಟ್ಟಿಗೆ 'ಸಭಾವಂದನೆ' ಯನ್ನೇ ಹೋಲುತ್ತದೆ. ಇವುಗಳಲ್ಲಿ ಸಾಮ್ಯ

ಹೆಚ್ಚಾಗಿರುವುದರಿಂದ, ಆಭಾಗವನ್ನು ಕುರಿತು ಈಗಾಗಲೇ ದೀರ್ಘವಾಗಿಯೇ ಹೇಳಿಬಿಟ್ಟಿರುವದರಿಂದ, ಸಭಾಲಕ್ಷಣದ ಎರಡನೆಯ ಭಾಗವನ್ನು ಮಾತ್ರ ಕುರಿತು ಇಲ್ಲಿ ಹೇಳಬಹುದು.

ಮೇಳದವರು ಆಟವಾಡಬೇಕಾದ ಸ್ಥಳಕ್ಕೆ (ಊರಿಗೆ) ಬಂದಕೂಡಲೇ ದೇವಸ್ಥಾನ ಅಥವಾ ಇಳಿದಿರುವ ಮನೆಯಲ್ಲಿ ಮೊದಲು ಕ್ರಮವಾಗಿ ಗಣಪತಿ ವಿಷ್ಣು, ಪರಮೇಶ್ವರ, ದುರ್ಗಾ, ಶ್ರೀರಾಮ, ಹನುಮಂತ ಇವರುಗಳಮೇಲಿನ ಕೀರ್ತನೆಗಳನ್ನು ಹಾಡಬೇಕೆಂದಿದೆ.

ಕೋಡಂಗಿಯ ಹಾಸ್ಯವನ್ನೇ ಇಲ್ಲಿಯೂ ವಿಶೇಷವಾಗಿ ಹೇಳಿದೆ.

ಕೊಕ್ಕೆಚಿಕ್ಕನ ಹಾಸ್ಯವಾದ ತರುವಾಯ ಸ್ತ್ರೀವೇಷ ಹೊರಡುವುದು ಕ್ರಮವಂತೆ. ರಾಮಯಣ ಪ್ರಸಂಗಗಳಾದರೆ ಒಂದು ಕ್ರಮ, ಇತರ ಪುರಾಣ ಪ್ರಸಂಗಗಳಾದರೆ ಮತ್ತೊಂದು ಕ್ರಮ ಎಂದು ಇಲ್ಲಿ ಹೇಳಿದೆ. ಸೀಠಿಕಾಶ್ಲೋಕವನ್ನು ಹೇಳುವ ಪದ್ಧತಿಯನ್ನು ಇಲ್ಲಿ ಕೊಟ್ಟಿದೆ.

ದ್ವಿತೀಯ ಭಾಗದಲ್ಲಿ, ಪಾಂಡವರ ಒಡ್ಡೋಲಗದಲ್ಲಿ ತೆರೆಯ ಹೊರಗೂ ಒಳಗೂ ಕುಣಿಸುವ ಪದಗಳು ಬೇರೆ ಬೇರೆ. ರಾಮದೇವರ ಒಡ್ಡೋಲಗಕ್ಕೆ ಬೇರೆ ಬೇರೆ ಪದಗಳನ್ನು ಬರೆದಿವೆ. ಆನಂತರ ಹನುಮನಾಯಕನ ಪ್ರವೇಶ. ಇವನು ನೀತಿಯ ಲಾವಣಿಯನ್ನು ಹೇಳುತ್ತಾನೆ- ಅನಂತರ ಭಾಗವತನಿಗೂ ಇವನಿಗೂ ಹಾಸ್ಯಪಮಾತು. ಇಲ್ಲಿಯೂ ಹಾಸ್ಯದ ಮಟ್ಟ ಮಾತ್ರ ಕೀಳೇ ಎಂದು ಹೇಳದೆ ವಿಧಿ ಇಲ್ಲ. ಆದರೂ ಹನುಮನಾಯಕ, ಕೋಡಂಗಿ ಅಥವಾ ಕೊಕ್ಕೆ ಚಿಕ್ಕನಿಗೆ ಎಲ್ಲರಲ್ಲೂ ಸಲಿಗೆ ಹೆಚ್ಚು. ಇವರ ಮಾತಿಗೆ ಇತಿಮಿತಿ, ಲಂಗು ಲಗಾಮು ಏನೂ ಇಲ್ಲ. ಇವನಿಗೆ ದೇವರು, ಭಾಗವತ, ರಾಜ, ಸ್ನೆಹಿತ, ಸೂಳೆ, ಮೊದಲಾದ ಎಲ್ಲರಲ್ಲೂ ಕೆಲವು ವೇಳೆ ಒಂದೇ ವಿಧವಾದ ವರ್ತನೆ. ಈ ಪಾತ್ರ ರಂಗದ ಒಳಗೂ ಹೊರಗೂ ಓಡಾಡುತ್ತಾ ಇರುತ್ತದೆ. ಹೊರಗಿನ ಪ್ರಪಂಚದ ನಡೆವಳಿಕೆಗಳನ್ನೂ, ರಂಗಭೂಮಿ, ಚೌಕಿಗಳ ವಿದ್ಯಮಾನಗಳನ್ನೂ, ಸೇರಿಸಿ ತಮ್ಮ ಬುದ್ಧಿ ಸಂಸ್ಕೃತಿಗಳಿಗನುಸಾರವಾಗಿ, ಆಯಾ ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಮಾತನಾಡಿ ಸಭಿಕರ ಮನಸ್ಸನ್ನು ಸೂರೆಗೊಳ್ಳುವದೇ ಇವನ ಕೆಲಸ ! ಸಭಿಕರ ನಗುವೇ ಇವನ

ಗುರಿ ! ಕೆಲವು ವೇಳೆ ಗೂಢವಾದ, ಚಮತ್ಕಾರವಾದ ಮಾತುಗಳನ್ನಾಡುವದೂ ಉಂಟು "ಕಿರೀಟ–ಕಿರ್ಕಿಟ;" "ಮಕುಟ–ಮರ್ಕಟ" 'ಗ್ರಹಚಾಮರ' ಇತ್ಯಾದಿ ಪ್ರಯೋಗಗಳಿವೆ.

ಅರ್ಜುನ ಭೀಮಸೇನರೂ ಇವನೊಂದಿಗೆ ಮಾತನಾಡಿ ಇವನ ಮಟ್ಟಿಕ್ಕೂ ಇಳಿಯುತ್ತಾರೆ. "ಕೈ ತಲೆ ಕಾಲುಗಳು" ಇವನ ಚಾಕರಿಯವರಂತೆ ! ಹನುಮನಾಯಕನು ಗಾಯನವನ್ನೂ ಮಾಡುವನು. ಧರ್ಮರಾಯ, ರಾಮ' ಕೃಷ್ಣ ಇವರನ್ನು ಅಸ್ಥಾನದಲ್ಲಿ ಹೊಗಳುವನು. ಅರ್ಜುನ ಭೀಮರನ್ನು ಹಾಸ್ಯ ಸಹಿತವಾಗಿಯೇ ಹೊಗಳುವನು.

ಹೀಗೆ ಹನುಮನಾಯಕನು ತನ್ನ ಹಾಸ್ಯದಮಾತುಗಳನ್ನು ವಿವರವಾಗಿ, ನಿಧಾನವಾಗಿ ಸಾಂಗೋಪಾಂಗವಾಗಿ ಹೇಳಿದಮೇಲೆ ಭಾಗವತನು ಪ್ರಸಂಗದ ಪದ ಹೇಳುವನು. ತುಂಡುಪದಗಳು, ಸ್ತ್ರೀವೇಷ ಹೊರಡಿಸುವಪದಗಳು, ಕುಣಿತದ ಪದಗಳು, ಕೃಷ್ಣನ ಬಾಲಲೀಲೆಗಳನ್ನು ಕುರಿತ ಹಾಡುಗಳು.

ಇದಾದಮೇಲೆ ಜಡೆ ಹೆಣೆಯುವದಕ್ಕೆ ಒಂದು ಪದ್ಯ ಹೇಳುತ್ತಾರೆ. ಇದರಲ್ಲಿ ವೇಣುಗೋಪಾಲನಿಗೂ ರಾಧೆಗೂ ನಡೆಯುವ ಸಂವಾದವನ್ನು ಚಿತ್ರಿಸಿರುತ್ತಾರೆ. ಅನಂತರ ದಶಾವತಾರದ ಕತೆ ಬರುತ್ತದೆ. ಆಬಳಿಕ ಕೋಲುಪದ. ಇದರಲ್ಲಿ ಒಗಟುಗಳನ್ನು ಸೇರಿಸಿ ಧ್ವನಿಪೂರಿತವಾಗಿ ಅವುಳಿಗೆ ಉತ್ತರಗಳನ್ನೂ ಹೇಳಿ ಜನಸಂದಣಿಯನ್ನು ನಗಿಸುತ್ತಾರೆ.

ಒಗಟು	ಉತ್ತರ
ಒಬ್ಬನ ಒಳಗಿಟ್ಟೆ !	ಕಣ್ಣುಕಪ್ಪು ಒಳಗಿಟ್ಟೆ.
ಒಬ್ಬನ ಹೊರಗಿಟ್ಟೆ !	ಕಸ್ತೂರಿ ಹೊರಗಿಟ್ಟೆ.
ಒಬ್ಬನನೋಡಿ ನಗುತಿದ್ದೆ !	ಕನ್ನಡಿ ನೋಡಿ ನಗುತಿದ್ದೆ.
ಒಬ್ಬನಿಗೆ ಕೈಕೊಟ್ಟೆ !	ಬಳೆಗಾರಗೆ ಕೈಕೊಟ್ಟೆ.
ಒಬ್ಬಗೆ ಕಾಲುಕೊಟ್ಟೆ !	ಕಂಚುಗಾರಗೆ ಕಾಲುಕೊಟ್ಟೆ.
ಒಬ್ಬಗೆ ಸಿರೆಯ ಸೆಳೆಗೊಟ್ಟೆ !	ಅಗಸಗೆ ಸೀರೆಯ ಸೆಳೆಗೊಟ್ಟೆ.

ಕಂಚುಗಾರ = ಅಕ್ಕಸಾಲೆ

ವೀಳ್ಯವನ್ನು ತೆಗೆದುಕೊಳ್ಳುವಾಗ, ರಂಗದಿಂದ ಚೂಣಿಗೆ ಬರುವಾಗ ಆರತಿಯಾಗುವಾಗ ಬೇರೆ ಬೇರೆ ಪದಗಳನ್ನು ಹೇಳುವರು.

ಕೊನೆಗೆ ಭಾಗವತ ಸಭಿಕರಿಗೆ, ಪ್ರೇಕ್ಷಕವರ್ಗಕ್ಕೆ, ಅವರು ಸಂಜೆಯಿಂದ ಮುಂಜಾವಿನವರೆಗೂ, ಕುಳಿತು ಆಟನೋಡಿದುದಕ್ಕೆ ವಂದನೆಗಳನ್ನು ಅರ್ಪಿಸುವನು. ಅನಂತರ ಮಂಗಳವಾಗುವದು.

ಈಗ್ರಂಥದಲ್ಲಿ ಪಾಂಡವರ ಸಭೆ, ಕೌರವರ ಸಭೆ, ಭಾರತ ರಾಮಾಯಣ ಮೊದಲಾದ ಕತೆಗಳಲ್ಲಿ ಒಂದೊಂದು ಕಡೆ ಇಂತಿಂತಹ ಪದಗಳನ್ನೇ ಹಾಡಬೇಕು ಎಂದು ನಿರ್ದೇಶಿಸಿದೆ. ಈ ಗ್ರಂಥದ ಪ್ರಕಾರ ಹನುಮನಾಯಕನು ನಕಲಿಯ ಕೊಸ್ಕೆ ಚಿಕ್ಕ-ನೀತಿಯ ಲಾವಣಿಯನ್ನು ಹಾಡುತ್ತ ರಂಗ ಪ್ರವೇಶ ಮಾಡುವನು. ಎಲ್ಲರೊಂದಿಗೂ ಹಾಸ್ಯದ ಮಾತುಗಳನ್ನಾಡುವನು ಅನಂತರ, ಭಾಗವತನು ಪ್ರಸಂಗದ ಪದ ಹಾಡುವನು. ಪ್ರಸಂಗ ಪ್ರಾರಂಭವಾಗುವ ಮುಂಚೆಯೇ ರಂಗದಮೇಲೆ ಅಂದಿನ ಆಟದಲ್ಲಿ ಮುಂದೆಬರುಪಾತ್ರಗಳೆಲ್ಲ ಬಂದು ಕುಣಿದು, ಹಾಡಿಹೋಗುವವು. ಆಧುನಿಕ ಚಲನ ಚಿತ್ರ ಪ್ರಪಂಚದಲ್ಲಿ ಮುಂದೆ ಬರಲಿರುವ ಚಿತ್ರದ ಹಲವು ಸ್ವಾರಸ್ಯ ಪಾತ್ರಗಳನ್ನು ಮುಂಚೆಯೇ ತೋರಿಸಿ ಪ್ರೇಕ್ಷಕರನ್ನು ಆಕರ್ಷಿಸುವ ಮುಂಗಾಣ್ಕೆಯ ಚಿತ್ರ (Frai lar) ದಂತೆ! ಅಥವಾ ಚಿತ್ರ ಪ್ರಾರಂಭವಾಗುವ ಮುಂಚೆ, ಆ ಚಿತ್ರದ ಪಾತ್ರಗಳನ್ನೂ, ಅದರ ನಟರುಗಳನ್ನೂ ತೋರಿಸುವಂತೆ. ಮುಂದಿನದನ್ನು ಅರ್ಥ ಮಾಡಿಕೊಳ್ಳಲು ಸಭಿಕರಿಗೆ ಇದು ಸಾಹಾಯ ಮಾಡುತ್ತದೆ.

ಈ ಗ್ರಥದಲ್ಲಿ ಆಯಾ ವೇಷವನ್ನು ಹೊರಡಿಸುವಾಗ ಹೇಳಬೇಕಾದ ಪದಗಳನ್ನೂ ತಿಳಿಸಿದೆ. ಉದಾ:- ತುಂಡುಪದಗಳು, ಸ್ತ್ರೀವೇಷಗಳನ್ನು ಹೊರಡಿಸುವಾಗ ಹೇಳಬೇಕಾದ ಪದಗಳು. ಇವುಗಳಲ್ಲೆಲ್ಲಾ ವಿಪ್ರಲಂಭ ಶೃಂಗಾರ ನಿರೂಪಣೆಯೇ ಹೆಚ್ಚು. ಶ್ರೀ ಕೃಷ್ಣನ ಬಾಲಲಿಲೆಗಳನ್ನು ಕುರಿತ ಹಾಡುಗಳು_ಇವುಗಳಲ್ಲಿ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ, ನಿತ್ಯವೂ ನಡೆಯುವ, ಪತಿ-ಪತ್ನಿ ಸ್ನೇಹಿತರು' ತೌರು ಇವರ ಪರಸ್ಪರ ಸಂಬಂಧ, ಪ್ರೇಮ, ಜಗಳ' ಸಮಾಧಾನ, ಸಂತೋಷ ಮೊದಲಾದ ವಿಷಯಗಳನ್ನು ಕುರಿತ ಪದಗಳೂ ಇವೆ. ಜಡೆ ಹೆಣೆಯುವ ಪದ, ರಾಧಾ ಕೃಷ್ಣರ ಸಂವಾದ

ದಶಾವತಾರವ ಕತೆ ಎಲ್ಲಾ ಇಲ್ಲಿ ಬರುತ್ತವೆ. ಕೋಲುಪದ ಒಗಟುಗಳೂ ಬರುತ್ತಿವೆ. ಈ ಕೋಲಾಟದ ಪದಗಳು ಚೆನ್ನಾಗಿವೆ. ಇವಿಷ್ಟೂ ಮುಖ್ಯ ಕತೆಯ ಜೊತೆ ಜೊತೆಗೇ ಮಧ್ಯೆ ಮಧ್ಯೆ ನಡೆಯುತ್ತಿರುತ್ತವೆ. ಸಂಜೆಯಿಂದ ಮುಂಜಾವಿನವರೆಗೂ ಈ ಆಟ ಸಾಗುವದರಿಂದ ಕಾಲದ ಪರಿಮಿತಿಯ ಭಯ ಯಾರಿಗೂ ಇಲ್ಲ.

ಯಕ್ಷಗಾನದಲ್ಲಿ ಗದ್ಯ ಪದ್ಯಗಳೆರಡಕ್ಕೂ ಶ್ರುತಿ ಉಂಟು. ತೆರೆಯ ಒಳಗಿಂದ ಒಂದು ಠಿವಿಯಿಂದ, ಕೆಲವು ವೇಳೆ ನಿಧಾನವಾಗಿ ಒಂದು ಕ್ರಮುವನ್ನನು ಸರಿಸಿ ಪಾತ್ರಗಳು ಹೊರಬರುತ್ತವೆ. ಪಾತ್ರಗಳು ಒಂದಂದಾಗಿ ಹೊರಗೆಬಂದು ಕಾಣಿಸಿಕೊಂಡು, ಅನಂತರ ಒಟ್ಟಿಗೇ ಎಲ್ಲಪಾತ್ರಗಳೂ ಒಂದೇಸಾರಿ ರಂಗಸ್ಥಳಕ್ಕೆ ಬರುತ್ತವೆ. ಹೀಗೆ ಈ ಪಾತ್ರಗಳು ಬಂದು ಹೋಗುವ ರೀತಿ ಒಂದು ವೈಸಿಷ್ಟ್ಯಪೂರ್ಣ ವಾಗಿರುತ್ತದೆ. ಇಲ್ಲಿಯ ಕುಣಿತ, ಕೆಲವರ ದೃಷ್ಟಿಯಿಂದ, ಮನೋಹರ, ಮೃದು ಅಲ್ಲದಿದ್ದರೂ, ಅದರ ಅಭ್ಯಾಸ, ಪ್ರದರ್ಶನ ಕಷ್ಟಸಾಧ್ಯ ಎಂದು ಒಪ್ಪಲೇಬೇಕು. ಯಕ್ಷಗಾನದ ಶೃಂಗಾರದ ಕುಣಿತವೂ ಕಠೋರವಾಗಿಯೇ ಇರುತ್ತದೆ; ಎವೆ ಝುಗ್ಗೆನ್ನುವಂತೆಯೇ ಇರುತ್ತದೆ. ಇಲ್ಲೆಲ್ಲಾ ಕೂಗೂ ಹೆಚ್ಚು. ಪಾತ್ರಗಳು ತಮ್ಮ ತಮ್ಮ ಪರಿಚಯ ಸಮೇತ ವಾಗಿಯೇ ರಂಗಸ್ಥಳಕ್ಕೆ ಬಿಲ್ಲಿನಿಂದ ಚಿಮ್ಮಿದ ಅಂಬಿನಂತೆ ಜಿಗಿದು ಬಂದು ಪ್ರತ್ಯಕ್ಷವಾಗುತ್ತವೆ ಪ್ರೇಕ್ಷಕರಿಗೆ. ಸಾಮಾನ್ಯವಾಗಿ ನಾಟ್ಯ ರಾಗದಿಂದ ಆರಂಭವಾದ ಆಟ ರಾತ್ರಿಯೆಲ್ಲಾ ಅವ್ಯಾಹತವಾಗಿ ಹರಿದು ನಸುಬೆಳಕಿನ ವೇಳೆಗೆ ಭೂಪಾಳಿ ಮೋಹನ ರಾಗಗಳಲ್ಲಿ ಕೊನೆಮುಟ್ಟುತ್ತದೆ. ಯಕ್ಷಗಾನ ಕೃತಿಗಳನ್ನು ಅಚ್ಚುಮಾಡಿರುವ ಪುಸ್ತಕಗಳಲ್ಲಿ ಬಗೆ ಬಗೆಯ ರಾಗಗಳನ್ನು ಹೇಳಿದ್ದರೂ ಉಪಯೋಗದಲ್ಲಿರುವವು ಕೆಲವು ಮಾತ್ರ. ಒಟ್ಟಿನಮೇಲೆ ಇಲ್ಲಿ ಲಯ–ಲಹರಿ ಮುಖ್ಯ. ಸಾಹಿತ್ಯಕ್ಕಿಂತ ಅನೇಕ ವೇಳೆ ಹಾಡಿನ ಧ್ವನಿಯೇ ಮುಖ್ಯವಾಗಿರುತ್ತದೆ. ಪಾತ್ರಗಳು ತಮ್ಮ ಕರ್ತವ್ಯ ನಿರ್ವಹಿಸಿ ರಂಗಸ್ಥಳವನ್ನು ಬಿಟ್ಟು ಹೋಗುವದನ್ನು ಸಹ ಕುಣಿತದ ಧೋರಣೆಯಿಂದಲೇ ತೋರಿಸುವ ವಾಡಿಕೆಯಿದೆ.

ಯಕ್ಷಗಾನಗಳು ಸ್ಪರ್ಧೆಗಾಗಿ ಜೋಡಿಯೂ, ಮೂರಾಟ ನಾಲ್ಕಾಟ ಗಳ ಮೇಲಾಟ ಕೂಡ ನಡೆಯುವದುಂಟು. ಯಾವಮೇಳದವರು

ಹೆಚ್ಚುಹೊತ್ತು, ಹೆಚ್ಚು ಸಾಮರ್ಥ್ಯದಿಂದ ರಭಸವಾಗಿ ಜೋ ಕುಣಿಯುತ್ತಾರೋ, ಪಾತ್ರಗಳನ್ನು ನಿರ್ವಹಿಸುತ್ತಾರೋ, ಅವರು ಗೆದ್ದ ತೀರ್ಮಾನವಾಗುತ್ತದೆ! ಮೂರು ನಾಲ್ಕು ಮೇಳದವರು ಒಂದೇಕಡೆ, ಒ ಕತೆಯನ್ನು ಏಕಕಾಲದಲ್ಲಿ ಪಕ್ಕ ಪಕ್ಕದಲ್ಲಿಆಡವದೂ ಉಂಟು! ಅಲ್ಲಿ ಉತ್ಸಾಹವನ್ನು ವರ್ಣಿಸುವದು ಸತ್ಯವಾಗಿಯೂ ಸಾಹಸವೇ.

ಹೀಗೆ ಈ ಸಭಾಲಕ್ಷಣ ಮತ್ತು 'ಸಭಾವಂದನೆ' ಎಂಬ ಎ ಲಾಕ್ಷಣಿಕ ಯಕ್ಷಗಾನ ಕೃತಿಗಳಿಂದ ಯಕ್ಷಗಾನ ಪ್ರದರ್ಶನದ ಕೆಲವು ಲ ಗಳನ್ನು. ಯಕ್ಷಗಾನ ರಂಗಭೂಮಿಯ ಕೆಲವು ವೈಶಿಷ್ಟಗಳನ್ನು ನೋಡಿದೆ ಯಕ್ಷಗಾನ ಕೃತಿಗಳು ಸಂಖೆಯ ದೃಷ್ಟಿಯಿಂದ ಬೃಹತ್ತಾಗಿವೆ. ಆದರೆ ಅನೆ ಕೃತಿಗಳು ಅಚ್ಚಾಗಿರುವದಿಲ್ಲ. ಕೈಬರೆಹದಲ್ಲೇ ಅನೇಕ ಕೃತಿಗಳಿವೆ. ಹಲ ರಸಿಕರ ಸ್ಮೃತಿ ಪಥದಲ್ಲೇ ಅಡಗಿ ಕುಳಿತಿವೆ. ಹೀಗೆ ಅಚ್ಚಾಗಿರು ಕೈಬರೆಹದಲ್ಲಿರುವ ಕ್ರತಿಗಳ ಸಂಖೆಯೂ ಕಡಿಮೆ ಏನೂ ಅಲ್ಲ. ಇ ಸುಮಾರು ಇನ್ನೂರಕ್ಕೂ ಮೇಲೆ ಇವೆ. ಇವುಗಳಲ್ಲಿ ದೊರೆತಷ್ಟು ಕ್ರತಿ ದೊಡ್ಡ ಪಟ್ಟಿಯೊಂದನೆಲ್ಲ ಈ ಗ್ರಂಥದ ಕೊನೆಯಲ್ಲಿ ಕೊಟ್ಟಿದೆ. ಈ ಸಂ ಯಕ್ಷಗಾನಕ್ಕೆ ನಮ್ಮ ಸಮಾಜಲ್ಲಿ ಇರುವ ಜನ ಜನಿತೆಯನ್ನೂ, ಪ್ರೋತ್ಸಾ ವನ್ನೂ, ಅದರಮೇಲೆ ಜನತೋರುವ ವಿಶ್ವಾಸವನ್ನೂ ತೋರಿಸುತ್ತ ಅವುಗಳಲ್ಲಿ ಮುಖ್ಯವಾದ ಕೃತಿಗಳಲ್ಲಿ ಕೆಲವನ್ನು ವಿಮರ್ಶಾತ್ಮಕದೃಷ್ಟಿಯಿ ಪರಿಚಯಮಾಡಿಕೊಡಲು ಮುಂದಿನ ಭಾಗ ಮೀಸಲಾಗಿದೆ.

೪. ಕೆಲವು "ಯಕ್ಷಗಾನ" ಗಳು. ಆ ಕೃತಿಗಳ ವಿಮರ್ಶೆ

(೧) "ವೆಂಕಟೇಶಮಹಾತ್ಮೆಯೆಂಬ ಭಾಗಾ ನಗರದ ಕತೆ"

ಕವಿ ? ಪ್ರಕಟಣೆ ೧೮೮೮.

ಈ ಕಥಾವಸ್ತು ಪೌರಾಣಿಕವೂ ಅಲ್ಲ, ಐತಿಹಾಸಿಕವೂ ಅಲ್ಲ; ಭಗವಂತನ ಮಹಾತ್ಮೆಯನ್ನೂ ಮತ್ತು ಜನಸಾಮಾನ್ಯರ ಮನೋಭಾವ, ನಂಬಿಕೆಗಳನ್ನೂ ಎತ್ತಿ ತೋರಿಸುವ ಒಂದು ಸಾಮಾಜಿಕ ಕತೆ, ಈ ಯಕ್ಷಗಾನದಲ್ಲಿದೆ.

ಭಾಗಾನಗರವೆಂಬ ಊರಿನಲ್ಲಿ ಒಂದು ಸಂಸಾರ. ದಂಪತಿಗಳಿಗೆ ಬಹು ಕಾಲದಿಂದಲೂ ಮಕ್ಕಳಾಗಲಿಲ್ಲ. ಗೃಹಿಣಿಗೆ 'ಬಂಜೆ' ಎಂಬ ಹೆಸರನ್ನು ಕೇಳಿ ಕೇಳಿ ಮನಸ್ಸು ತುಂಬ ನೋಯುತ್ತದೆ. ಕೊನೆಗೆ ಲೋಕವನ್ನು ತೃಪ್ತಿ ಪಡಿಸುವುದಕ್ಕಾಗಿಯಾದರೂ, ಆ 'ಬಂಜೆ' ಎಂಬ ಅಪವಾದವನ್ನು ತಪ್ಪಿಸಿ ಕೊಳ್ಳುವುದಕ್ಕಾಗಿಯಾದರೂ, ಒಂದು ಮಗು ಆಕೆಗೆ ಬೇಕೇ ಬೇಕಾಗುತ್ತದೆ. ಇದಕ್ಕಾಗಿ ಆಕೆ ತಿರುಪತಿಯ ಶ್ರೀ. ವೆಂಕಟೇಶ್ವರನನ್ನು ಕುರಿತು ಒಂದೇ ಮನಸ್ಸಿನಿಂದ ಹಲವು ಪರಿ ಹಲುಬಿ ಹಂಬಲಿಸಿ ಬೇಡುತ್ತಾಳೆ. ಹೀಗೆ ಬೇಡುವ ಸಂದರ್ಭದಲ್ಲಿ ತನ್ನನ್ನು ತಾನೇ ಮರೆತು ಉತ್ಸಾಹ ಭರದಲ್ಲಿ, ಹುಟ್ಟುವ ಮಗುವನ್ನು ಸ್ವಾಮಿಯ ರಥಚಕ್ರಕ್ಕೆ ಕಾಣಿಕೆಯಾಗಿ ಒಪ್ಪಿಸುವೆನೆಂದು ಒಂದು ಹರಕೆಯನ್ನು ಕಟ್ಟುತ್ತಾಳೆ! ಈ ಹರಕೆಯೇ ಮುಂದಿನ ಕತೆಯ ಬೆಳವಣಿಗೆಗೆ ಸಹಾಯಕವಾಗುತ್ತದೆ.

ಭಕ್ತಳ ಬೇಡಿಕೆಗೆ ಕಿವಿಗೊಟ್ಟು ಪರಮಾತ್ಮನು ಆಕೆಗೆ ಒಂದು ಗಂಡು ಮಗುವನ್ನು ಕರುಣಿಸುತ್ತಾನೆ. ಕವಿ ಇಲ್ಲಿ ಆಕೆ ಗರ್ಭಧರಿಸಿದ್ದು, ನವಮಾಸಗಳಲ್ಲಿ ಪದ್ಧತಿಯಂತೆ ಆಚರಿಸುವ ಹಲವು ನಡೆವಳಿಕೆಗಳನ್ನು ವಿವರವಾಗಿ ವರ್ಣಿಸಿದ್ದಾನೆ. ಮಗು ಹುಟ್ಟಿ ಬಾಲಲೀಲೆಗಳಿಂದ ತಾಯಿ-ತಂದೆಗಳನ್ನು ಸಂತೋಷ ಪಡಿಸುತ್ತದೆ. ತಾಯಿ ಹರಕೆಯನ್ನು ಮರೆತು ಮಗನನ್ನು ನೋಡಿ ಸಂತೋಷ ಪಡುತ್ತಾಳೆ. ಈ ಗುಟ್ಟನ್ನರಿಯದ ಮನೆಯ ಇತರ ಜನರೂ ಹುಡುಗನನ್ನು ನೋಡಿ ಸಂತೋಷ ಹೊಂದುತ್ತಾರೆ.

ಒಂದು ದಿನ ತಾಯಿಯ ಕನಸಿನಲ್ಲಿ 'ಹರಕೆ' ಯ 'ಎಚ್ಚರಿಕೆ' ಯಾಗುತ್ತದೆ. ಅವರೆ ತಾಯಿ ಕರುಳು ಶಿಶುವನ್ನು ಬಲಿ ಕೊಡಲು ಸಿದ್ಧವಿಲ್ಲ. ಐದು ವರ್ಷದ ಹುಡುಗನಿಗೆ ಕಾಯಿಲೆ ಬರುತ್ತದೆ. ದೇವರನ್ನು ಪೂಜಿಸಿದ ಮೇಲೆ

ಆ ಕುತ್ತವೂ ಪರಿಹಾರವಾಗುತ್ತದೆ. ಹುಡುಗನೊಂದಿಗೆ ಎಲ್ಲರೂ 'ಕನಕಗಿರಿಗೆ' ಯಾತ್ರೆ ಹೊರಡುತ್ತಾರೆ. ತಾಯಿಯ 'ಹುಡುಗನ ಬಲಿ' ಯ ಹರಕೆಯೊಂದು ಬಿಟ್ಟು ಉಳಿದೆಲ್ಲ ಪೂಜೆ ಮೊದಲಾದುವು ಸಾಂಗವಾಗಿ ನಡೆಯುತ್ತವೆ. ಆದರೆ ತಿಮ್ಮಪ್ಪನ ರಥ ಮಾತ್ರ ಮುಂದಕ್ಕೆ ಚಲಿಸದೆ ನಿಂತು ಬಿಡುತ್ತದೆ! ಭಕ್ತರು ನಾನಾ ರೀತಿ ಯೋಚನೆಗಳನ್ನು ಮಾಡಿ ಬಗೆಹರಿಯದೆ ಭಕ್ತಬಂಧುವನ್ನೇ ಮೊರೆಹೋಗುತ್ತಾರೆ. ತಾಯಿಯ ಹರಕೆ ಸಂದಲ್ಲದೆ ರಥದ ಚಕ್ರ ಉರುಳುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನೆರೆದ ಜನರೆಲ್ಲ ಆಕೆಗೆ ಉಪದೇಶ ಮಾಡುವವರೇ. ಆಕೆಗೆ ಧರ್ಮಸಂಕಟ ಒದಗುತ್ತದೆ. ಇದರೊಂದಿಗೆ ತನ್ನ ಗುಟ್ಟು ರಟ್ಟಾಗಿ ತನಗೆ ಅವಮಾನವಾಯಿತಲ್ಲ ಎಂಬ ದುಃಖ ಬೇರೆ. ದುಃಖದಿಂದ, ರೊಚ್ಚಿನಿಂದ ದೇವರನ್ನೇ ದೂಷಿಸತೊಡಗುತ್ತಾಳೆ. ಯೋಚಿಸಿದಳು, ಅತ್ತಳು, ಹಲುಬಿದಳು ಕೊನೆಗೆ ಬೇರೇನೂ ಗತ್ಯಂತರವಿಲ್ಲದೆ ಆ ಅನಾಥ ರಕ್ಷಕನನ್ನೇ ಮೊರೆಹೋಗುವಳು. ಆ ಸಣ್ಣ ಹುಡುಗ ವಿಷಯವನ್ನು ಗ್ರಹಿಸಿ ಶ್ರೀಪಾದ ಸೇರಲು ಸಿದ್ಧನಾಗುತ್ತಾನೆ! ಸರಿ ಚಕ್ರದ ಮುಂದೆ ಮಗು ಅಡ್ಡ ಮಲಗಿತು. ದೇವರು ಪ್ರಸನ್ನನಾಗಿ ಕರುಣೆಯಿಂದ ಬಾಲಕನನ್ನು ಉಳಿಸಿಕೊಡುತ್ತಾನೆ! ತಾಯಿಯ ಸಂತೋಷ ಹೇಳತೀರದಾಗಿ ಮೂರನಯ್ಯನ ಮಹಿಮೆಯನ್ನು ಕೊಂಡಾಡುತ್ತಾಳೆ.

ಇದು ಸಂಕ್ಷಿಪ್ತ ಕಥಾಸಾರಾಂಶ. ಆಡುವ ಯಕ್ಷಗಾನವಿದಲ್ಲ. ಅಂತಹ ಸೂಚನೆಗಳನ್ನೇನೂ ಇಲ್ಲಿ ಹೇಳಿಲ್ಲ (ರಂಗಭೂಮಿಯ ದೃಷ್ಟಿಯಿಂದ). ಕತೆಯನ್ನು ಕವಿಯೇ ಉದ್ದಕ್ಕೂ ಹೇಳಿಕೊಂಡು ಹೋಗಿದ್ದಾನೆ. ಇದರ ಭಾಷೆಯನ್ನು ನೋಡಿದರೆ, ಇತ್ತೀಚಿನ ಕಾಲದ್ದೆಂದು ತೋರುತ್ತದೆ. ಭಾಷೆ ಅಷ್ಟೇನೂ ಶುದ್ಧವಾಗಿಯೂ ಇಲ್ಲ. ಮಾತನಾಡುವ ಭಾಷೆಯೂ ಸೇರಿದೆ. ಸಂಭಾಷಣೆಗಳಲ್ಲಿ ವ್ಯಾಕರಣ ನಿಯಮಗಳ ಲೋಪವೂ ಅಲ್ಲಲ್ಲಿ ಕಂಡುಬರುತ್ತದೆ. ಕತೆ ಬಹಳ ಸಣ್ಣದಿದ್ದರೂ, ಅದರಲ್ಲಿಯೇ ಛಂದಸ್ಸಿನ ವೈವಿಧ್ಯವನ್ನು ತೋರಿಸಿದೆ. ದ್ವಿಪದಿ, ಲಾವಣಿ, ಕಂದ, ಮೂಲಪದಗಳ ಪ್ರಯೋಗ ಕಂಡುಬರುತ್ತದೆ. ಹಾಡುಗಳಿಗೆ ಕಾಂಭೋಧಿ, ಕಲ್ಯಾಣಿ, ರೇಗುಪ್ತಿ, ಪುನ್ನಾಗವರಾಳಿ, ಸುರಟಿ ಮಧ್ಯಮಾವತಿ, ಆನಂದಭೈರವಿ ರಾಗಗಳೂ, ಆದಿ ಅಟ ತಾಳಗಳೂ ಸೂಚಿತವಾಗಿವೆ. ಹಾಡುಗಳೇ ಹೆಚ್ಚು, ಗದ್ಯ ಬಹು ಸ್ವಲ್ಪ.

ನಮ್ಮ ಸಮಾಜದ ಜನಜೀವನ ಇಲ್ಲಿ ಚಿತ್ರಿತವಾಗಿದೆ. ಕವಿಯ ಲೋಕಾನುಭವವನ್ನು ಇಲ್ಲಿ ಕಾಣಬಹುದು. ಮಕ್ಕಳಾಗದಿರುವವರು ದೇವರನ್ನು ಪ್ರಾರ್ಥಿಸುವುದು, ತಪಸ್ಸು ಮಾಡುವುದು, ಹರಕೆಗಳನ್ನು ಹೊರುವುದೂ, ನಮ್ಮಲ್ಲಿ ಹಿಂದಿನಿಂದಲೂ ಅನೂಚಾನವಾಗಿ ನಡೆದುಬಂದಿರುವ ಸಂಪ್ರದಾಯ. ಹಾಗೆಯೇ ಹರಕೆಯನ್ನು ಹೊತ್ತು, ಫಲಸಿದ್ಧಿಯಾದಮೇಲೆ, ಆ ಹರಕೆಯನ್ನು ಮರೆತು ಬಿಡುವುದೂ ಅಲ್ಲಲ್ಲಿ ಕಂಡುಬರುವ ದೃಶ್ಯಗಳೇ. ಸಾಮಾನ್ಯ ಹರಕೆಗಳೇ ಹಾರಿ ಹೋಗುವಾಗ, ಹುಟ್ಟಿದ ಒಂದೇ ಮಗುವನ್ನು ಬಲಿಕೊಡುವ ಈ ಹರಕೆ ಮರೆತು ಹೋಗುವುದು ಸಹಜವೇ ! ದೇವರಲ್ಲಿ ಹಿಂದಿದ್ದ ನಂಬಿಕೆ, ಭಕ್ತಿ ಈಗ ಮಾಯವಾಗುತ್ತದೆ. ಇವು ನಾವು ಜನಜೀವನದಲ್ಲಿ ಆಗಾಗ್ಗೆ ಕಂಡು ಕೇಳುವ ವಿಷಯ. ಅಂತಹುದೇ ಒಂದು ಪ್ರಸಂಗ ಇಲ್ಲಿ ಕಾಣುತ್ತದೆ. ಹರಕೆ ಸಲ್ಲದಿದ್ದಾಗ ಇಲ್ಲಿ ಮಾನವನೊಂದಿಗೆ ದೇವರೂ ಸೆಣಸುತ್ತಾನೆ, ಹಟ ಹಿಡಿಯುತ್ತಾನೆ. ಅನಂತರ ದಯೆ ತೋರುತ್ತಾನೆ.

ಇಲ್ಲಿ ದಂಪತಿಗಳು ದೇವರನ್ನು ಬೇಡುವುದು, ವರ ಪಡೆಯುವದು, ಸತಿ ಗರ್ಭ ಧರಿಸುವುದು, ಶಿಶು ಜನನ, ನಾಮಕರಣ ಮೊದಲಾದ ಸಮಾಜದ ಸಾಮಾನ್ಯ ಸಂಪ್ರದಾಯಗಳನ್ನು ವಿವರವಾಗಿಯೇ ವರ್ಣಿಸಿದ್ದಾನೆ. ಇದರಿಂದ ಒಂದು ನಿರ್ದಿಷ್ಟ ಸಮಾಜದ ಪದ್ಧತಿಗಳನ್ನು ತಿಳಿದುಕೊಳ್ಳಬಹುದು. ಸತಿಯು ಬೇನೆಯನ್ನು ತಡೆಯಲಾರದೆ ಸಂಕಟಪಡುತ್ತಾಳೆ.

" ಧರೆಯೊಳು ಸ್ತ್ರೀಜನ್ಮವು ಧರಸುವುದು ದುರಿತಗಳೆ ಅಮ್ಮಯ್ಯ " ಎಂದು ಒರಲುತ್ತಾಳೆ. ಮಗು ಹುಟ್ಟಿದ ಮೇಲೆ ಅದೇ ಧರೆ ಸಂತೋಷದ ಆಗರವಾಗುತ್ತದೆ. ಕೂಸು " ಕಾವು ಕಾವೆಂದೆನುತ " ಹುಟ್ಟಿತಂತೆ !

ಈ ಕತೆಯಲ್ಲಿ ಸಾಮಾನ್ಯ ಜನಗಳ ಮನಸ್ಸು ಹೇಗಿರುತ್ತದೆಂಬುದನ್ನು ಕವಿ ಚೆನ್ನಾಗಿ ತೋರಿಸಿದ್ದಾನೆ. ತಾಯಿಗೆ ಕನಸಿನಲ್ಲಿ ಹರಕೆಯ ನೆನಪಾಗಿ, ಮಗುವಿಗೆ ಕಾಯಲೆ ಬಂದರೂ, ಅದು ಈ ಕಾರಣದಿಂದಲೇ ಎಂದು ತರ್ಕಿಸಿದಾಗಲೂ, ಆಕೆಗೆ ಹರಕೆಯನ್ನು ಒಪ್ಪಿಸುವ ಮನಸ್ಸಿಲ್ಲ. ಔಷಧೋಪಚಾರಗಳು ನಡೆದು ಕಾಯಿಲೆವಾಸಿಯಾಗಿ ಮುಂದೆ ರಥದ ಗಾಲಿ ನಿಂತಾಗ, ಆಕೆಯ ಗುಟ್ಟು ಬಯಲಾದಾಗ ವ್ಯಸನವಾಗುತ್ತದೆ. ಸಂಕಟವಾಗುತ್ತದೆ.

"ಮರೆತಾಗ ಬೇಡಿಕೊಂಡೆ, ಮಾಧವ, ಕರಮುಗಿದು ಬೇಡಿಕೊಂಬೆ.......... ಮಾನವರೊಳಗೆಲ್ಲ ಮಾನ ಕಳೆಯಬೇಡ. ಪ್ರಾಣರಕ್ಷಕ ಯನ್ನ ಮಾನ ಉದ್ಧರಿಸಯ್ಯಾ" ಎಂದು ತಾಯಿ ಈಗ ದೇವರನ್ನು ಬೇಡುತ್ತಾಳೆ. ಈ ಭಕ್ತಿ ಇದ್ದುದರಿಂದ ಮಗು ಉಳಿಯುತ್ತದೆ.

ಕವಿಯ ವಿಷಯವಾಗಿ ಈ ಗ್ರಂಥದಿಂದ ಏನೂ ತಿಳಿದುಬರುವುದಿಲ್ಲ.

(೨) ಕರಿ ಬಂಟನ ಕಾಳಗ

ಯಕ್ಷಗಾನಗಳಲ್ಲಿ ಸಾಮಾನ್ಯವಾಗಿ ರಾಮಾಯಣ, ಭಾರತ ಮತ್ತು ಭಾಗವತಗಳಿಂದ ಆರಿಸಿದ ಪೌರಾಣಿಕ ಕತೆಗಳೇ ಹೆಚ್ಚು. ಆದರೆ ಕೆಲವು ಮಾತ್ರ, ನಾಡಿನ ಜನಜನಿತವಾದ ವೀರರ ಕತೆಗಳಿಂದಲೂ ಆಯ್ದುದುಂಟು. ಎಂಬುದಕ್ಕೆ ಈ 'ಕರಿಬಂಟನ ಕಾಳಗ' ಒಂದು ಒಳ್ಳೆಯ ಉದಾಹರಣೆ. ಈ ಕತೆಯ ಕೊನೆಯಲ್ಲಿಯೂ ಪರಮಾತ್ಮನ ಪವಾಡವಿದ್ದರೂ, ಆ ಸಂದರ್ಭವೂ, ನಮ್ಮ ದೇಶದ ನಂಬಿಕೆಯ ಪ್ರಕಾರ, ಕತೆಯೊಂದಿಗೆ ಹಾಸುಹೊಕ್ಕಾಗಿ ಸೇರಿಕೊಳ್ಳುವಂತೆ ಕವಿ ಪ್ರಯತ್ನಿಸಿದ್ದಾನೆ.

ಈ ಯಕ್ಷಗಾನವನ್ನು ಬರೆದ ಕವಿ ಮೈಸೂರಿನ ವೀರನಗೆರೆ ಪುಟ್ಟಣ್ಣ. ಆಳಿದ ಶ್ರೀ. ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿದ್ದವನೆಂದು ಹೇಳಿದೆ. ಸುಮತಿ ನಗರದ ರಾಜನ ಮಗ ಕರಿರಾಜ ಸುಂದರ, ಸಾಹಸಿ ಮತ್ತು ವೀರ. ಇವನು ಹಳೆಯಬೀಡಿನ ರಾಜಕುಮಾರಿ ಭುವನ ಮೋಹಿನಿಯನ್ನು ಮದುವೆಯಾಗಲು ಸ್ವಯಂವರಕ್ಕೆ ಹೋಗುವಾಗ ದಾರಿಯಲ್ಲಿ ತೊಣ್ಣೂರಿನ ಬಳಿ ಓರ್ವ ರಾಕ್ಷಸಿಯ ಮಗಳನ್ನು ರಾಕ್ಷಸಿಯ ವಿರುದ್ಧವಾಗಿ—ವರಿಸಿ, ಅದರಿಂದ ಆಕೆಯೊಡನೆ ಯುದ್ಧವೊದಗಿ ಎಷ್ಟು ಪ್ರಯತ್ನಪಟ್ಟರೂ ಸಾಗದೆ ಆಕೆಯ ಮೋಸಕ್ಕೆ ಬಲಿಬಿದ್ದು ಮೃತನಾಗುವನು. ಶಿವ ಪ್ರತ್ಯಕ್ಷನಾಗಿ ಸತ್ತವರನ್ನು ಬದುಕಿಸುವನು ! ಕರಿರಾಜ ಭುವನಮೋಹಿನಿಯನ್ನು ಮದುವೆಯಾಗುವನು.

ಕರಿರಾಜ ತನ್ನ ತಾಯಿಯ ಅಪ್ಪಣೆಗೆ ವಿರುದ್ಧವಾಗಿ ರಾಜಕುಮಾರಿಯ ಮದುವೆಗೆ ಹೊರಟು ಮಧ್ಯೆ ಅನೇಕ ಆಪತ್ತುಗಳಿಗೀಡಾಗುವನು. ಆದರೆ

ತನ್ನನ್ನು ಒಲಿದ ಈರ್ವರು ಸತಿಯರ ಶುದ್ಧ ಪ್ರೇಮದಿಂದಲೂ, ಅವನ ಭಕ್ತಿಯಿಂದಲೂ ಶಿವನನ್ನು ಮೆಚ್ಚಿಸುವನು. ಕೊನೆಗೆ ಕಲ್ಯಾಣವಾಗುವುದು.

ಕರಿಬಂಟನ ಕತೆಯ ಬಹುಭಾಗ ರಾಕ್ಷಸಿ ಅವಳ ತಮ್ಮ ಬೊಮ್ಮ ಒಂದು ಕಡೆ; ಕರಿರಾಜ ಮತ್ತು ರಾಕ್ಷಸಿಯ ಮಗಳು ಮತ್ತೊಂದು ಕಡೆಯಾಗಿ ಈ ಎರಡು ಪಕ್ಷಗಳಿಗೂ ವಾದ, ಜಗಳ, ಹೋರಾಟ ನಡೆಯುವುದೇ ಆಗಿದೆ. ತಮ್ಮನಾದ ಬೊಮ್ಮನನ್ನು ಕಳೆದುಕೊಂಡರೂ, ರಾಕ್ಷಸಿ ಮಗಳ ಮಂಗಳವನ್ನೂ ನೆನೆಯದೇ ಕರಿರಾಜನನ್ನು ಕೊಲ್ಲಲು ಸಕಲ ಪ್ರಯತ್ನಗಳನ್ನೂ ಮಾಡುವಳು. ಕೊನೆಗೂ ಮೋಸದಿಂದಲಾದರೂ ಅವನನ್ನು ತೀರಿಸುವಳು. 1 ಭುವನ ಮೋಹಿನಿಯ ಲಗ್ನದ ವಿಚಾರ, ಲಗ್ನದ ಭಾಗ ಬಂದಿರುವುದು ಬಹಳ ಕಡಮೆ.

ಈ ಕತೆಯ ಚೌಕಟ್ಟಿನಲ್ಲಿ ಕವಿ ಚಮತ್ಕಾರದಿಂದ ಅಲ್ಲಲ್ಲಿ ಶೋಕ, ಕರುಣ, ಶೃಂಗಾರ, ಅದ್ಭುತ, ಬೀಭತ್ಸ ಭಾವಗಳನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ. ಕೆಲವು ಪಾತ್ರಗಳು ರಮ್ಯವಾಗಿ ಚಿತ್ರಿತವಾಗಿವೆ. ಉದಾ: ಪುಂಡರೀಕಾಕ್ಷಿ (ರಾಕ್ಷಸಿಯ ಮಗಳು)ಯ ಪವಿತ್ರ ಪ್ರೇಮ, ಆದರ ಗಾಢತೆ.

ಯಕ್ಷಗಾನದ ಲಕ್ಷಣದಲ್ಲಿ ಹೇಳಿರುವಂತೆ ಭಾಗವತನ ಕೆಲಸ ಇಲ್ಲಿ ಬಹಳ ಮುಖ್ಯ. ರಂಗಸ್ಥಳವು ಬಿಡುವಾದಾಗ, ಪ್ರೇಕ್ಷಕರಿಗೆ, ಏನಾದರೊಂದನ್ನು ಹೇಳಿ, ಬೇಜಾರಾಗದಂತೆ ನೋಡಿಕೊಳ್ಳುವ ಯೋಜನೆ ಇಲ್ಲಿದೆ. ಅಲ್ಲದೆ ಕೆಲವು ಸಮಯಗಳಲ್ಲಿ ಭಾಗವತ ವ್ಯಾಖ್ಯಾನವನ್ನೂ ಮಾಡುತ್ತಾನೆ ಇಲ್ಲಿ. ಪಾತ್ರಗಳನ್ನು ಪರಿಚಯ ಮಾಡಿಕೊಡುತ್ತಾನೆ. ಕತೆ ಮುಂದುವರಿಯುವಂತೆಯೂ ಸಹಾಯ ಮಾಡುತ್ತಾನೆ.

ಇಲ್ಲಿ ವಿದೂಷಕನ ಪಾತ್ರವೂ ಬರುತ್ತದೆ. ಆದರೆ ಸಂಸ್ಕೃತ ನಾಟಕಗಳಲ್ಲಿ ನಾವು ನೋಡುವ ವಿದೂಷಕ ಪಾತ್ರದಂತೆ ಅಲ್ಲ ಇದು. ಇಲ್ಲಿಯ ವಿದೂಷಕ ಕೇವಲ ಒಬ್ಬ ಚಾರನ ಸ್ಥಾನವನ್ನೇ ಪಡೆದಿರುವನೆಂದು ಹೇಳಬಹುದು. ರಂಗದ ಮೇಲೆ ಬರುವ ಎಲ್ಲ ಪಾತ್ರಗಳಿಗೂ ಸಹಾಯ ಸೇವೆ

---

1 ಈಗಲೂ ದುಷ್ಟೆ ಎಂದು ಟೀಕಿಸುವಾಗ, ಬಯ್ಯುವಾಗ "ತೊಣ್ಣೂರಿನ ರಾಕ್ಷಸಿಯಂತಿರುವಳು" ಎಂದು ಹೇಳುವುದು ಅನೇಕರಲ್ಲಿ ರೂಢಿ ಇದೆ.

ಮಾಡುತ್ತಾನೆ ಇಲ್ಲಿಯ ಈ ವಿದೂಷಕ. ಇವನ ಸೇವೆಯನ್ನು ಇಲ್ಲಿಯ ಯಾವ ಪಾತ್ರವಾದರೂ ಉಪಯೋಗಿಸಿಕೊಳ್ಳಬಹುದೆಂದು ಕಂಡುಬರುತ್ತದೆ. ಸಹಜವಾಗಿ ಬರಬೇಕಾದ ವಿದೂಷಕನ ಹಾಸ್ಯ ಮತ್ತು ಇತರ ಗುಣಗಳು ಈ ವಿದೂಷಕನಲ್ಲಿ ಕಂಡುಬರುವುದಿಲ್ಲ.

ಈ ಕತೆ ಶಿವನು ಪಾರ್ವತಿಗೆ ಹೇಳಿದಂತೆ ಕವಿ ಹೇಳಿದ್ದಾನೆ. ಅತಿ ಮಾನುಷ ಘಟನೆಗಳು ಬಂದರೂ ಕತೆಯ ಓಟ ಕುಂಟದೆ, ಮುಗ್ಗರಿಸದೆ ಮುಂದುವರಿಯುತ್ತದೆ. ಇಲ್ಲಿ ಬರುವ ಊರ ಗೌಡರು ಸತ್ಯಸಂಧರು. ವಿನಾ ಕಾರಣ ಅವರು ನರಳಬೇಕಾಗುತ್ತದೆ ರಾಕ್ಷಸಿಯ ಕೈಗೆ ಸಿಕ್ಕು.

ಯಕ್ಷಗಾನಗಳಲ್ಲಿ ಈ ಕತೆ ಬಹಳ ಜನಜನಿತವಾಗಿರುವಂತೆ ತೋರುತ್ತದೆ. ಕರೀಬಂಟನ ಕತೆಯನ್ನು ಹೇಳುವ ಯಕ್ಷಗಾನಗಳು ಅನೇಕ ಇರುವಂತಿದೆ. ಇನ್ನೊಂದು ಸಿಕ್ಕಿರುವುದು ಸಿದ್ಧೇಶ ಬರೆದುದು ಎಂದಿದೆ. ಕತೆಯಲ್ಲಿ ವ್ಯತ್ಯಾಸಗಳೇನೂ ಹೆಚ್ಚಾಗಿಲ್ಲ.

ಸಿದ್ಧೇಶನ ಯಕ್ಷಗಾನದಲ್ಲಿ ಕರಿರಾಜ ಕಾಶ್ಮೀರದೇಶದ ಧಾರಾಪುರದ ರಾಜ ಮೂರಭೂಪನ ಮಗ. ಇಲ್ಲಿಯೂ ಕರಿರಾಜನ ಸಾಹಸ, ಶೌರ್ಯ, ಆತನಿಗೆ ಬಂದ ವಿಪತ್ತುಗಳು, ಅವು ಪರಿಹಾರವಾದ ಬಗೆ, ಇವು ನಿರೂಪಿತವಾಗಿವೆ. ಸಂಸ್ಕೃತ ಶ್ಲೋಕಗಳೂ ಅನೇಕ ಉಧೃತವಾಗಿವೆ. ಕರಿರಾಜ–ಪುಂಡರೀಕಾಕ್ಷಿ; ರಾಕ್ಷಸಿ–ಮಗಳು; ರಾಕ್ಷಸಿ–ಕರಿರಾಜ ಇವರ ಸಂಭಾಷಣೆಗಳು ಅಶ್ಲೀಲವಾದರೂ ನಾಟಕೀಯವಾಗಿವೆ. ಇಲ್ಲಿ ಸಂಸ್ಕೃತ ಶ್ಲೋಕಗಳೊಂದಿಗೆ ಕೆಲವು ಹಿಂದುಸ್ತಾನೀ ಮಾತುಗಳೂ ಬರುತ್ತವೆ! ಕರಿರಾಜ ಪುಂಡರೀಕಾಕ್ಷಿಯರು ಹಿಂದುಸ್ತಾನಿಯಲ್ಲಿ ಮಾತನಾಡುತ್ತಾರೆ.

ಯಕ್ಷಗಾನ ಪ್ರೇಮಿಗಳು ಈ ಕತೆಯನ್ನು ಮೆಚ್ಚುವುದು ಬಹಳ, ಎಂದು ಹೇಳುತ್ತಾರೆ.

(೩) ಕುಮಾರ ರಾಮನ ಕತೆ

ಕವಿಯ ಹೆಸರು ಇಲ್ಲಿಯೂ ತಿಳಿದುಬರುವುದಿಲ್ಲ.

ಮೊದಲು ಗಣಪತಿ ಸ್ತುತಿ. ಮುಕ್ಕಣ್ಣ, ಪಾರ್ವತಿ, ಶಾರದೆಯರ ನೆನಸಿ ಗುರುವಿನ ಪಾದಕ್ಕೆ ವಂದಿಸಿ ಹಿರಿಯರಿಗೆರಗಿ ಚಿಕ್ಕ ಬಾಲಕನಾದ ರಾಮನ ಕತೆಯನ್ನು ಯಕ್ಷಗಾನದಲ್ಲಿ ಹೇಳುತ್ತೇನೆ. ಬಲ್ಲವರು ತಿಳಿದು ತಿರಸ್ಕರಿಸದೆ ತಪ್ಪಿದ್ದಲ್ಲಿ ತಿದ್ದುವುದು ಮನದಿ ಬೇಸರಿಸದೆ, ಎಂದು ಹೇಳಿ ಕತೆ ಪ್ರಾರಂಭವಾಗುತ್ತದೆ.

ವಿನಾಯಕನನ್ನು 'ಕೆಲಸವಾಯಿತು, ಹೊತ್ತಾಯಿತು ಹೋಗು' ಎನ್ನುತ್ತಾನೆ ಸಾರಥಿ! "ಧರೆಯೊಳಗೆ ಮಾಂಬಳ್ಳಿ ಪುರದಲ್ಲಿ ಸ್ಥಿರದಿ ನೆಲಸಿದ ದೇವ, ಯನ್ನನು ತ್ವರಿತದಿಂದಲಿ ಪೊರೆಯೋ ವೈದೇಶ" ಎಂದು ಬಹುಶಃಕುಲದೇವರನ್ನು ಸ್ಮರಿಸಿದ ಮೇಲೆ ಶ್ರೀ ಕೃಷ್ಣನು ಬಂದು ತನ್ನ ಪರಿಚಯ ಮಾಡಿಕೊಂಡು ದಶಾವತಾರಗಳನ್ನು ವರ್ಣಿಸಿ ಹೇಳುವನು.

ಎಂದಿನಂತೆ ಪಾತ್ರಗಳು ಬಂದಾಗ ಸಾರಥಿ ಅವರನ್ನು 'ನೀನು ದಾರು?' ಎಂದು ಪ್ರಶ್ನೆಮಾಡುವನು. ಅವರು ಅದಕ್ಕೆ ಉತ್ತರವಾಗಿ ಅವರ ಪರಿಚಯ ಹೇಳುವರು. ಸಂಸ್ಕೃತ ಶ್ಲೋಕವನ್ನು ತಪ್ಪಾಗಿ ಹೇಳುವರು-("ಯಾಕುಂದೇಂದು ತುಷಾರ ಹಾರ')ಕಮ್ಮಾರ ದುರ್ಗದಧಿಪತಿಯಾದ ಕಂಪಿಲರಾಯನು ಬರುವನು. ಬಳಿಕಮಂತ್ರಿ "ಸೊಕ್ಕಿದಮೃಗಗಳ| ನೊಕ್ಕಲಿಕ್ಕುತಲೀಗ| ಮಿಕ್ಕಮೃಗ ಜಾತಿಗಳ| ದಿಕ್ಕು ದಿಕ್ಕಿಗ ಹೊಂಡಿಸುವೆ| ಬಾಗೈಯ್ಯ". ಪ್ರಜಗಳ ಮೇಲಿನ ಕರುಣೆಯಿಂದ ಕಂಪಿಲರಾಯನು ಬೇಟೆಯಾಡಲು ಹೊರಡುವನು. 'ಪರನಾರಿ ಸಹೋದರ'ನಾದ ತನ್ನ ಮಗ ಕುಮಾರ ರಾಮನಿಗೆ 'ಬ್ಯಾಟಿ'ಯಸುದ್ದಿ ತಿಳಿಸಿ, ಅವನನ್ನು ಜೊತೆಗೆ ಕರೆದುಕೊಂಡು ಹೋಗುವ ಆಶೆ ರಾಜನಿಗೆ ಇರುತ್ತದೆ. ಆದರೆ ಹಿರಿಯ ರಾಣಿಯಾದ ಅರಿಯಾಲೆಯು ತನ್ನ ಸವತಿ ರತ್ನಾಜಿಯೊಂದಿಗೆ ತಾನು ಒಬ್ಬಳೇ ಇರಲಾರೆನೆಂದೂ, ಅಲ್ಲದೆ ಮಗನನ್ನು ಬಿಟ್ಟಿರಲಾರೆನೆಂದೂ ಹೇಳಿದುದರಿಂದ, ಆಕೆಯ ಇಚ್ಛೆಯಂತೆ ಕಂಪಿಲ ರಾಯನು ಮಗನನ್ನು ಬಿಟ್ಟೇ ಬೇಟೆಗೆ ಹೊರಡಲು ನಿಶ್ಚಯಿಸುತ್ತಾನೆ.

ಇತ್ತ ಕುಮಾರ ರಾಮು ಮತ್ತು ಅವನ ಚಿಕ್ಕಮ್ಮ ಅಂಬಾಜಮ್ಮನ ಮಗ ಕಾಟಣ್ಣ ಇವರು ಅರಿಯಾಲೆಯ ಬಳಿಯಿದ್ದ ಸ್ವಾತೀವರುಷದ ಜಾತಿ ಮುತ್ತಿನ

ಚೆಂಡನ್ನು ಪಡೆದು ಆಟವಾಡುವ ಉದ್ದೇಶದಿಂದ ಹಿರಿಯರಾಣಿಯ ಅಂತಃಪುರಕ್ಕೆ ಆಗಮಿಸುತ್ತಾರೆ.

ಇಲ್ಲೆಲ್ಲಾ 'ಘನ ಶಿವಲಿಂಗ' ಎಂಬ ಮಾತು ಪದೇಪದೇ ಬರುತ್ತದೆ. ಪ್ರತಿ ಪಾತ್ರವೂ ಕೊಂಚ ಹೆಚ್ಚುಕಡಿಮೆ ಒಂದೇ ರೀತಿಯಾಗಿ ಪರಿಚಯ ಮಾಡಿಕೊಳ್ಳುವುದು ಕಂಡುಬರುತ್ತದೆ.

ಕುಮಾರ ರಾಮನನ್ನು ತಾಯಿ ಅರಿಯಾಲೆಯು ಅಕ್ಕರೆಯಿಂದ ಸ್ವಾಗತಿಸುತ್ತಾಳೆ. ಬಂದ ಕಾರಣವನ್ನು ಪ್ರೀತಿಯಿಂದ ಕೇಳುತ್ತಾಳೆ. ಮಗ ಮುದ್ದಿನಿಂದಲೇ ಮುತ್ತಿನ ಚೆಂಡನ್ನು ಆಟಕ್ಕೆ ಕೇಳುತ್ತಾನೆ—ಈ ಚೆಂಡು ಅವರ ಮುತ್ತಯ್ಯನದಂತೆ.

ತಾಯಿ ಅರಿಯಾಲೆ : ಈ ಕಂದುಕದಾಟಬೇಡ. ಇದರಿಂದ ಕೇಡು ಸಂಭವಿಸುವುದು. ಹಿಂದೆ ಪಾಂಡವರು, ನಳಮಹಾರಾಜ, ಬಲಿ ಮೊದಲಾದವರು ಚಂಡಾಡಿ ಕಷ್ಟಕೀಡಾದರು. (?)

ಕುಮಾರ ರಾಮ : ನನ್ನ ಜೊತೆಯಲ್ಲಿ ಅನೇಕ ಮಿತ್ರರು ಬಂದಿದ್ದಾರೆ. ಅವರು ಆಟವಾಡಲು ಕಾತುರರಾಗಿದ್ದಾರೆ. ಅವರು ಹಿಂದಕ್ಕೆ ಹೋಗಲಾರರು. ಅಂದವಾದ ಕಂದುಕವನ್ನು ಕೊಟ್ಟು ನಿನ್ನ ಕಂದನಿಗೆ ಏನೂ ಕುಂದು ಬರದಂತೆ ಹರಸಿ ಕಳುಹಿಸಿಕೊಡು.

ಅರಿಯಾಲೆ : ಇಂದು ನನಗೆ ಕನಸಿನಲ್ಲಿ ಒಬ್ಬ ಸ್ತ್ರೀ, ಪುರುಷನನ್ನು ನುಂಗಿದಂತೆ ದುಃಸ್ವಪ್ನವಾಗಿದೆ. ಆದ್ದರಿಂದ ನಿನಗೆ, ಕೇಡು ಸಂಭವಿಸಬಹುದು. ಚೆಂಡಾಟದ ಆಸೆಯನ್ನು ಬಿಡು.

ಕು. ರಾಮ : ಅದೃಷ್ಟವೇ ಹಾಗಿದ್ದರೆ ಯಾರೂ ಏನೂ ಮಾಡಲಾರರು. ಇಂದ್ರನಿಗೆ ಅಷ್ಟೆಲ್ಲಾ ಇದ್ದರೂ ದಾನವರಿಗೆ ಹೆದರಿ ಸಾಕ್ಷಾತ್ ಶ್ರೀಕೃಷ್ಣ ಮೂರ್ತಿಯನ್ನು ಮೊರೆಹೊಕ್ಕನು. ಯೋಚನೆ ಮಾಡಬೇಡ. ಚೆಂಡನ್ನು ಕೊಡು.

" ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ |
ಲಲಾಟ ಲಿಖಿತಾರೇಖಾ | ಪರಮಾಷ್ಟಂ ಸಶಕ್ಯತೆ || "

ರಾಣಿಯು ಇಲ್ಲಿ ರಾಜಕುಮಾರನಿಗೆ ಚೆಂಡಾಟಬೇಡವೆಂದು ಏಕೆ ಹೇಳುವಳೋ ಸರಿಯಾಗಿ ಅರ್ಥವಾಗುವುದಿಲ್ಲ. ಕೊನೆಯಲ್ಲಿ ಮಾತ್ರ ಈ ಮಾತಾಡುತ್ತಾಳೆ.

ಅರಿಯಾಲೆ : ನೀವು ಇಪ್ಪತ್ತೆರಡು ಜನ ಕೂಡಿ ಲಗ್ಗೆ ಆಡುವಾಗ ಚೆಂಡು ರತ್ನಾಜಿಯ ಬಳಿಗೆ ಹೋದರೆ ಕಂಟಕ ಬರುವುದು ಆದ್ದರಿಂದ ಬೇಡ.

ಆಗ ರಾಮನಿಗೆ ಕೋಪ ಬರುತ್ತದೆ. ತಾಯಿಯೊಡನೆ ಮಾತನಾಡುವುದಿಲ್ಲೆಂದು ಹಟ ಮಾಡುತ್ತಾನೆ. ಅರಿಯಾಲೆಯು ಪ್ರೇಕ್ಷಕ ವರ್ಗವನ್ನೇ ಮಗನಿಗೆ ಬುದ್ಧಿ ಹೇಳಬೇಕೆಂದು ಕೇಳಿಕೊಳ್ಳುತ್ತಾಳೆ! ಕೊನೆಗೆ ಏನು ಹೇಳಿದರೂ ಅವನು ಕೇಳದಿದ್ದುದರಿಂದ ಚೆಂಡನ್ನು ಕೊಟ್ಟು ರತ್ನಾಜಿಯ ಬಳಿಗೆ ಮಾತ್ರ ಚೆಂಡು ಹೋಗದಂತೆ ನೋಡಿಕೋ, ಸದಾ ವೈದ್ಯೇಶ್ವರನನ್ನು ನೆನೆದುಕೋ, ಎಂದು ಬುದ್ಧಿವಾದವಿತ್ತು ಕಳುಹಿಸುತ್ತಾಳೆ.

ರಾಮನು ಸಂತೋಷದಿಂದ ಚೆಂಡು ತಂದು ಸ್ನೇಹಿತರನ್ನು ಆಟಕ್ಕೆ ಕರೆಯುತ್ತಾನೆ. ಕಾಟಣ್ಣ 'ಹಿಂದೆ ಕಾರ್ತವೀರ್ಯನನ್ನು ಮಾಯಾಂಗನೆ ಎಂಬ ಕಂದೂಕವು ನಾಶಮಾಡಿತಾದ್ದರಿಂದ ನಾನು ಆಟಕ್ಕೆ ಬರುವದಿಲ್ಲ, ಎಂದು ಹೇಳುತ್ತಾನೆ. ಅಲ್ಲದೆ ಗುರುಹಿರಿಯರ ಮಾತನ್ನು ಅಲಕ್ಷಿಸಕೂಡದೆಂದೂ ರಾಮನನ್ನು ಎಚ್ಚರಿಸುತ್ತಾನೆ. ಆದರೆ ಕುಮಾರರಾಮನಿಗೆ ಈ ಆಟದ ಮೇಲೆ ಮಮತೆ ಬಹಳ. ಆದ್ದರಿಂದ ಸ್ನೇಹಿತರನ್ನು ಬಲವಂತ ಮಾಡಿ ಆಟ ಪ್ರಾರಂಭಿಸುತ್ತಾನೆ.

"ಗುರು ಭೀಮೇಶನ ಚರಣವ ಭಜಿಸುತ್ತ" ಭೀಮ, ಭೀಮೇಶ, ಎಂಬ ಮಾತುಗಳು ಆಗಾಗ್ಗೆ ಬರುತ್ತವೆ.

ಇವರ ಆಟ ಪ್ರಾರಂಭವಾದುದನ್ನು ತಿಳಿದ ಚಿಕ್ಕರಾಣಿ ರತ್ನಾಜಿ "ಓರುಗಲ್ಲಿನ ಭೂಪ ಧೀರ ರುದ್ರನ ಜೈಸಿ ಮೀರಿದಪ್ಪವ ತಂದ ವಾರಿಜನಾಭ" ನಾದ ರಾಮನನ್ನು ನೋಡಲು ಮಹಡಿಯಲ್ಲಿ ಬಂದು ನಿಲ್ಲುತ್ತಾಳೆ. ಈಕೆ 'ಅಂಗಜನ ಮಡದಿಗಿಂದಧಿಕ ರೂಪುಳ್ಳ ಅಂಗನೆ'ಯಂತೆ. ಇವಳಿಗೊಂದು ಕೊರತೆ. 'ಸರಸ ಸಲ್ಲ....ತಕ್ಕ ಗಂಡನಿಲ್ಲದ ಮೇಲೆ ಎಷ್ಟು ಭಾಗ್ಯವಿದ್ದರೇನಮ್ಮ'

ರತ್ನಾಜಿ ಬಹುಶಃ ಮಲಮಗನಾದ, ಮಾರಸನ್ನಿಭನಾದ ರಾಮನನ್ನು ಪ್ರೀತಿಸುತ್ತಾಳೆ. ಮಹಡಿಯಿಂದ ಈಗ ರಾಮು ತನ್ನ ವಾರಿಗೆಯವರೊಡನೆ ಆಟವಾಡುತ್ತಿರುವುದನ್ನು ನೋಡುತ್ತಿರುವಾಗ ಸಖಿ ಸಂಗಾಯಿ ಎಂಬವಳು ಮಧ್ಯೆ ಮಧ್ಯೆ ರಾಮನನ್ನು ಹೊಗಳುತ್ತ ಆಟವನ್ನು ವರ್ಣಿಸುತ್ತಾಳೆ. ರತ್ನಾಜಿಯ ರಾಮನ ಮೋಹ ಉಲ್ಬಣವಾಗುತ್ತದೆ. ಇಬ್ಬರೂ ಅವನ ವಿಷಯ ಮಾತನಾಡಿದಂತೆಲ್ಲ ರಾಣಿಯ ಮೋಹ ಬಲಿಯುತ್ತದೆ.

ರತ್ನಾಜಿ ರಾಮನು ತನ್ನ ಮನೆಗೆ ಬರುವಂತಾಗಲೆಂದು ಪಾರ್ವತಿಯನ್ನು ಪ್ರಾರ್ಥಿಸುತ್ತಾಳೆ!

ಗಗನಕೇರುವ ಚೆಂಡು | ಘನದಿ ಬೇಗನೆ ಬಂದು |
ಸುಗುಣಿ ಎನ್ನನು | ಸೇರುವಂತೆ ಮಾಡಮ್ಮ ....ತಡೆಯದೆ
ರಾಮು ಬರುವಂತೆ ಮಾಡಮ್ಮ ||

ಅಷ್ಟುಹೊತ್ತಿಗೆ ಕೆಳಗೆ ಚೆಂಡಾಡುತ್ತಿದ್ದವರಲ್ಲಿ ಒಬ್ಬ ಚೆಂಡನ್ನು ಜೋರಾಗಿ ಹೊಡೆದಾಗ ಅದು ಪುಟನೆಗೆದು ಮೇಲಕ್ಕೆ ಹಾರಿತು. ಆಗ ಮಹಡಿಯ ಮೇಲಿದ್ದ ರತ್ನಾಜಿ "ಪುಟನೆಗೆದ ಚೆಂಡನ್ನು ಹಸ್ತದಿಂ ಪಿಡಿಕೊಂಡು" ಒಳಗೆ ಹೋದಳು" ಕೇಡಿಗ ರತ್ನಿ"!

"ಔದುಂಬರಾಣಿ ಪುಷ್ಪಾಣಿ | ಶ್ವೇತಕಾರ ಶತ್ಯೈರಪಿ |
ಮತ್ಸ್ಯಪಾರ ಜಲಂ ದೃಷ್ಟ್ವ | ನಾರೀಹೃದಯ ನಪಶ್ಯತಿ|"

ಚೆಂಡು ರತ್ನಾಜಿಯ ಮಹಡಿಗೇ ಹೋಯಿತೆಂದು 'ಸಂದಣೀಯ ಸುಭಟರು' ನಿಶ್ಚಯಿಸುತ್ತಾರೆ. ಕಾಟಣ್ಣನು 'ನಾರೀಹೃದಯ ನಪಶ್ಯತಿ' ಎಂದು ಎಚ್ಚರಿಸುತ್ತಾನೆ. ತಾಯಿಯ ಮಾತು ಮೀರಿದುದರಿಂದ ಕೇಡು ಸಂಭವಿಸಿತು ಎನ್ನುತ್ತಾನೆ. ಆದರೂ ರಾಮನು ಕಾಟಣ್ಣನನ್ನೇ ಚೆಂಡು ತರಲು ರತ್ನಾಜಿಯ ಅಂತಃಪುರಕ್ಕೆ ಕಳುಹಿಸುತ್ತಾನೆ. ರತ್ನಾಜಿಯ ಬಳಿಬಂದು ತಮ್ಮ ಚೆಂಡನ್ನು ಕೊಡಬೇಕೆಂದು ಪರಿಪರಿಯಾಗಿ ಬೇಡುತ್ತಾನೆ. ಆಕೆಯದುರಿಗೆ ರಾಮನನ್ನು 'ರತಿಪತಿರೂಪ' ನೆಂದು ಹೊಗಳುತ್ತಾನೆ!

ರತ್ನಾಜಿ ಮಾತ್ರ ಎಲ್ಲವನ್ನೂ ಕೇಳಿ ಕೊನೆಗೆ ಚಿಕ್ಕ ರಾಮನು ಬಂದರೇನೆ ಚೆಂಡು ಕೊಡುವುದು ಎಂದು ಖಂಡಿತವಾಗಿ ಹೇಳುತ್ತಾಳೆ.

"ಯಾರ ಕಂದುಕವನ್ನು ಯಾರಿಗೆ ಕೊಡಲೊ | ಮಾರ ಸುಂದರ ಬಾಲನ ಬರಹೇಳೊ | ಕಂದಯ್ಯ ತಕತ್ತೈಯ್ಯಾ ||

"ತಾಯಿ ನಾನಾದರೆ ಮಗನು ತಾ ಬರುವ | ಪ್ರೀತಯಿದ್ದರೆ ಬಂದು ಮಾತನಾಡಿಸುವ" ಎನ್ನುತ್ತಾಳೆ.

ಕಾಟಣ್ಣ ಆಕೆಯ ಮಾತಿನಿಂದಲೇ ಸಂಶಯ ಪಡುತ್ತಾನೆ. ಆದರೂ ಚೆಂಡಿ ನಾಸೆಯಿಂದ ರಾಮನು ರತ್ನಾಜಿಯಲ್ಲಿಗೆ ಬರುತ್ತಾನೆ. ಸಖಿ ಸಂಗಾಯಿ ರಾಮನನ್ನು ಸ್ವಾಗತಿಸಿ ಒಡತಿಗೆ "ರಾಮ ಬಂದಿದ್ದಾನೆ" "ನಿಮ್ಮ ಚಂಚಲ ವಾದ ಮೃದುನುಡಿಗಳಿಂದ ಮರುಳು ಮಾಡಿ ಒಳಗು ಮಾಡಿಕೊಳ್ಳಬಹುದು ತಾಯೆ" ಎಂದು ಸೂಚಿಸುತ್ತಾಳೆ. ರಾಮ ರತ್ನಾಜಿ – ಮಲತಾಯಿ – ಯನ್ನು, ಆಟವಾಡುತ್ತಿದ್ದಾಗ ಮೇಲೆ ನೆಗೆದು ನಿಮ್ಮ ಮನೆಗೆ ಬಿದ್ದ ಮುತ್ತಿನ ಚೆಂಡನ್ನು ಕೊಡಿರೆಂದು ಕೇಳಿದರೆ ರಾಣಿ ರಾಮನಿಂದ ರತಿಸುಖವನ್ನು ಬಯಸುತ್ತಾಳೆ! ಬಾಯಿಬಿಟ್ಟು ಲಜ್ಜೆಗೆಟ್ಟು ಕೇಳುತ್ತಾಳೆ. ರಾಮನು ಮಾತ್ರ ಒಪ್ಪುವದಿಲ್ಲ. ಇಬ್ಬರಿಗೂ ಈ ವಿಷಯವಾಗಿ ಮಾತು ನಡೆಯುವುದು. ರಾಮನು ನೀತಿ ಯನ್ನು ಸಾರುವನು.

ರತ್ನಾಜಿ ಮತ್ತು ಕುಮಾರ ರಾಮ ಇವರಿಬ್ಬರ ಸಂಭಾಷಣೆಯಲ್ಲಿ ರತ್ನಾಜಿ ತನ್ನ ಅಳಿಯಾಸೆಯನ್ನು ತೀರಿಸಿಕೊಳ್ಳುವ ಆಲೋಚನೆ ಮಾಡಿ ಅದನ್ನು ಅರುಹುವಾಗ ಕವಿ ಬಹಳ ಜಾಣ್ಮೆಯನ್ನು ತೋರಿಸಬಹುದಾಗಿದ್ದಿತು. ಆದರೆ ಇಲ್ಲಿ ಜಾಣ್ಮೆಯಾಗಲೀ ನಯವಾಗಲೀ ಇಲ್ಲ. ಪದೇಪದೇ ಒಂದೇ ಮಾತನ್ನು ರತ್ನಾಜಿ ಯಾಂತ್ರಿಕವಾಗಿ ನುಡಿಯುತ್ತಾಳೆ.

ರತ್ನಾಜಿ : ಚಂದ್ರನು ತನ್ನ ಗುರು ಸ್ವಾಮಿಯಾದ ಬೃಹಸ್ಪತಿ ಸತಿ ತಾರೆ ಯೊಡನೆ ರಮಿಸಲಿಲ್ಲವೆ? ಕೃಷ್ಣನು ಸೋದರತ್ತೆಯೆಂಬ ಭೇದ ವಿಲ್ಲದೆ ರಾಧೆಯನ್ನು ಕೂಡಲಿಲ್ಲವೆ?

ರಾಮ : ಸುರರು ಕೂಡಿದರೆಂದು ನರರು ಕೂಡುವದುಂಟೆ? ನರಕವೇ ಸರಿ ಎಂದು ತಿಳಿಯಮ್ಮ ತಾಯೆ.

ರತ್ನಾಜಿ : ಇಂದ್ರತನೂಜ ವಾಲಿ, ನಾದಿನಿಯನ್ನು ಸುಖಿಸಲಿಲ್ಲವೆ?

ರಾಮ : ಇಂದ್ರ ಅಹಲ್ಯೆಯರ ಸಂಬಂಧದಿಂದ ಇಂದ್ರನ ದೇಹ ರಂಧ್ರ ವಾಯಿತು. ನಮ್ಮ ತಂದೆ ಕಂಪಿಲರಾಯನಿಗ ಅಂದದ ರಾಣಿ

ಯಾಗಿ ಕಂದನನ್ನು ಕಂಡು ಹಂಬಲಿಸುವದು ಇದು ಯಾವ ಚಂದವಮ್ಮ ಮಾತೆ.

ರತ್ನಾಜಿ : ಕಂಪಿಲರಾಯನಿಗೆ ಕುಶಲದಿಂದ ವಿಷ ನೀಡುವೆ. ವಸುಮತಿ ದುರ್ಗ ನಿನ್ನ ವಶಮಾಡುವೆ.

ರಾಮು : ಪತಿಯ ಕೊಂದರೆ ಸದ್ಗತಿ ಇಲ್ಲವಮ್ಮ ಮಾತೆ.

ರತ್ನಾಜಿ : ನೀನು ನನಗೆ ಸುತನಲ್ಲ. ಪತಿಯಹುದು. ಅಂದು ಕಂಪಿಲ ರಾಮುಗೆಂದು ಕನ್ಯವ ಬೇಡಿ ಸುಂದರತ್ವಕ್ಕೆ ಮನಸೋತು ಹೊಂದಿದರೆ ಹೊಂದುವಳಲ್ಲೊ ನಾನು — ಇಂದು ಪುಣ್ಯವಶ ದಿಂದ ನೀನು ನನ್ನ ಮಂದಿರಕ್ಕೆ ಬಂದಿದ್ದೀಯ.

ರಾಮು : ಸಲ್ಲದೀ ಮಾತು ನಂನೊಳು ಕೇಳಮ್ಮ ಜನನಿ. ದಯವಿಟ್ಟು ಕಂದೂಕವನ್ನು ಕೊಟ್ಟುಕಳುಹಿಸು. ಹರನು ವಿಷವ ನುಂಗಿದ ನೆಂದು ನರರು ನುಂಗುವರೇ. ತರಳನೊಬ್ಬನೆ ಸಿಕ್ಕಿದನೆಂದು ಕೊರಳ ಕೊಯಿಸುವರೆ — ಬೇಡಮ್ಮ ಮಾತೆ ಬೇಡಿಕೊಂಬೆ.

ರತ್ನಾಜಿ : ಊರ್ವಶಿಯ ಇಷ್ಟಕ್ಕೆ ವಿರೋಧವಾಗಿ ನಡೆದುದರಿಂದ ಅರ್ಜುನ ನಿಗೆ ಶಾಪ ಬಂದಿತು. ಮಾನಿನಿಯರ ಮಾತನ್ನುಪೇಕ್ಷಿಸ ಲಾಗದೋ ರಾಮು. ಅಂತಹವರು ಪುರುಷರೇ ಅಲ್ಲ ಎಂದು ಎಚ್ಚರಿಸುವಳು. ತಾನು 'ಮಾನಿನಿ' ಎಂದೂ ಹೇಳಿಕೊಳ್ಳುವಳು!

ರಾಮು : ಪತಿಯನ್ನು ಬಿಟ್ಟು ಪರಪುರುಷನನ್ನು—ಮಗನನ್ನು—ಬಯಸು ವವಳು ವಧೆಗೆ ಅರ್ಹಳು. ಆದರೂ ತಾಯಿಯೆಂಬ ಸಲಿಗೆ ಯಿಂದ, ಕಂದೂಕವನ್ನು ಬೇಡ ಬಂದದ್ದರಿಂದ ಬಿಟ್ಟೆನು. ಕಂಪಿಲ ರಾಯನು ಬಂದು ನೀವು ಬಂಧಿಸಿರುವ ಬಾಗಿಲನ್ನು ತೆಗೆಸುವ ವರೆಗೂ ಇಲ್ಲಿಯೇ ನಿಮ್ಮ ಕುಮಾರನಂತೆ ಬಿದ್ದಿರುವೆನು.

ಒಟ್ಟಿನಲ್ಲಿ ಇವರ ಸಂವಾದ ಅಷ್ಟೇನೂ ರಸವತ್ತಾಗಿಲ್ಲದಿದ್ದರೂ, ಇದ್ದುದರಲ್ಲಿ ಚನ್ನಾಗಿರುವುದನ್ನು ಆಯ್ದು ಇಲ್ಲಿ ಕೊಟ್ಟಿದೆ. ಅನೇಕ ಸಂಸ್ಕೃತ ಶ್ಲೋಕ ಗಳೂ, ವಾಕ್ಯಗಳೂ ಇಲ್ಲಿ ಉದ್ಧೃತವಾಗಿವೆ. ಕುಮಾರ ರಾಮನ ಪಾತ್ರ ಬಹುಮಟ್ಟಿಗೆ ಬೆಳಕಿಗೆ ಬರುತ್ತದೆ. ರತ್ನಾಜಿ ತನ್ನ ಮಾತುಗಳಲ್ಲಿ, ವಾದಗಳಲ್ಲಿ

ಸಮಾಜದಲ್ಲಿ ಇರಬಹುದಾದ ಕೆಲವು ಸಮಸ್ಯೆಗಳನ್ನು ಎತ್ತಿ ತೋರಿಸುತ್ತಾಳೆ ನ್ನಬಹುದು.

ರತ್ನಾಜಿ ಕುಮಾರ ರಾಮನ ಮಾತಿಗೆ ಬೇಸರಪಟ್ಟುಕೊಂಡು ಸಖಿಯೊಂದಿಗೆ ತನ್ನ ಸಂಕಟವನ್ನು ತೋಡಿಕೊಂಡು "ನಿನ್ನಂತಹ ಮನುಷ್ಯನನ್ನು ನಾನೆಲ್ಲಿಯೂ ನೋಡಿಲ್ಲ ನನ್ನನ್ನು ತೃಪ್ತಿಪಡಿಸದಿದ್ದರೆ ಭೀಮೇಶ ಎಂದಿಗೂ ಮೆಚ್ಚನು. ಅನರ್ಘ್ಯವಾದ ಮುತ್ತಿನ ಹಾರವನ್ನು ಕೋಡಗನ ಕೈಗೆ ಕೊಟ್ಟಂತಾಯಿತು." ಎನ್ನುವಳು!

ಕುಮಾರ ರಾಮನು ಈ ಯಾವ ಮಾತಿಗೂ ಲಕ್ಷಿಸದೆ ಸಮಯಕಾದು ಹುಷಾರಾಗಿದ್ದು ಕೊನೆಗೆ ಚೆಂಡನ್ನು ಚಮತ್ಕಾರದಿಂದ ಪಡೆದು ಓಡಿ ಹೋಗುವನು. ರತ್ನಾಜಿಗೆ ಆಗ ಬಹಳ ವ್ಯಸನವಾಗುವುದು. ಹೇಗಾದರೂ ಮಾಡಿ ರಾಮನನ್ನು ಕರೆದುತರುವಂತೆ ಸಂಗಾಯಿಯನ್ನು ಬಲಾತ್ಕರಿಸುವಳು. ಆದರೆ ಅದು ಸಾಧ್ಯವಾಗುವುದಿಲ್ಲ. ಈ ದುಃಖ, ಹೆಣ್ಣಿನ ಕಣ್ಣೀರು, ಸೋಲು ಸೇಡನ್ನು ಬಯಸುತ್ತದೆ. - ಸಿಟ್ಟಾಗಿ ಪರಿಣಮಿಸುತ್ತದೆ. —ರಾಮನ ಶಿರವನ್ನು ಕೀಳಿಸದೆ ಬಿಡೆನೆಂಬ ಪಣವನ್ನೂ ತೊಡುತ್ತದೆ.

ಸರಿ. ಕಂಪಿಲರಾಯನು ಬೇಟೆಯಿಂದ ಹಿಂತಿರುಗಿದಾಗ ಕಿರಿಯ ರಾಣಿ ಮುನಿಸಿಕೊಂಡಿರುವಳು. ಮುದಿ ಗಂಡ ಹರೆಯದ ಕಿರಿಯ ಹೆಂಡತಿಯನ್ನು ಬಹುವಾಗಿ ಮುದ್ದಿಸುವನು. ರತ್ನಾಜಿ ಹಿಂದು ಮುಂದು ನೋಡದೆ ರಾಮನು ತನಗೆ ಮಾನಭಂಗ ಮಾಡಲು ಯತ್ನಿಸಿದನೆನ್ನುವಳು. ತಾನು ಆದುದರಿಂದ ಬದುಕುವವಳಲ್ಲವೆಂದೂ ನಟಿಸುವಳು. ಕಂಪಿಲನಿಗೆ ಮೊದಲು ಇದು ನಂಬಿಕೆಯಾಗದಿದ್ದರೂ ಕ್ರಮೇಣ ಹೆಂಡತಿಯ ಮೋಸದ ಬಲಿಗೆ ಬಲಿ ಬೀಳುವನು. ರಾಜನನ್ನು ಹೊಲಸು ಮಾತನಾಡಿ ರೇಗಿಸುವಳು. ನಂಬಿಕೆ ಬರುವಂತೆ ಕತೆಕಟ್ಟಿ ಬಣ್ಣಿಸುವಳು. ರಾಮನ ಮಸ್ತಕವನ್ನು ತರಿಸಿ ಕೊಟ್ಟಲ್ಲದೆ ತಾನು ಬದುಕಲಾರೆನೆನ್ನುವಳು. ಇಲ್ಲೆಲ್ಲಾ ರತ್ನಾಜಿಯ ಮಾತುಗಳು ಬಹಳ ಅಶ್ಲೀಲವಾಗಿವೆ! ಕೊನೆಗೆ ಇದೂ ಅಷ್ಟು ಅವನ ಮೇಲೆ ಪರಿಣಾಮವಾಗಲಿಲ್ಲವೆಂದು ತಿಳಿದು, ಅದು ನಿನ್ನಿಂದಾಗದಿದ್ದರೆ ನನ್ನನ್ನು ರಾಮನಿಗೆ ತೆಪ್ಪಗೆ ಮದುವೆ ಮಾಡಿಕೊಟ್ಟು ನೀನು ನನ್ನ ಮಾವನಾಗಬಹುದು. ಎಂದು

ಹೆಂಗಿಸುವಳು! ಕಂಪಿಲರಾಯನಿಗೆ ಕೋಪವುಕ್ಕಿಬಂದು ಮಂತ್ರಿಯನ್ನು ಕರೆಸಿ, ತನ್ನ ಅರ್ಧಾಂಗಿ ಅಸುವನ್ನು ತೊರೆವಂತೆ ಮಾಡಿದ ರಾಮನ ತಲೆಯನ್ನು ಕಾಡಿನಲ್ಲಿ ಕಡಿದು ಹಾಕಿಸು ಎಂದು ಅಪ್ಪಣೆ ಮಾಡುವನು. ಮಂತ್ರಿ ಬುದ್ಧಿ ಹೇಳುವನು.

> “ಸ್ತ್ರೀಯರ ಮನದ ಡೊಂಕನ್ನು ತಿಳಿಯಲು ಹರಿಹರ ಬ್ರಹ್ಮಾದಿಗಳಿಗೂ ಅಸಾಧ್ಯವೋ ದೊರೆ” “ಸತಿಯ ಮಾತನು ಕೇಳುತ | ಸುತಗೆ ಅಡವಿಯ ಸದ್ಗತಿಯ ಮಾಡಿದ ರಾಜ ಲಾಲಿಸೊ.” “ಸ್ತ್ರೀಬುದ್ಧಿ ಪ್ರಳಯಾಂತಕ” “ಕುಮಾರ ರಾಮ ಪರನಾರೀ ಸಹೋದರ. ಈ ಕೆಲಸದಿಂದ ನಿನಗೆ ಅಪಕೀರ್ತಿ ಬರುವುದು.”

ಆದರೆ ರಾಜನಿಗೆ ಇದು ಯಾವುದೂ ಬೇಡವಾಗಿತ್ತು. ಮಾತೃ ಸ್ಥಾನದಲ್ಲಿ ನೀತಿತಪ್ಪಿದವನಿಗೆ ಆ ಶಿಕ್ಷೆ ಆಗಲೇಬೇಕು ಎಂದು ಮಂತ್ರಿಗೆ ಆಜ್ಞೆಯನ್ನು ಜಾರಿಗೆ ತರುವಂತೆ ನಿರ್ಭಂಧಿಸುವನು.

ಕುಮಾರ ರಾಮನು ನಡೆದ ಸಂಗತಿಯನ್ನು—ಮಂತ್ರಿಗೆ ತಿಳಿಸುವನು. ಧೈರ್ಯದಿಂದ ತಾನು ಸಾವಿಗಂಜುವನಲ್ಲವೆಂದೂ ಹೇಳುವನು. ಅರಿಯಾಲೆಯು ಈ ಸುದ್ದಿಯನ್ನು ಕೇಳಿ ವ್ಯಸನ ಪಟ್ಟು ಮಂತ್ರಿಯನ್ನು ಬೇಡಿಕೊಳ್ಳುವಳು.

ಚೋರ ರಾಮನೆಂಬುವನೊಬ್ಬನು ಕುಮಾರ ರಾಮನ ಬದಲು ತಲೆ ಕೊಡಲು ಸಿದ್ಧನಾಗುತ್ತಾನೆ. ಮಂತ್ರಿಯು ಅಪ್ಪಣೆಯ ಪ್ರಕಾರ ಕಟುಕರು

"Kumara rama" is full of improportions and it is repulsive to the feelings of any man of refined tastes. The main issue is a lesson to the people. It tends to demoralise the ignorant. Step-mothers animal instincts are made much of, such stories are not found in Ancient epics. But still the authors claim antiquity for them. The main idea of the story is higly repulsive to the indian taste." —The dramatic history of the world. P. P. 22nd.

ಈ ಚೋರರಾಮನ ತಲೆಯನ್ನು ಕಡಿದು ತರುವರು. ಕುಮಾರ ರಾಮನು ನೆಲಮಾಳಿಗೆಯಲ್ಲಿ ಅಜ್ಞಾತವಾಸದಲ್ಲಿರುವನು. ಈ ಚೋರರಾಮನ ಅದ್ಭುತ ತ್ಯಾಗಶೀಲವನ್ನು ರಮ್ಯವಾಗಿ ಚಿತ್ರಿಸಬಹುದಾಗಿತ್ತು. ಸೊಗಸಾಗಿ ಮಾಡಬಹುದಾಗಿದ್ದ ಈ ಸನ್ನಿವೇಶವೂ ಯಕ್ಷಗಾನ ಕವಿಯ ಕೈಯ್ಯಲ್ಲಿ ಸಪ್ಪೆಯಾಗಿಯೇ ಇದೆ.

ಕಾಂಪಿಲರಾಯನಿಗೆ ಮಗನ ಸಾವಿನಿಂದ ದುಃಖವೇ ಆಗುವುದು. ಸಿದ್ಧ ಪುರುಷನ ಉಪದೇಶದ ಪ್ರಕಾರ ಮೃತ ಸಂಜೀವಿನಿ ವ್ರತವನ್ನು ಮಾಡಿಸಿ ರಾಮನನ್ನು ಬದುಕಿಸಿಕೊಳ್ಳುವ ಒಂದು ಪವಾಡವೂ ಇಲ್ಲಿ ನಡೆಯುವುದು.

ಕೊನೆಯಲ್ಲೂ ಭೀಮ ಎಂಬ ಹೆಸರು ಬರುತ್ತದೆ.
ಶಂಭುಲಿಂಗ, ವಿಷ್ಣು, ಚಾರುತರದ ಮೈಸೂರನು ಪೊರೆವಗೆ ಮಂಗಳವಾಗಲಿ ಎಂದು ಹೇಳಿ ಕತೆ ಮುಗಿಯುತ್ತದೆ.

ಈ ಯಕ್ಷಗಾನ ಕುಮಾರ ರಾಮನ ಕತೆ, ಇತರ ಕುಮಾರ ರಾಮನ ಕತೆಗಳಂತೆ ಸ್ವಾರಸ್ಯವಾಗಿಲ್ಲ. ನಂಜುಂಡ ಕವಿಯ ಕುಮಾರ ರಾಮ ಸಾಂಗತ್ಯ ಗ್ರಂಥದಲ್ಲಿರುವಂತೆ ಕಥಾಸರಣಿಯಲ್ಲೂ ಅಷ್ಟೇನೂ ಸ್ವಾರಸ್ಯವಿಲ್ಲ. ಪಾತ್ರರಚನೆಯ ಕಡೆಗೂ ಕವಿ ಹೆಚ್ಚು ಗಮನ ಕೊಟ್ಟಿಲ್ಲ. ರತ್ನಾಜಿ–ರಾಮ, ಅರಿಯಾಲಿ–ರಾಮ ಇವರ ಸಂಭಾಷಣೆ ಸಂವಾದಗಳೆ ಕತೆಯಲ್ಲಿ ಪೂರಾ ತುಂಬಿವೆ. ಭಾಷೆಯಲ್ಲೂ ನಯವಿಲ್ಲ. ಅಶ್ಲೀಲವೇ ಹೆಚ್ಚು. ಕೆಲವು ಉಪ ಮಾತುಗಳು ಸನ್ನಿವೇಶಗಳಿಗೆ ಸರಿಯಾಗಿ ಹೊಂದಿಕೊಳ್ಳದೆ ಶಕಾರನನ್ನು ನೆನಪಿಗೆ ತರುತ್ತವೆ. ತಾಂತ್ರಿಕ ಘಟನೆಗಳಿಂದ ಕೂಡಿರದಿದ್ದರೂ, ಪೌರಾಣಿಕ ವಲ್ಲವಾದುದರಿಂದ ಐತಿಹಾಸಿಕದ ಗುಂಪಿಗೆ ಸೇರಿಸಿ ಆ ಮೂಲಕ ಇದಕ್ಕೆ ಒಂದು ಸ್ಥಾನವನ್ನು ಕಲ್ಪಿಸಬಹುದಾಗಿದೆ—ಯಕ್ಷಗಾನಗಳಲ್ಲಿ ಪೌರಾಣಿಕ ಕತೆಗಳೇ ಹೆಚ್ಚಾಗಿ ತುಂಬಿರುವದರಿಂದ,

"ಸ್ವಾಮಿ, ಭೃತ್ಯಜನಪ್ರೇಮಿ"; "ಮಂತ್ರಿ, ಎನ್ನ ಕಾರ್ಯೇಷು ಸ್ವತಂತ್ರೀ"; "ರಾಜಾ ರವಿಕುಲತೇಜ"; "ಕೂಸೆ ಲಾಲಿಸಿ ಕೇಳೆನ್ನ ಭಾಷೆ" ಇವು ಪದೇ ಪದೇ ಬರುತ್ತವೆ.

ಚೂರ್ಣಿಕಾ, ದ್ವಿಪದಿ, ದರುವು, ಪದ, ಶ್ಲೋಕ, ವಾರ್ಧಕ ಛಂದಸ್ಸುಗಳೂ ಅನೇಕ ರಾಗಗಳೂ ಸೂಚಿತವಾಗಿವೆ.

ಕವಿಯ ಹೆಸರಾಗಲೀ, ಇತರ ವಿಷಯಗಳಾಗಲೀ ಗ್ರಂಥದಿಂದ ತಿಳಿದು ಬರುವುದಿಲ್ಲ. ಮೈಸೂರು ದೊರೆಗೆ ಮಂಗಳವಾಗಲಿ ಎಂದಿರುವುದರಿಂದ, ಕವಿ ಬಹುಶಃ ಮೈಸೂರು ದೇಶದವನಿರಬಹುದೆಂದು ಹೇಳಬಹುದು. ಮಾಂಬಳ್ಳೀಪುರ, ವೈದ್ಯೇಶ, ಭೀಮೇಶ ಎಂಬ ಮಾತುಗಳು ಬರುತ್ತವೆ. ಹೆಸರು ಭೀಮ ಇರಬಹುದೆ? ಮಾಂಬಳ್ಳಿ ಮೈಸೂರು ಸೀಮೆಯ ಯಳಂದೂರು ತಾಲ್ಲೂಕಿನಲ್ಲಿದೆ. ಆ ಪ್ರಾಂತಕ್ಕೆ ಸೇರಿದವನಾಗಿದ್ದಿರೂ ಇರಬಹುದು.

(೪) ಯಕ್ಷಗಾನ ಆದಿನಾಥಪುರಾಣ

ಬೊಮ್ಮಣ್ಣಕವಿ ವಿರಚಿತ. ಪುಟ ೧೧೧.

ಪ್ರಾರ್ಥನೆ. ವೇಣಾಖ್ಯನಗರ ಜಿನಪತಿಸ್ತೋತ್ರ; ವಾಣೀಶ ಸ್ತೋತ್ರ ಅನಂತರ ಪೂರ್ವಾಚಾರ್ಯರಿಗೆ ನಮಸ್ಕಾರ – ವೃಷಭ ಸೇನಾಚಾರ್ಯ, ವೀರ ಸೇನಾಚಾರ್ಯ ಮೊದಲಾದವರು. ಆ ಮೇಲೆ ಯಕ್ಷಯಕ್ಷಿಯರನ್ನು ಸ್ತುತಿಸಿದ್ದಾನೆ. 'ಪಳಗಬ್ಬಿಗ' ರನ್ನೂ ಸ್ಮರಿಸಿದ್ದಾನೆ – ಪಂಪ, ಪೊನ್ನ, ರನ್ನ, ಜನ್ನ, ಮಧುರ, ನಾಗಚಂದ್ರ, ನೇಮಿಚಂದ್ರ – ಈ ಕನ್ನಡ ಜೈನ ಕವಿಗಳನ್ನು ಈ ಕವಿ ಸ್ಮರಣೆ ಮಾಡಿರುತ್ತಾನೆ. ಅನಂತರ "ಧರೆಯೊಳಗೆ ಅಗ್ಗಳಮೆನಿಪ ಮಹಿಸೂರ ಕೃಷ್ಣರಾಜೇಂದ್ರ ನಾ ಪುರಿಗುತ್ತರದೊಳೆಸೆವಾ | ವೇಣಾಖ್ಯಪುರಿ ವಿರಾಜಿಸುತಿಹುದು." ಎಂದು ತನ್ನ ಊರನ್ನು ಕವಿ ಹೇಳಿಕೊಂಡಿದ್ದಾನೆ. 'ಬೊಮ್ಮಣ್ಣಕವಿ' ಎಂದೂ ಹೆಸರೂ ಸಹ ಹೇಳಿದೆ.

ಬೊಮ್ಮಣ್ಣ ಕವಿಯ ಈ ಯಕ್ಷಗಾನಗ್ರಂಥ ಆದಿನಾಥಪುರಾಣ "ನಾರೇರ ಕಥೆಯಲ್ಲ, ಚೋರರ ಕಥೆಯಲ್ಲ"ವಂತೆ. "ಕಾರುಣ್ಯನಿಧಿಯ "ವಿಸ್ತಾರದಕಥೆ," ಮೂಲೋಕದೊಡೆಯನ ಲೀಲೆಯ ಕಥೆ. ದ್ವೇಷದ, ಕಾಳಗದ, ಗೋಳಿನ ಕಥೆಯಲ್ಲ. ಮೂಲೋಕದೊಡೆಯನ ಲೀಲೆಯ ಕಥೆ, ಈ ಕೃತಿಗೆ ಅಧಿಪತಿಯು ನೀನಾಗಿ ನಡೆಸುವುದು ಆದಿನಾಥ" ಎಂದು. ಆದಿನಾಥನನ್ನು ಸ್ತುತಿಸಿದ್ದಾನೆ.

ಚಂಪೂ ಗ್ರಂಥಗಳ ಶೈಲಿಯ ರೀತಿಯಲ್ಲಿ ಕೃತಿರಚಿಸುವ ಪ್ರಯತ್ನ ನಡೆದಿದೆ. ಜಂಬೂ ದ್ವೀಪದ ವರ್ಣನೆ ಇದೆ. ಭರತರಾಜೇಂದ್ರ, ಆತನ ಅಗ್ರಮಹಿಷಿ ಸುಭದ್ರಾದೇವಿ. ಭರತ ಬಹಳ ಪರಾಕ್ರಮಿ. ತೊಂಭತ್ತೊಂಬತ್ತು ಸಾವಿರ ರಾಣಿಯರು ಇವನಿಗೆ – ಅವರಲ್ಲಿ ಆರ್ಯಖಂಡದವರು, ಮ್ಲೇಚ್ಛರು, ವಿದ್ಯಾಧರರಾತ್ಮಜೆಯರು ಇರುವರಂತೆ!

ಒಮ್ಮೆ ಒಡ್ಡೋಲಗಕ್ಕೆ ವೃಷಭ ಸೇನ ಗಣಧರ ಸ್ವಾಮಿಗಳು ಚಿತ್ತೈಸಿ ಭವಾವಳಿಯ ವರ್ಣನೆ ಮಾಡುವರು – ಲಲಿತಾಂಗ ದೇವನ ಜನ್ಮ ಬರುವ ವರೆಗೂ. ವಜ್ರಬಾಹು ವಸುಂಧರೆಯರು ಸುಖವಾಗಿದ್ದು ಧರ್ಮದಿಂದ ರಾಜ್ಯ ಭಾರ ಮಾಡುತ್ತಿರುವರು. ಇಂದ್ರನ ಆಶೀರ್ವಾದದಿಂದ ಲಲಿತಾಂಗ ದೇವನು

ಜನಿಸುವನು. 'ಬಾಲತರಣಿಯಂದದೊಳೊಗೆದ ಪುಣ್ಯನಿಧಿ'ಯಾದ ಮಗುವಿಗೆ ವಜ್ರಜಂಘನೆಂದು ಹೆಸರಿಡುವರು. 'ಬಾಲೇಂದು'ವಿನಂತೆ ದಿನವೂ ಬೆಳೆಯುತ್ತಾ ಹಿಂದಿನ ಜನ್ಮದ ಸ್ವಯಂಪ್ರಭೆಯ ಅಭಿಲಾಷೆಯಲ್ಲಿ ತೊಳಲುತ್ತಿರುವನು ವಜ್ರಜಂಘ.

ಇತ್ತ ಸ್ವಯಂಪ್ರಭೆಯು 'ಶ್ರೀಮತಿ'ಯಾಗಿ ಜನ್ಮಹೊಂದಿ ಮತ್ತೊಂದು ದೇಶದ ರಾಜನ ಅರಮನೆಯಲ್ಲಿ ರಾಜಕುಮಾರಿಯಾಗಿ ಬೆಳೆಯುತ್ತಾಳೆ. ಒಂದು ದಿನ ವನದಲ್ಲಿ ವಿಹರಿಸುವಾಗ ಮುನಿಗಳ ದರ್ಶನದಿಂದ ಈಕೆಗೆ ಹಿಂದಿನ ಜನ್ಮದ ನೆನಪು ಬಂದು ತನ್ನ ಸಖಿಗೆ ತನ್ನ ಹಿಂದಿನ ಕತೆಯನ್ನು ಹೇಳಿಕೊಂಡು ಆ ಜನ್ಮದಲ್ಲಿ ಪ್ರಿಯನಾಗಿದ್ದ ಲಲಿತಾಂಗದೇವನು ಈಗ ಎಲ್ಲಿರುವನೋ ಎಂದು ಬಿಸುಸುಯ್ದು, ಆತನನ್ನು ಹೇಗಾದರೂ ಪತ್ತೆ ಮಾಡಬೇಕೆಂದು ಯೋಚಿಸುತ್ತಾಳೆ. ಆತನ ಚಿತ್ರವೊಂದನ್ನು ಬರೆದು ಕನ್ಯಾವ್ರತದಿಂದ ಅದನ್ನು ಪೂಜಿಸುತ್ತ ಕಾಲ ಕಳೆಯುತ್ತಾಳೆ. ಈ ಚಿತ್ರಪಟದ ಸಹಾಯದಿಂದ ಲಲಿತಾಂಗ ದೇವನೆಲ್ಲಿರುವನೆಂಬುದನ್ನು ಕಂಡುಹಿಡಿಯಡು ಸಖಿ ಹೊರಡುತ್ತಾಳೆ! ಆ ಚಿತ್ರಪಟದಲ್ಲಿ ಲಲಿತಾಂಗದೇವ ಮತ್ತು ಸ್ವಯಂಪ್ರಭೆಯರ ಹಿಂದಿನ ವಿಹಾರ, ಸುಖಜೀವನ ಚಿತ್ರಿತವಾಗಿರುತ್ತವೆ. ಅದನ್ನು 'ಪಂಡಿತೆ'ಯು ಒಂದು ಚೈತ್ಯಾಲಯದ ಮುಂಭಾಗದಲ್ಲಿ ಇಟ್ಟಿರಲಾಗಿ ವಜ್ರಜಾಘನು ಆಕಸ್ಮಿಕವಾಗಿ ಅಲ್ಲಿಗೆ ಬಂದು ಅದನ್ನು ನೋಡಿದ ತಕ್ಷಣ ಹಿಂದಿನ ಜನ್ಮ ವೃತ್ತಾಂತದ ಸ್ಮರಣೆಯುಂಟಾಗಿ ಆ ಸವಿನೆನಪುಗಳನ್ನು ಹೊಂದಿ ದುಃಖಿಸುತ್ತಾನೆ. ಈಗ ಆಕೆ ಎಲ್ಲಿರುವಳೋ ಎಂದು ಹಲುಬುತ್ತಾನೆ. ಇವರಿಬ್ಬರಿಗೂ ವಿವಾಹವಾಗುವದು.

ವಜ್ರಜಂಘ ಶ್ರೀಮತಿಯರು ಬಹಳ ಕಾಲ ಸುಖವಾಗಿರುತ್ತಾರೆ. ಒಂದು ದಿನ ರಾಜನು ಕರುಮಾಡದಲ್ಲಿ ನಿಂತು ಕಾರ್ಗಾಲದ ವೈಭವವನ್ನು ನೋಡುತ್ತ ಆನಂದಹೊಂದಿ ಅದನ್ನು ಹಾಗೆಯೇ ಚಿತ್ರಿಸಬೇಕೆಂದು ಹಲಗೆಯೊಂದನ್ನು ಸಿದ್ಧಪಡಿಸಿಕೊಳ್ಳುವುದರಲ್ಲಿ ಆ ಮೋಡ, ಆ ಪ್ರಕೃತಿ ಸೌಂದರ್ಯ ಕರಗಿ ನೀರಾಗುತ್ತದೆ! ಅದನ್ನು ಕಂಡ ವಜ್ರಬಾಹು ರಾಜನಿಗೆ ವಿಷಯ ಸುಖದಲ್ಲಿ ವಿರಕ್ತಿ ಹುಟ್ಟಿ, ತಕ್ಷಣವೇ ಮಗ ವಜ್ರಜಂಘನಿಗೆ ಪಟ್ಟ ಕಟ್ಟಿ ತಾನು ತಪಸ್ಸಿಗೆ ತೆರಳುತ್ತಾನೆ.

ಓರ್ವ ಮುನಿಯಿಂದ ವಜ್ರಜಂಘ ಶ್ರೀಮತಿಯರಿಗೆ ತಮ್ಮ ಹಿಂದಿನ ಜನ್ಮಗಳ ವಿವರ ವೃತ್ತಾಂತ ತಿಳಿಯುತ್ತದೆ. ಅಲ್ಲದೆ ಈ ಜನ್ಮದಿಂದ "ಆರನೆಯ ಭವನಕ್ಕೆ ನೀನಾದಿ ತೀರ್ಥೇಶ್ವರನಪ್ಪೆ. ಶ್ರೀಮತಿ ಶ್ರೇಯಾಂಸ ಭೂಪತಿಯಕ್ಕು ಮಿವರಾದಿಗಳ್ ನಿನಗೆ ಭರತಾದಿ ಪುತ್ರರಪ್ಪರ್" ಎಂದೂ ಆ ಅಕಂಪನರು ಬೋಧೆಮಾಡಿ ಹೋಗುತ್ತಾರೆ. ವಜ್ರಜಂಘ ಶ್ರೀಮತಿಯರು ಅನ್ಯೋನ್ಯ ಪ್ರೀತಿಯಿಂದ ಸುಖಜೀವನವನ್ನು ನಡೆಸುತ್ತಾರೆ.

ಒಂದುದಿನ ಈ ಕಟ್ಟೊಲುವೆಯ ಸತಿಪತಿಯರು ಸೆಜ್ಜೆವನೆಯ ಗವಾಕ್ಷ ವನ್ನು ತೆಗೆಯಲು ಸೇವಕ ಮರೆತುದರ ಪರಿಣಾಮವಾಗಿ, ರಾತ್ರಿ ಒಳಗೆ ಹೊಗೆ ಸುತ್ತಿ, ಸಾಯುತ್ತಾರೆ! ಬಳಿಕ ಮುನಿವಚನದಂತೆ ಭೋಗಭೂಮಿಯಲ್ಲಿ ಹುಟ್ಟುತ್ತಾರೆ. 'ಸಮ್ಯಗ್ದರ್ಶನ ರತ್ನಬೋಧೆ'ಯೂ ಆಗುತ್ತದೆ. ಈಶಾನ ಕಲ್ಪದ 'ಶ್ರೀಪ್ರಭಾವಿಮಾನದ ಪೊರೆಯುಳುದ್ಭವಿಸಿ' ವಜ್ರಜಂಘನು ಶ್ರೀಧರ ದೇವನಾಗುವನು. ಸ್ವಯಂಪ್ರಭೆಯು (ಶ್ರೀಮತಿ) ಸ್ತ್ರೀಜನ್ಮವನ್ನಳಿದು ಸ್ವಯಂಪ್ರಭ ದೇವನಾಗುವಳು.

ನಾಲ್ಕನೆಯ ಪರಿಚ್ಛೇದದಲ್ಲಿ ಭೋಗಭೂಮಿಯ ವರ್ಣನೆ, ಐದರಲ್ಲಿ ವಜ್ರನಾಭಿಯವರ್ಣನೆ, ಆರನೆಯದರಲ್ಲಿ ದಿಗ್ವಿಜಯವರ್ಣನೆ, ಏಳನೆಯದರಲ್ಲಿ ನಿರ್ವಾಣಕಲ್ಯಾಣ ವರ್ಣನೆ ಮಾಡಿ ಗ್ರಂಥ ಮುಗಿಸುತ್ತಾನೆ.

ಇದರಲ್ಲೂ ಕಂದ, ವೃತ್ತ, ದ್ವಿಪದಿ, ಸೀಸಪದ್ಯ, ಯಾಲಪದ ಮುಂತಾದ ಛಂದಸ್ಸಿನ ವೈವಿಧ್ಯವನ್ನೂ ನೋಡಬಹುದು. ವರ್ಣನೆಗಳು ಹೆಚ್ಚಾಗಿವೆ. ಇದು ಆಡುವ ಯಕ್ಷಗಾನವಲ್ಲ. ಓದುವುದಕ್ಕೆ ಹೆಚ್ಚು ಉಪಯೋಗ. ಭವಾ ವಳಿಯನ್ನು ಅನೇಕ ಪಾತ್ರಗಳ ಬಾಯಲ್ಲಿ ಹೇಳಿಸುತ್ತಾನೆ—ಬೇಜಾರು ಬರು ವಂತೆಯೇ ಇದೆ.

ವಜ್ರಜಂಘ ಶ್ರೀಮತಿಯರ ದುರಂತ ಮರಣವನ್ನೂ ಪಂಪ ಕವಿ ಚಿತ್ರಿ ಸಿರುವುದರೊಂದಿಗೆ ಹೋಲಿಸಿದರೆ ಇದು ಕೇವಲ ನೀರಸವಾಗುತ್ತದೆ. ಬಟ್ಟಿನ ಕತೆಯೂ ಅಷ್ಟು ರಸವತ್ತಾಗಿ ಬಂದಿಲ್ಲ.

ಈ ಕೃತಿ ಆದಿಪಂಪನ ಶೈಲಿಯನ್ನು ಅನುಸರಿಸಿ ಅನುಕರಿಸಿ ಯಕ್ಷಗಾನ ರೀತಿಯಲ್ಲಿ ವಿರಚಿತವಾಗಿದೆಯೆನ್ನಬಹುದು. ಆದರೂ 'ಆದಿಪುರಾಣ'ದಲ್ಲಿ

ರುವ ಸ್ವಾರಸ್ಯ, ರಸ ಅದರ ಅರ್ಹತೆ ಇದಕ್ಕೆ ಬರಲಾರದು. ಪಾಮರ ಜನರಿಗೆ ಧಾರ್ಮಿಕೋಪದೇಶ ಮಾಡುವುದೇ ಇದರ ಮುಖ್ಯ ಗುರಿ ಎಂದು ತೋರುತ್ತದೆ. ಇದರ ಶೈಲಿಯೂ ಅವರಿಗೆ ಪ್ರಿಯವಾದುದಾಗಿರಬೇಕು. ಪಂಡಿತರಿಗೆ ಮಾತ್ರ ರಂಜಕವಾಗಿದ್ದ ಹಳೆಯ ಧಾರ್ಮಿಕ ಕಾವ್ಯವನ್ನೂ ಪಾಮರಜನ ಮನೋರಂಜನೆಗೆ ನಿಲುಕುವಂತೆ ಮಾಡುವ ಪ್ರಯತ್ನವನ್ನೂ ಇಲ್ಲಿ ಗುರುತಿಸಬಹುದು. ಜೈನ ಮತಪ್ರಚಾರಕ್ಕೆ ಅನುಕೂಲವಾದ ಮಾರ್ಗಗಳಲ್ಲಿ ಇದೂ ಒಂದು. ವಿಶೇಷವಾಗಿ ಕಂದವೃತ್ತಗಳನ್ನೇ ಬಳಸಿ ಪ್ರೌಢವಾಗಿಯೇ ಇರಲು ಸಾಕಷ್ಟು ಪ್ರಯತ್ನವನ್ನು ಕವಿ ಮಾಡಿದ್ದಾನೆ. ಅನೇಕ ಕಡೆ ಛಂದೋಭಂಗವಾಗಿರುವುದಾದರೂ ಕವಿ ತನ್ನ ಕೈಚಳಕವನ್ನು ನಿರರ್ಗಳವಾಗಿಯೇ ಹರಿಸಿದ್ದಾನೆನ್ನಬಹುದು. ಅನೇಕ ಕಡೆ ಕತೆಯನ್ನು ಓಡಿಸುವ ಪ್ರಯತ್ನವೂ ನಡೆದಿದೆ. ಆ ಭಾಗಗಳಲ್ಲಿ ವರ್ಣನೆಗಳು ದೀರ್ಘವಾಗಿಲ್ಲ. ಬರಿಯ ಭವಾವಳಿಗಳ ಪಟ್ಟಿಗಳನ್ನು ಕೊಡುವುದರಲ್ಲಿಯೇ ಹಲವು ಪರಿಚ್ಛೇದಗಳು ಸರಿದು ಹೋಗಿವೆ. ಆದರೂ ಕೆಲವು ಕಡೆ ಕಾವ್ಯಲಕ್ಷಣಗಳು ಕಂಡಬಾರದಿರುವುದಿಲ್ಲ—

(೧) ಮಹಾಬಲಿಗೆ ಮಂತ್ರಿಯ ಬೋಧೆ.

(೨) ಸುಭದ್ರಾದೇವಿಯ ಸೌಂದರ್ಯವರ್ಣನೆ ಇತ್ಯಾದಿ.

"ಬಂಧು ಬಳಗ, ಪುತ್ರಮಿತ್ರವೃಂದಮಯ ಕಳತ್ರವೆಂಬ ಗೊಂದೆಣಿಸೆವ ಮೋಘದೊಡ್ಡಿದೆಂದು ಮನದಿ ಭಾವಿಸುತ್ತಿಹಾ........" ಮೊದಲಾದ ಕಡೆಗಳಲ್ಲಿ ಕಾಣುವ ಛಂದೋಬಂಧದ ಓಟ ಚೆನ್ನು.

(೫) ಇಂದ್ರ ಕೀಲ

(ಕವಿ : ಲಿಂಗೇಂದ್ರ.)

ಮೊದಲೇ ಹೇಳಿರುವಂತೆ ಯಕ್ಷಗಾನ ಗ್ರಂಥಗಳ ಕಥಾವಸ್ತು ಬಹು ಮಟ್ಟಿಗೆ ರಾಮಾಯಣ ಮಹಾಭಾರತಗಳಿಂದ ತೆಗೆದುಕೊಂಡದ್ದು ಆಗಿದೆ. ಇವುಗಳ ಸಂಖ್ಯೆಯೂ ಬಹಳ. ಅನೇಕ ಕೃತಿಗಳು ಅಚ್ಚಾಗಿವೆ. ಕೈಬರೆಹ ವಲ್ಲೇ ಉಳಿದಿರುವವೂ ಸಹ ಬೇಕಾದಷ್ಟಿವೆ. ಅವುಗಳ ಪೈಕಿ ಒಂದನ್ನು ತೆಗೆದು ಪರಿಶೀಲಿಸಿದೆ ಇಲ್ಲಿ.

ಪಾರ್ವತಿ, ಪರಮೇಶ್ವರ, ಶಾರದೆಯರನ್ನು ಕೃತಿಗೆ ಮಂಗಳವನ್ನುಂಟು ಮಾಡಲೆಂದೂ, ತನ್ನನ್ನು ಸಲಹಬೇಕೆಂದೂ, ಪ್ರಾರ್ಥಿಸಿ, ಪಾರ್ಥನು ಪರಶಿವ ನಿಂದ ಪಾಶುಪತಾಸ್ತ್ರ ಪಡೆದ ಕತೆಯನ್ನು ' ಉಸಿರುವೆನೊಲವಿಂ ' ಎಂದು ಕವಿ ಮೊದಲು ಹೇಳಿದ್ದಾನೆ. ಇಲ್ಲಿಂದಲೇ ಕಥೆಯೂ ಪ್ರಾರಂಭವಾಗುತ್ತದೆ. ಕವಿ ತನ್ನ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಪಾಂಡವರು, ದುರ್ಯೋಧನ, ಶಕುನಿಗಳ ಮೋಸದಿಂದ ಜೂಜಿನಲ್ಲಿ ಸೋತು, ವನವಾಸಕ್ಕೆ ಹೊರಡುವ ಭಾಗದಿಂದ ಇಲ್ಲಿಯ ಕತೆ ಪ್ರಾರಂಭವಾಗುತ್ತದೆ.

ಧೌಮ್ಯರ ಉಪದೇಶದ ಪ್ರಕಾರ ಸೂರ್ಯದೇವನನ್ನು ಕುರಿತು ತಪಸ್ಸು ಮಾಡಿ ' ಚಿರಪಾತ್ರೆ 'ಯನ್ನು ಸಂಪಾದಿಸಿಕೊಂಡು ಕಾಮ್ಯಕವನವನ್ನು ಪಾಂಡವರು ಪ್ರವೇಶಿಸುತ್ತಾರೆ. ತಪಸ್ವಿಗಳ ಸಂರಕ್ಷಣೆಗಾಗಿ ಅಲ್ಲಿದ್ದ ರಾಕ್ಷಸರೊಂದಿಗೆ ಸೆಣಸುತ್ತಾರೆ. ಆ ಹೊತ್ತಿಗೆ ಇವರ ವನವಾಸದ ವಿಷಯವನ್ನು ತಿಳಿದ ಅರವಿಂದನಾಭನು ಅರಣ್ಯಕ್ಕೆ ಆಗಮಿಸಿ, ಪಾಂಡವರಿಗೆ ಸಮಾಧಾನ ಹೇಳುತ್ತಾನೆ. ದ್ರೌಪದಿ ತನಗಾದ ಅಪಮಾನವನ್ನು ಬಣ್ಣಿಸಿ, ಕೆದರಿದ ಮುಡಿಯನ್ನು ತೋರಿಸಿ ತನ್ನ ಪ್ರತಿಜ್ಞೆಯನ್ನು ಹೇಳುತ್ತಾಳೆ. ಕೃಷ್ಣ, ಆ ಪ್ರತಿಜ್ಞೆ ನೆರವೇರುವ ಸಮಯ ಒದಗುವುದೆಂದು ಅಭಯಪ್ರದಾನ ಮಾಡುತ್ತಾನೆ.

ಕೆಲಕಾಲಾನಂತರ ವೇದವ್ಯಾಸರು ಬಂದು ಪಾಂಡವರಲ್ಲಿದ್ದ ಅಂತಃ ಕಲಹಗಳನ್ನು ತಪ್ಪಿಸಿ, ಅರ್ಜುನನಿಗೆ ಮಂತ್ರೋಪದೇಶಮಾಡಿ ' ಇಂದ್ರಕೀಲ ' ವಲ್ಲಿ ಈಶ್ವರನನ್ನು ಕುರಿತು ತಪಸ್ಸುಮಾಡಿ ದಿವ್ಯಾಸ್ತ್ರಗಳನ್ನು ಸಂಪಾದಿಸ ಬೇಕೆಂದು ಹೇಳುತ್ತಾರೆ. ಹಿರಿಯರ ಅಪ್ಪಣೆಯಂತೆ ಪಾರ್ಥನು ಪಂಚಾಕ್ಷರೀ

ಮಂತ್ರ ಜಪಿಸುತ್ತಾ ಇಂದ್ರಕೀಲಕ್ಕೆ ಹೊರಡುತ್ತಾನೆ. ದ್ರೌಪದಿ ಪತಿಯನ್ನು ಬೀಳ್ಕೊಡುತ್ತಾ " ತನುಸುಖಗಳ ಮನದೊಳು ನೆನೆಯದಿರು, ಮುನಿಪ್ರನಾಡಿದ ಮಾತ ಮರೆಯದಿರು. ನೆನೆ ಜನಪನ ಪಗೆ, ಪಗೆಯಕ್ಕಳ್ಳೆಸಿರಿಯನು, ವನವಾಸ ದತಿಸುಖವ, ಮನಸಿಜಾರಿಯ ಪಾದವ." ಎಂದು ಹೇಳಿ ಕಳುಹಿಸುವಳು.

ಪಾರ್ಥನು ' ಇಂದ್ರಕೀಲ 'ದಲ್ಲಿ ಘೋರವಾದ ತಪಸ್ಸನ್ನಾಚರಿಸುತ್ತಾನೆ. ತಪಸ್ಸಿನ ಜ್ವಾಲೆಯಿಂದ ಜನಗಳು ಕಂಗೆಡುತ್ತಾರೆ. ಇಂದ್ರ ಇವನ ಮನಸ್ಸನು ಪರೀಕ್ಷಿಸಲು ಬಂದು ಅವನ ಸಂಯಮಶಕ್ತಿಗೂ, ಜಿತೇಂದ್ರಿಯಗುಣಕ್ಕೂ ಮೆಚ್ಚಿ ಹರಸಿಹೋಗುತ್ತಾನೆ. ಈಶ್ವರ ಕಿರಾತರೂಪವನ್ನು ಧರಿಸಿ, ಪಾರ್ವತಿ ಮತ್ತು ಪರಿ ವಾರದೊಂದಿಗೆ ಭಕ್ತನ ಪರೀಕ್ಷೆಗಾಗಿ ಬಿಜಯ ಮಾಡುತ್ತಾನೆ. ಪಾರ್ವತಿ ಅರ್ಜುನನ ಪರಾಕ್ರಮ ಪ್ರದರ್ಶನದ ದೃಶ್ಯವನ್ನು ನೋಡಬಯಸುತ್ತಾಳೆ. ಕಿರಾತ, ಬೇಟೆ ಯನ್ನು ಹೂಡಿ ಮೂಕದಾನವನೆಂಬ ಕ್ರೂರ ರಾಕ್ಷಸನನ್ನು ಬೆನ್ನಟ್ಟುತ್ತಾನೆ. ಮಳ್ಳ ಹಂದಿಯ ರೂಪಧರಿಸಿದ್ದ ರಾಕ್ಷಸ ಓಡುತ್ತಾನೆ. ಸುರರು ಶಿವನ ಲೀಲೆ ನೋಡಿ ' ಉಘೇ ' ಎಂದರಂತೆ. ಆ ಹಂದಿ " ಸಿಕ್ಕಿದವರನೊಕ್ಕಲಿಕ್ಕುತ್ತೆ, ಕಂಗಳಿಂ ಕಕ್ಕುತ್ತ ಕೆಂಗಿಡಿಯ, ಛಕ್ಕನೈತಂದುದೊಂದೆಕ್ಕಲ ಸೊಕ್ಕಿನಿಂದ " ಎಂಬಂತೆ ಘೋರ ಹಾವಳಿ ನಡೆಸಿದಾಗ ಈಶ್ವರ ಆ ಹಂದಿಯ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ. ಏಟು ತಿಂದು ಗಾಯಹೊಂದಿದ ಹಂದಿ ಮುಂದೆ ಓಡುತ್ತದೆ ಚೀತ್ಕಾರಮಾಡಿಕೊಂಡು. ಕಾಡಿನ ಗದ್ದಲ ಕೇಳಿ ಪಾರ್ಥ ಎಚ್ಚೆತ್ತು ಆಲಿಸುತ್ತಾನೆ. ಗಾಯಗೊಂಡ ಹಂದಿ ಓಡುತ್ತಿರುವುದನ್ನು ನೋಡಿ ಗಾಂಡೀ ವದ ಗುರಿ ತಪ್ಪದಂತೆ ಹೊಡೆಯುತ್ತಾನೆ. ಸೂಕರ ಸಾಯುತ್ತದೆ. ಕಿರಾತ ರೂಪಿ ಶಿವ ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದು ಹಂದಿ ಹೊಡೆದವನು ತಾನು ಎನ್ನುತ್ತಾನೆ. ' ಬೇಟೆ ' ಯಾರದು ಎಂಬ ವಿಷಯದಲ್ಲಿ ಇಬ್ಬರಿಗೂ ಜಗಳವಾಗುತ್ತದೆ. ವಾಗ್ಯುದ್ಧ ಹೋಗಿ ಅರ್ಜುನನು ಕಿರಾತನ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ. ' ಅಕ್ಷಯ ಬತ್ತಳಿಕೆ ' ಪೂರ್ಣವಾಗಿ ಕ್ಷಯ ವಾದರೂ ಕಿರಾತನಿಗೆ ನೋವಾಗುವುದಿಲ್ಲ ! ಗಾಂಡೀವದಿಂದಲೇ ವ್ಯಾಧನನ್ನು ಥಳಿಸುತ್ತಾನೆ. ಅನಂತರ ಇಬ್ಬರಿಗೂ ಮಲ್ಲಯುದ್ಧ ಮೊದಲಾಗುತ್ತದೆ. ಕಿರಾತನ ಶಕ್ತಿಯನ್ನು ಕಂಡು ಪಾರ್ಥ ಬೆರಗಾಗಿ ಶಂಕಿಸುತ್ತಾನೆ. ಕಿರಾತ ಕಾದಲೆಗೆ ಹೇಳಿ ಹೇಳಿ ಅರ್ಜುನನನ್ನು ಹೊಡೆಯುತ್ತಾನೆ. ನೋವು ಹೆಚ್ಚಾಗಿ,

ದೇಹ ಜರ್ಝರಿತವಾಗಿ ಪಾರ್ಥ ನೆಲಕ್ಕೆಬೀಳುತ್ತಾನೆ. ಶಿವನ ಪೂಜೆ ಮಾಡಿ ಅವನ ಅನುಗ್ರಹದಿಂದ ಇವನನ್ನು ತಕ್ಷಣ ಗೆಲ್ಲುವೆನೆಂದು ಬಗೆದ ಅರ್ಜುನ ಮರಳಲಿಂಗವನ್ನು ಮಾಡಿ ಪೂಜೆ ಮಾಡುತ್ತಾನೆ. ಪೂಜೆ ಮಾಡಿದ ಪುಷ್ಪಗಳೆಲ್ಲ ಮರಳಲಿಂಗವನ್ನು ಬಿಟ್ಟು ಕಿರಾತನ ತಲೆಗೇರುತ್ತವೆ! ಅರ್ಜುನ ಬೆರಗಾಗಿ ಪರೀಕ್ಷಿಸುತ್ತಾನೆ. ಮತ್ತೆ ಹಾಗೇ ಆಗಲು ಶಬರನೇ ಶಂಕರನಾಗಿರಬೇಕೆಂದು ಊಹಿಸಿ, ತರ್ಕಿಸಿ, ನಿಶ್ಚಯಿಸಿ ನಮಸ್ಕರಿಸುತ್ತಾನೆ; ಕ್ಷಮೆ ಬೇಡುತ್ತಾನೆ.

"ಅಂಗವಿಲ್ಲದನೊಳ್ ಸಮರಂಗವಗ್ಗೈದೆ, ತಿಂಗಳಪೊತ್ತನೊಳ್ ಮುಂಗೋಪವಗ್ಗೈದೆ" ಸರ್ವಾಪರಾಧಗಳನ್ನು ಕ್ಷಮಿಸಬೇಕೆಂದು ಹಲವುಪರಿಯಿಂದ ಈಶನನ್ನು ಬೇಡುತ್ತಾನೆ. ಆಗ ಪರಮೇಶನು ಸುಪ್ರೀತನಾಗಿ ಪಾರ್ಥನಿಗೆ ದರ್ಶನ ಕೊಡುತ್ತಾನೆ. ಅಲ್ಲದೆ ಪಶುಪತಿಯು ಪಾಶುಪತಾಸ್ತ್ರವನ್ನೂ, ಪಾರ್ವತಿಯು ಅಂಜನಾಸ್ತ್ರವನ್ನೂ ಪಾರ್ಥನಿಗೆ ಮೆಚ್ಚಿಕೊಡುತ್ತಾರೆ. ಇತರ ದೇವತೆಗಳೂ ಅರ್ಜುನನಿಗೆ ಕೆಲವು ಶಸ್ತ್ರಾಸ್ತ್ರಗಳನ್ನು ಈಯುತ್ತಾರೆ.

ಸಕಲ ಸಂಭ್ರಮಗಳಿಂದ ಇಂದ್ರನ ಇಷ್ಟದಂತೆ ಇಂದ್ರಸುತ ಸುರಸಭೆಗೆ ಬರುತ್ತಾನೆ. ಅಲ್ಲಿ ಇಂದ್ರನ ಅನುಗ್ರಹದಿಂದ ಪಾಂಡುವಿನ ದರ್ಶನವಾಗುತ್ತದೆ. ಇಂದ್ರಸಭೆಯಲ್ಲಿ ಅರ್ಜುನನಿಗೆ ತುಂಬ ಪುರಸ್ಕಾರ, ಮರ್ಯಾದೆ ಸಿಗುತ್ತದೆ. ದೇವಗಣಿಕೆಯರ ನರ್ತನವಾಗುತ್ತದೆ. ನರ್ತನ ನೋಡಿ ಆನಂದಿಸಿದ ಅರ್ಜುನನನ್ನು ಇಂದ್ರ ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಂಡು "ಅಸಮ ಬಿಸಜಾಕ್ಷಿಯರೊಳ್ ಊರ್ವಶಿಯಬಸಿಯೊಳೊಂದಿತು ನರನ ಚಿತ್ತವು" ಎಂದು ತಿಳಿದು ಊರ್ವಶಿಯನ್ನು ಕುರಿತು 'ಎಮಗೆ ಸೊಸೆಯಾಗಿಂದು ಇರು' ಎಂದು ಬೆಸಸುತ್ತಾನೆ. ಊರ್ವಶಿಗೆ ಮಾನವ ಲೋಕದ ಅರ್ಜುನ ಹೇಗೋ ಏನೊ ಎಂದು ಅನುಮಾನವಾಗುತ್ತದೆ. ಇಂದ್ರನ ಅಪ್ಪಣೆ ಮೇರೆಗೆ ಚಿತ್ರಸೇನ ಆಕೆಯ ಅನುಮಾನ ಪರಿಹಾರಮಾಡಿ ಅರ್ಜುನ 'ಮೂರು ಲೋಕದ ಗಂಡ' ನೆಂದು ಹೊಗಳುತ್ತಾನೆ. ಆಗ ಊರ್ವಶಿ ನಿಜವಾಗಿಯೂ ಅರ್ಜುನನಲ್ಲಿ ಮೋಹಗೊಳ್ಳುತ್ತಾಳೆ.

ಊರ್ವಶಿ ಪ್ರೇಮದಿಂದ ಅರ್ಜುನನ ಬಿಡಾರಕ್ಕೆ ಬಂದಾಗ, ಅರ್ಜುನ ನಮ್ರತೆ, ಮರ್ಯಾದೆ ಗೌರವಗಳಿಂದ ಆಕೆಯನ್ನು ಕಾಣುತ್ತಾನೆ; ನಮಸ್ಕರಿಸುತ್ತಾನೆ. ಊರ್ವಶಿ ಬೆರಗಾಗಿ ಬೆಡಗು ತೋರಿ ಇಷ್ಟಾರ್ಥ ನೆರವೇರಿಸಬೇಕೆಂದು ಕೇಳುತ್ತಾಳೆ. ಅರ್ಜುನ ಆಕೆ ತನಗೆ ತಾವೆಯಲ್ಲಿ ತಾಯಿ ಎನ್ನುತ್ತಾನೆ. ಊರ್ವಶಿ 'ನರನ ನಡತೆಗೆ ಮೆಚ್ಚಿ, ಮದನ ನಂಬಿಗೆ ಬೆಚ್ಚಿ' ಬೇಡುತ್ತಾಳೆ. ಅರ್ಜುನನ ಮನಸ್ಸು ಬದಲಾವಣೆಯಾಗಲು ಸಾಧ್ಯವಿಲ್ಲದುದನ್ನು ಕಂಡು ಸುರಸುಂದರಿಗೆ ಸೋಲಾಗಿ ಸಿಟ್ಟುಬಂದು ಸೇಡಿಗಾಗಿ ಹಾತೊರೆಯುತ್ತಾಳೆ. 'ಗಾವಿಲನೊ, ಗಾಂಪನೊ, ಷಂಢನೊ, ಭಂಡನೊ' ಎಂದು ಹಳಿದು ಒಂದು ವರ್ಷ 'ಷಂಢನಾಗು' ಎಂದು ಶಪಿಸುತ್ತಾಳೆ. ಇದನ್ನು ಕೇಳಿ ಅರ್ಜುನನಿಗೆ ತುಂಬ ನೋವಾಗಿ ತನ್ನದೇನು ತಪ್ಪು ಎಂಬುದು ತಿಳಿಯದೆ ವ್ಯಸನಪಡುತ್ತಾನೆ. ಇಂದ್ರನು ಮಗನನ್ನು ಸಮಾಧಾನಮಾಡಿ ಶಾಪವೇ ಅನುಗ್ರಹವಾಗುವಂತೆ ಏರ್ಪಡಿಸುತ್ತಾನೆ.

ಅನಂತರ ದೇವತೆಗಳ ದ್ವೇಷಿಗಳಾದ ನಿವಾತ ಕವಚರೊಡನೆ ಅರ್ಜುನ ಯುದ್ಧಮಾಡಿ ಪರಾಕ್ರಮ ಪ್ರದರ್ಶಿಸುತ್ತಾನೆ. ಎಲ್ಲರ ಮನ್ನಣೆಗೆ, ಮೆಚ್ಚಿಕೆಗೆ ಪಾತ್ರನಾಗಿ ದೇವಲೋಕದಿಂದ ವಿಜಯಿಯಾಗಿ ಸಹೋದರರನ್ನು ಸೇರಲು ಹೊರಡುತ್ತಾನೆ.

ಕೊನೆಯಲ್ಲಿ 'ಲಿಂಗೇಂದ್ರ' ಬರೆದುದು ಎಂದು ಹೇಳಿದೆ. ೨೬-೧೦-೨೦ ಎಂಬ ತಾರೀಖು ಇದೆ. ಇದು ಕೈಬರೆಹದ ಪ್ರತಿ. ಈ ತಾರೀಖು ; ಗ್ರಂಥ ಬರೆದು ಮುಗಿಸಿದ್ದೋ ಅಥವಾ ಪ್ರತಿ ಮಾಡಿ ಮುಗಿಸಿದ್ದೋ ತಿಳಿಯುವುದಕ್ಕೆ ಅವಕಾಶವಿಲ್ಲ.

ಈ ಯಕ್ಷಗಾನದಲ್ಲಿ ವಚನ, ಗದ್ಯ ಬಹಳ ಕಡಮೆ; ಪದ್ಯಗಳೂ ಕಡಮೆಯೇ. ಹಾಡುಗಳೇ ಹೆಚ್ಚು. ಇದು ಶ್ರವ್ಯ ಯಕ್ಷಗಾನವೆನ್ನಬಹುದು. ಇದರ ಭಾಷೆ ಇತರ ಯಕ್ಷಗಾನಗಳ ಭಾಷೆಗಿಂತ ಪ್ರೌಢವಾಗಿರುತ್ತದೆ. ಅನೇಕ ಹಳಗನ್ನಡ ಪದ ಪ್ರಯೋಗಗಳೂ ಇವೆ. ಕಿತ್ತಡಿ, ಮಿಗ, ಬಾಡು, ಪಾರ್ವ, ಬಿಯದ, ಪುಳಿಂದ ಇತ್ಯಾದಿ. ಇಲ್ಲಿ ಛಂದಸ್ಸಿನ ವೈವಿಧ್ಯಕ್ಕಿಂತ ರಾಗಗಳ ವೈವಿಧ್ಯ ಹೆಚ್ಚಾಗಿದೆ. ಗ್ರಂಥದ ಬಹುಭಾಗ ವಾರ್ಧಕ ಮತ್ತು ಭಾಮಿನೀ

ಷಟ್ಪದಿಗಳಲ್ಲಿದೆ. ಕವಿ ವಿದ್ಯಾವಂತನೆಂದೂ, ಹಿಂದಿನ ಗ್ರಂಥಗಳನ್ನು ಓದಿದವನೆಂದೂ ಯಾವ ಸಂಶಯವೂ ಇಲ್ಲದೆ ಹೇಳಬಹುದು.

ಷಡಕ್ಷರ ಕವಿಯ ' ಶಬರ ಶಂಕರ ವಿಲಾಸ 'ವನ್ನೂ ಈ ಯಕ್ಷಗಾನ ಕವಿ ಓದಿರಬೇಕೆನ್ನಿಸುತ್ತದೆ- ಕಿತ್ತಡಿ, ಭೀಕರ ಸೂಕರ- ಕೆಲವು ವರ್ಣನೆಗಳು ಇತ್ಯಾದಿಗಳ ಆಧಾರದಿಂದ. ಕುಮಾರವ್ಯಾಸನ ಕನ್ನಡ ಭಾರತದ ಅನುಸರಣೆ, ಅನುಕರಣೆ ಸ್ಪಷ್ಟವಾಗಿಯೇ ಕಾಣುತ್ತದೆ. ಮೊದಲನೆಯ ಉದಾಹರಣೆ ಛಂದಸ್ಸಿನ ಅನುಸರಣೆಯಲ್ಲಿಯೇ ಇದೆ. ಕುಮಾರವ್ಯಾಸನ ಷಟ್ಪದಿಯ ನಿರರ್ಗಳ ಶೈಲಿಯ ಪ್ರಯತ್ನ ಇಲ್ಲಿ ನಡೆದಿದೆ. ' ಕೇಳು ಜನಮೇಜಯ ಮಹೀಪಾಲ 'ವೂ ಇದೆ ! " ಘಡಘಡೆಲವೊ-ಘುಡುಘುಡುಸಿ " ದ್ರೌಪದಿ (ಕೃಷ್ಣನ) " ಪೊರಳುತಿರೆ ಚರಣದಲ್ಲಿ " ಮೊದಲಾದ ಮಾತುಗಳೂ, ದ್ರೌಪದೀ ಪ್ರಲಾಪ, ಕೆದರಿದ ಮುಡಿಯನ್ನು ಕಟ್ಟುವ ಪ್ರಸಂಗ, ಪ್ರತಿಜ್ಞೆ, ದ್ರೌಪದಿಯ ನೆನಪು ಮೊದಲಾದ ಪ್ರಸಂಗಗಳೂ ಕುಮಾರವ್ಯಾಸನಲ್ಲಿದ್ದಂತೆಯೇ ಇವೆ.

" ನಿನ್ನಯ ಮುಡಿಯನಿನ್ನು ಕಟ್ಟುವ ಭಾಷೆಯೆನ್ನದುತಾಯೆ " ಇತ್ಯಾದಿ ಪ್ರಸಂಗಗಳು ಕುಮಾರವ್ಯಾಸನಲ್ಲಿ ರಸವತ್ತಾಗಿ ಬರುತ್ತವೆ.

ಕಥಾಸರಣಿಯಲ್ಲೂ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಪ್ರಸಿದ್ಧವಾದ ಪೌರಾಣಿಕ ಕಥೆ. ಈ ಯಕ್ಷಗಾನದಲ್ಲಿ ಭಾಷಾಶುದ್ಧಿ ಚೆನ್ನಾಗಿದ್ದು ಸಾಹಿತ್ಯಕ್ಕೆ ಹೆಚ್ಚು ಗಮನಕೊಟ್ಟಿರುವುದು ಕಂಡುಬರುತ್ತದೆ. ಇದು ಅನೇಕ ಯಕ್ಷಗಾನ ಗ್ರಂಥಗಳಲ್ಲಿ ಅಪೂರ್ವ. ಇದರ ಕವಿ ಆಳಿಯ ಲಿಂಗರಾಜ ಇರಬಹುದೆ ಎಂಬ ಸಂಶಯಬರುತ್ತದೆ. ಬರಿಯ ಲಿಂಗೇಂದ್ರ ಎಂಬ ಹೆಸರೊಂದನ್ನು ಬಿಟ್ಟರೆ ಕವಿ ತನ್ನ ವಿಷಯವಾಗಿ ಮತ್ತೇನನ್ನೂ ಹೇಳಿಕೊಂಡಿಲ್ಲ. ಒಟ್ಟಿನಲ್ಲಿ ಅನೇಕ ಯಕ್ಷಗಾನಗಳಿಗಿಂತ ಇದು ಹೆಚ್ಚು ಸ್ವಾರಸ್ಯವಾಗಿದೆ ಎಂದು ಹೇಳಬಹುದು. ತಾಳಮದ್ದಳೆ-ಪ್ರಸಂಗಕ್ಕೆ ಚೆನ್ನಾಗಿದೆ.

(೫) ಯಕ್ಷಗಾನದ ಉಗಮ ಮತ್ತು ಬೆಳೆವಣಿಗೆ.

'ಯಕ್ಷಗಾನ' ಎಂಬುದು ಈಗ ಆಟ, ಬಯಲಾಟ, ದಶಾವತಾರದ ಆಟ, ಭಾಗವತರಾಟ, ತಾಳಮದ್ದಳೆ, ಮೇಳ, ಪ್ರಸಂಗ ಎಂಬ ಹೆಸರುಗಳಿಂದ ನಮಗೆ ಪರಿಚಿತವಾಗಿದೆ. ಯಕ್ಷಗಾನವನ್ನು ರಂಗಭೂಮಿಯ ಮೇಲೆ ವೇಷಭೂಷಣಗಳಿಂದ ಬೈಗಿನಿಂದ ಬೆಳಗಿನವರೆಗೂ ಆಡಿತೋರಿಸಬಹುದು. ಅಲ್ಲದೆ ಒಂದೇ ಕಡೆ ಕುಳಿತುಕೊಂಡು ಒಬ್ಬೊಬ್ಬರು ಒಂದೊಂದು ಪಾತ್ರವನ್ನು ವಹಿಸಿ, ವೇಷಭೂಷಣಗಳೊಂದೂ ಇಲ್ಲದೆ, ಯಕ್ಷಗಾನ ಸಾಹಿತ್ಯವನ್ನು ನಿರೂಪಿಸ ಬಹುದು. ಈ ಎರಡೂ ಬಗೆಗಳೂ ಈಗಲೂ ಪ್ರಚಾರದಲ್ಲಿವೆ.

ಈ ಹಲವು ಹೆಸರುಗಳು ಏಕೆ ಬಂದುವು ? ಮೊದಲು ಹುಟ್ಟಿದ ಹೆಸರು ಯಾವುದು ? ಇದರ ವಿವೇಚನೆ ಉಚಿತ. ಆಡುವುದರಿಂದ ಆಟ. ಬಯಲಿನಲ್ಲಿ ಆಡುವುದರಿಂದ ಎಂದರೆ, (ಈಗಿನ ನಾಟಕ ಕಂಪನಿಗಳಂತೆ ದೊಡ್ಡ ಸಂಸ್ಥೆ ಯೊಂದಿದ್ದು ಪುರದ ಒಂದು ಭವ್ಯ ಭವನದಲ್ಲಾಗಲೀ, ತಮ್ಮದೇ ಆದ 'ಡೇರೆ' 'ಥಿಯೇಟರ್'ಗಳಲ್ಲಾಗಲೀ ಯಕ್ಷಗಾನವನ್ನು ಆಡುವುದಿಲ್ಲ.) ಹಳ್ಳಿಯ ಪ್ರದೇಶಗಳಲ್ಲಿ ಬಹುಮಟ್ಟಿಗೆ— ರೈತರ ವಿರಾಮಕಾಲದಲ್ಲಿ, ಕೇವಲ ದೇಶೋ ವಿಶಾಲವಾದ ಬೈಲಿನಲ್ಲಿ (ನಾಲ್ಕು ರಸ್ತೆ ಕೂಡುವ ಕಡೆ, ಹಳ್ಳಿಯ ಮಧ್ಯಪ್ರದೇಶ ಅಥವಾ ಪೈರುಕಿತ್ತ ಹೊಲ ಕಡೆಗೆ) ಇದನ್ನು ಅಭಿನಯಿಸಿರುವುದರಿಂದ ಬಯ ಲಾಟ ಎಂದು ಹೆಸರು ಬಂದಿದೆ.

ದಶಾವತಾರದ ಆಟ— ಈ ಹೆಸರು ಬರುವುದಕ್ಕೆ ಕಾರಣ ನಿರ್ದಿಷ್ಟವಾಗಿ ತಿಳಿದಿಲ್ಲವಾದರೂ ಇದನ್ನು ಊಹಿಸಬಹುದಾಗಿದೆ. ಯಕ್ಷಗಾನ ಲಕ್ಷಣವನ್ನು ತಿಳಿಸುವ 'ಸಭಾವಂದನೆ,' 'ಸಭಾಲಕ್ಷಣ' ಗ್ರಂಥಗಳಿಂದ ತಿಳಿದುಬರುವ ಒಂದು ಲಕ್ಷಣವೆಂದರೆ, ಆಟ ಪ್ರಾರಂಭಿಸುವ ಮುನ್ನ ಕೃಷ್ಣ ಪಾತ್ರ ಬಂದು 'ಸಭಿಕ ಸರ್ವಜ್ಞ'ರಿಗೆ ಪರಿಚಯ ಮಾಡಿಕೊಂಡು ತನ್ನ ಹತ್ತು ಅವತಾರಗಳ ಕತೆಯನ್ನು ಸಂಕ್ಷೇಪವಾಗಿ ವಿವರಿಸುತ್ತಾನೆ. ಇದು ಸುಮಾರು ಎಲ್ಲ ಯಕ್ಷ ಗಾನಗಳಲ್ಲೂ ಕಂಡುಬರುತ್ತದೆ. ಇದರ ಔಚಿತ್ಯ ಮಾತ್ರ ತಿಳಿದಿಲ್ಲ. ಅಂತೂ ದಶಾವತಾರದ ಆಟ ಎಂಬ ಹೆಸರು ಬರಲು ಇದು ಕಾರಣವಿದ್ದರೂ ಇರಬ ಹುದು. ದಶಾವತಾರ ಕಥೆಗಳನ್ನು ನಿರೂಪಿಸುವಂತಹವೇ ಹೆಚ್ಚಾಗಿದ್ದು ಈ ಹೆಸರು ಬಂದಿರಲೂಬಹುದು.

ಭಾಗವತರಾಟ— ಭಾಗವತ ಇಲ್ಲಿ ದಿಗ್ದರ್ಶಕನಿದ್ದಂತೆ. ಅವನ ಪ್ರಾಮುಖ್ಯತೆ ಬಹಳ ಹೆಚ್ಚು. ಅವನೇ ಆಟದ ಸೂತ್ರಧಾರ. " ಭಾಗವತ ಸಂಪ್ರದಾಯ ಭಕ್ತಿಪ್ರಧಾನವಾದುದು. ಭಾಗವತ ಸಂಪ್ರದಾಯದವರು ಹೆಚ್ಚು ಇದರಲ್ಲಿ ಆಸಕ್ತಿ, ಪಾತ್ರವಹಿಸುತ್ತಿದ್ದರು. ಆದ್ದರಿಂದ ಭಾಗವತರಾಟ ಎಂದಿದ್ದಿರಬಹುದೆ ? ಅಥವಾ ಕಥಾವಸ್ತು ಪ್ರಧಾನವಾಗಿ ಶ್ರೀ ಮದ್ಭಾಗವತದ್ದಾಗಿದೆ. ಭಗವಂತನ ಸಂಬಂಧವಾದ ಆಟವಾದ್ದರಿಂದ ಭಾಗವತರಾಟ ಎಂದೆ ? ಭಾಗವತ ನಟರ ಹಿಂದೆ ನಿಂತು ಹಾಡಿ ಕುಣಿಯುವನು, ಕುಣಿಸುವನು. ಈಗಲೂ ಭಾಗವತ ಮನೆತನಗಳೇ ಇವೆ. ದೇವರನ್ನು ಭಕ್ತಿಯಿಂದ ಸ್ತುತಿಸುವವನು ಭಾಗವತ. ಭಾಗವದ್ಭಕ್ತರು ಎಂದೂ ಅರ್ಥ. ಆದ್ದರಿಂದ ಭಾಗವತರಾಟ ಎಂದಿರಬಹುದು " ಎಂಬ ಅಭಿಪ್ರಾಯವೂ ಇದೆ.

ತಾಳ ಮದ್ದಳೆ— ಎಂದರೆ ಆಡುವುದಲ್ಲ, ಹೇಳುವುದು–ಓದುವುದು. ಇದನ್ನು ತಾಳ ಮದ್ದಳೆ, ಚಂಡೆ ಇತ್ಯಾದಿ ಸಲಕರಣೆಗಳಿಂದ, ವಾದ್ಯಸಹಾಯಗಳಿಂದ ಒಂದೇ ಕಡೆ ಹಲವು ವ್ಯಕ್ತಿಗಳು ಕುಳಿತು, ಒಬ್ಬೊಬ್ಬರು ಒಂದೊಂದು ಪಾತ್ರ ವಹಿಸಿ ಕಥೆಯನ್ನು–ಸಂಭಾಷಣೆಗಳನ್ನು ನಿರ್ವಹಿಸುತ್ತಾರೆ. ಆಡುವುದಕ್ಕೂ ಓದುವುದಕ್ಕೂ ಇರುವ ವ್ಯತ್ಯಾಸವನ್ನು ಈ ಹೆಸರಿನಿಂದ ಸೂಚಿಸುವಂತಿದೆ. ಇದು ಈಗಲೂ ಪ್ರಚಾರದಲ್ಲಿದೆ, ಇದಕ್ಕೇ ಪ್ರಸಂಗ ಎಂದೂ ಹೆಸರು.

ಮೇಳ— ಎಂದರೆ ಗುಂಪು. ಯಕ್ಷಗಾನ ಆಡುವವರು, ಓದುವವರು ಒಂದು ಸಂಸ್ಥೆಯಂತೆ ಇರುತ್ತಾರೆ. ನಿರ್ದಿಷ್ಟಕಾಲದಲ್ಲಿ ಒಂದೂರಿಂದ ಮತ್ತೊಂದು ಊರಿಗೆ ಪ್ರಯಾಣ ಮಾಡುತ್ತಾರೆ. ಇದನ್ನು ಆ ಹೆಸರು ಸೂಚಿಸುತ್ತದೆ. ಮಂಡಳ, ಸಂಘ ಎಂದೂ ಅರ್ಥವಾಗಬಹುದು.

ಯಕ್ಷಗಾನ ಎಂಬ ಹೆಸರಿನ ವೈಶಿಷ್ಟ್ಯವನ್ನೂ ಕುರಿತು ಅನೇಕ ಅಭಿಪ್ರಾಯಗಳು ಬಂದಿವೆ. ಶ್ರೀ ರಾಮಚಂದ್ರ ಭಟ್ಟ ಹಾಸಣಗಿಯವರು ತಮ್ಮ 'ಯಕ್ಷನಾಟಕಗಳು' 1 ಎಂಬ ಹೊತ್ತಿಗೆಯಲ್ಲಿ ಇದಕ್ಕೆ ಯಕ್ಷನಾಟಕ ಎಂದೇ ಕರೆಯಬೇಕು ಎಂದು ಕನ್ನಡಿಗರನ್ನು ಕೇಳಿಕೊಂಡಿದ್ದಾರೆ. ಅಲ್ಲದೆ ಯಕ್ಷಗಾನ ಎಂದು ಕರೆಯುವುದು ಸೂಕ್ತವಾಗಲಾರದು, ಸಾರ್ಥಕವಾಗಲಾರದು. ಎಲ್ಲಾ

---

1 'ಯಕ್ಷನಾಟಕಗಳು'– ಶ್ರೀ ರಾಮಚಂದ್ರ ಭಟ್ಟ ಹಾಸಣಗಿ.

ತರದಲ್ಲಿಯೂ ನಾಟಕೀಯತೆಯಿಂದ ಕೂಡಿದ ಈ ನಾಟಕಗಳಿಗೆ, ಸಂಗೀತ ಪದ್ಧತಿಯ ಒಂದು ಭಾಗಕ್ಕೆ ಇರುವ ಹೆಸರನ್ನು ಕೊಡುವುದು ಅನುಚಿತ. " ಆದ್ದರಿಂದ ಯಕ್ಷನಾಟಕ ಪ್ರಿಯರು ಯಾರೂ ಯಕ್ಷಗಾನವೆಂಬ ಹೆಸರಿನಿಂದ ಇವನ್ನು ಕರೆಯಬಾರದೆಂದು ವಿನಯದಿಂದ ಸೂಚಿಸುತ್ತೇನೆ." 2

" ಸಂಗೀತ ಪದ್ಧತಿಯ ವೈಶಿಷ್ಟ್ಯವನ್ನು ತೋರಿಸುವ ' ಯಕ್ಷ ' ಎಂಬುದನ್ನು ಸಾಹಿತ್ಯ, ಸಂಗೀತ, ಅಭಿನಯಗಳನ್ನು ಒಂದೇ ಶಬ್ದದಿಂದ ತಿಳಿಯಪಡಿಸುವ ನಾಟಕ ಎಂಬ ಶಬ್ದವನ್ನೂ ಸೇರಿಸಿ ' ಯಕ್ಷನಾಟಕ 'ವೆಂದು ವ್ಯವಹಾರ ಮಾಡುವುದು ಸಮಂಜಸ, ಶಾಸ್ತ್ರೀಯ, ಸಾಧು " ಎಂದೂ ಅವರು ಹೇಳಿದ್ದಾರೆ. ಯಕ್ಷನಾಟಕ ಎಂದು ಈ ದೃಷ್ಟಿಯಿಂದ ಅವರು ಹೇಳಿರುವಂತೆ ಕರೆಯಬಹುದಾದರೂ, ಈಗ ಪ್ರಚಾರದಲ್ಲಿರುವ ' ಯಕ್ಷಗಾನ ' ಎಂಬ ಹೆಸರನ್ನು ಏಕೆ ಬಹಿಷ್ಕರಿಸಬೇಕೊ ತಿಳಿಯದಾಗಿದೆ. ಅನೇಕ ಹೆಸರುಗಳು ಆಗಲೇ ಇರುವುದರ ಜೊತೆಗೆ ಈ ಲೇಖಕರು ಸೂಚಿಸಿರುವುದನ್ನೂ ಸಹ ಇಟ್ಟುಕೊಳ್ಳಬಹುದು. ಅಲ್ಲದೆ ಈಗಿರುವ ಹೆಸರಿನಲ್ಲಿ ತಪ್ಪೇನೂ ಇಲ್ಲ. ಯಕ್ಷಗಾನ ಆಟ ಎಂದೇ ಈ ಬಗೆ ಪ್ರಸಿದ್ಧಿಯಲ್ಲಿರುವುದು. ಈ ಹೆಸರು ಬಂದ ಬಗೆ ಹೇಗೆ ಎಂಬ ವಿಷಯ ಇನ್ನೂ ನಿರ್ದಿಷ್ಟವಾಗಿ ತಿಳಿದಿಲ್ಲ. ಕೇವಲ ಊಹೆಯಲ್ಲೇ ಅದ ಎಂದು ಹೇಳಬೇಕು. ಅಲ್ಲದ ಇದು ' ನಖ ಶಿಖಾಂತ ಗಾನ ದೇಹಿ ' ಇಲ್ಲಿ ' ಗಾನ ' ಶಬ್ದಕ್ಕೆ ಇರುವ ಪ್ರಾಧಾನ್ಯವನ್ನು ಈ ಲೇಖಕರು ಕಡೆಗಣಿಸಿದಂತೆ ತೋರುವುದು ಎಂಬ ಶ್ರೀ ಪಾಂಡವೇಶ್ವರ ಗಣಪತಿರಾಯರು ಅದೇ ಪುಸ್ತಕದ ಮುನ್ನುಡಿಯಲ್ಲಿ ಹೇಳಿರುವ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.

ಈಗ ಯಕ್ಷಗಾನ ಎಂಬ ಹೆಸರು ಯಾವಾಗ ಹೇಗೆ ಹುಟ್ಟಿತು ? ಅದರ ಮೂಲ ಏನಿರಬಹುದು ಎಂಬ ವಿಷಯವನ್ನು ಸ್ವಲ್ಪ ಚರ್ಚಿಸಬೇಕಾಗಿದೆ. ಗಾನ ಎಂದರೇನೋ ಹಾಡು ಎಂದು ಅರ್ಥ. ಸುಲಭ. ಆದರೆ ಯಕ್ಷ ಎಂದರೇನು ? ಈ ವಿಷಯದಲ್ಲಿ ಅನೇಕ ಲೇಖಕರು ವಿವಿಧ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸಬಹುದು.

---

2 ಅದೇ. ಪುಟ ೧೪-೧೫ ನೋಡಿ.

ಮೊದಲನೆಯದು : ಯಕ್ಷಗಾನ ಒಂದು ಬಗೆಯ ಸಂಗೀತ, ಗಂಧರ್ವ ಗಾನವಿದ್ದಂತೆ. ಕಿನ್ನರಗಾನ ಎಂದರೆ ಯಕ್ಷಗಾನವೇ ಅಥವಾ ಅದರ ಒಂದು ಕವಲು. ಇದು ದೇಶೀಯ ಪದ್ಧತಿ. ಪ್ರಸಂಗವೆಂದರೆ ಪ್ರಬಂಧ. ಈ ರೀತಿ ಯಲ್ಲಿ ರಚಿತವಾಗಿರುವ ಒಂದು ಪ್ರಬಂಧ– ಉದಾ : ಕುಮಾರ ವಿಜಯ. ಯಕ್ಷ ರಾತ್ರಿ ಎಂಬುದು ಬಲಿಯು ಸೋತು ಕುಬೇರನಿಗೆ ಆನಂದವಾದ ದಿನ. ಕುಬೇರ ನೊಬ್ಬ ಯಕ್ಷ. ಇದೇ ನಮ್ಮ ದೀಪಾವಳಿ ಹಬ್ಬ. ಅಂದೇ ಈಗಲೂ ಯಕ್ಷ ಗಾನಕೂಟದವರು ತಮ್ಮ ಮೊದಲ ಆಟವನ್ನು ಆಡುವುದು. ಯಕ್ಷ ಎಂದರೆ ಭಕ್ತ, ಪೂಜಿಸುವವನು ಎಂದೂ ಅರ್ಥವಾಗುತ್ತದೆ. ಗಂಧರ್ವರಂತೆ ದೇವತೆ ಗಳಲ್ಲಿ ಯಕ್ಷರದೂ ಒಂದು ವಿಶಿಷ್ಟವರ್ಗ. ಕುಬೇರ ಇವರ ಅಧಿಪತಿ. ಕುಬೇರ ತನ್ನ ತಮ್ಮನಾದ ರಾವಣನಿಂದ ಪರಾಜಿತನಾಗಿ ಅಲಕಾವತಿಗೆ ಬಂದನಂತೆ. ಎಂದರೆ ಯಕ್ಷ ದಕ್ಷಿಣದೇಶದ ಒಂದು ಜನವರ್ಗವಾದಂತಾಯಿತು. 'ನಾಟ್ಯ ಗರಣ 'ವೇ ಯಕ್ಷಗಾನ— ದೇಶೀಯ ಇದು. ನೃಪತುಂಗನು 'ಕವಿರಾಜ ಮಾರ್ಗ 'ದಲ್ಲಿ ಈ ಪದವನ್ನು ಬಳಸಿರುವುದರಿಂದ ಅವನಿಗಿಂತ ಮುಂಚೆ ಯಕ್ಷ ಗಾನ ಇದ್ದಿರಬೇಕು. 'ಎಕ್ಕಲಗಾಣ ' ಎಂದರೆ ಕನ್ನಡದಲ್ಲಿ ಉತ್ತಮ ಸಂಗೀತ ಗಾರ ಎಂದರ್ಥ. ಗಾನ7ಗಾಣ. ಇದಕ್ಕೆ ಅಗ್ಗಳ, ಅಭಿನವಪಂಪ ಇವರ ಪ್ರಯೋಗ ಸಾಕ್ಷಿ. ದೇಶೀಯ ಗಾನದೊಂದಿಗೆ ಆಟ (ನರ್ತನವೂ) ಇದ್ದಿರ ಬೇಕು. ಅದೇ ಯಕ್ಷಗಾನ. ಗಾನ–ದೃಶ್ಯ ಎರಡೂ ಆಯಿತು. ನಾಗವರ್ಮ ಹೇಳಿರುವ 'ಬಾಜನೆಗಬ್ಬ'ದ ಲಕ್ಷಣಗಳೆಲ್ಲವೂ ಯಕ್ಷಗಾನದಲ್ಲಿವೆ. ನೃಪತುಂಗ ಹೇಳಿರುವ 'ಚಿತ್ತಾಣ 'ವೆಂಬುದೇ ಓದಿ ಹೇಳುವ ದೇಶೀಯ ಶ್ರವ್ಯಕಾವ್ಯ. 'ಬೆಪಂಡೆ ' ಎಂಬುದು ಆಡಿತೋರಿಸುವ ದೃಶ್ಯಕಾವ್ಯ. ಎಕ್ಕಲಗಾಣ–ಯಕ್ಷ ಗಾನಾಚಾರ್ಯ–ಭಾಗವತ ! ಈ ಆಟವೇ ನಾಟ್ಯಗರಣ. ಜೈನರ ದೃಷ್ಟಿಯಿಂದ ಇದೇ 'ಯಕ್ಷಾಂದೋಳ ' ಆದ್ದರಿಂದ ಯಕ್ಷಗಾನಕ್ಕೆ ಪುರಾತನವಾದ ಗೂಢ ವಾದ ಚರಿತ್ರೆ ಇದೆ. 3

ಎರಡನೆಯದು : ಜಾತಕ, ಜೈನ ಮತ್ತು ಬೌದ್ಧ ಕಥೆಗಳಲ್ಲಿ 'ಯಕ್ಷ 'ರ ಮಾತು ಬರುತ್ತದೆ. ಯಕ್ಷ ಎಂಬುದು ಒಂದು ಗುಂಪು ಎಂದು ತೋರುತ್ತದೆ.

---

೩ ಶ್ರೀ. ಮುಳಿಯ ತಿಮ್ಮಪ್ಪಯ್ಯನವರ 'ಪಾರ್ತಿ ಸುಬ್ಬ ' ೨೨-೪೨ ಪುಟ ಗಳಿಂದ.

(A tribe). ' ಜಕ್ಕಿಣಿ ' ಎಂಬುದು ನರ್ತನದಲ್ಲಿ ಒಂದು ಭಾಗ (A type of dance). ಯಕ್ಷಗಾನವು ಯಕ್ಷರ ಗುಂಪಿಗೆ ಸೇರಿದವರಿಂದ ಬೆಳೆದು ಬಂದ ನರ್ತನವೆಂದು ಹೇಳಬಹುದು. 4 ಮಲಯಾಳದಲ್ಲಿ ಯಕ್ಷಗಾನಕ್ಕೆ ' ಕಥಕ್ಕಳಿ ' (ಕತೆಯಾಟ) ಎನ್ನುತ್ತಾರೆ. ಮಲಯಾಳವು ಕನ್ನಡ ಯಕ್ಷಗಾನದ ತವರು. 5 ಆದರೂ ಯಕ್ಷಗಾನ ದ್ರಾವಿಡ ಪದ್ಧತಿಯ ನಾಟಕವಲ್ಲ. ಭರತಾದಿಗಳ ಕ್ರಮವನ್ನನುಸರಿಸಿ ಹುಟ್ಟಿದ ಒಂದು ನಾಟ್ಯದ ಬಗೆ. ಮಲಯಾಳದ ವಾದ್ಯ-' ಚೆಂಡೆ ' ಕನ್ನಡದ ಯಕ್ಷಗಾನದಲ್ಲಿದೆ ಈಗಲೂ. ಮಲಯಾಳದ ಹತ್ತಿರವಿರುವ ದಕ್ಷಿಣಕನ್ನಡದಲ್ಲಿಯೇ ಇದು ಹೆಚ್ಚು ಪ್ರಚಾರದಲ್ಲಿರುವುದು. 6

ಡಾ. ವಿ. ರಾಘವನ್ ಅವರು : ಸಂಸ್ಕೃತ ನಾಟ್ಯಶಾಸ್ತ್ರದ ಪರಂಪರೆಯಲ್ಲಿಯ ನಾಟ್ಯನೃತ್ಯಗಳ ಪ್ರಭಾವದಿಂದ ಅವುಗಳ ಅಭಿನಯ, ಸಂಗೀತ, ತಾಳ ಮತ್ತು ನೃತ್ಯವಿಕ್ಷೇಪಗಳನ್ನು ಅಳವಡಿಸಿಕೊಂಡ ಹೆಚ್ಚು ವಿದಗ್ಧ ಜಾತಿಯ ನೃತ್ಯಪ್ರಕಾರಗಳ ಅವಶೇಷಗಳಲ್ಲಿ ಒಂದು ದಕ್ಷಿಣ ಇಂಡಿಯದ ನಾಟಕ ಪರಂಪರೆ. ಇದು ' ಅಪೆರಾ 'ದಂತೆ ಸಂಗೀತಯುಕ್ತ. ತಮಿಳಿನಲ್ಲಿ ತೆರುಕೂಟ (ಓಣಿಯ ಆಟ) ಎಂದು ಹೆಸರು. ಯಕ್ಷಗಾನ ಎಂದೂ ಹೇಳುತ್ತಾರೆ. ಅವರ ಹಳ್ಳಿಯ ಆಟಗಳೇ ಯಕ್ಷಗಾನಗಳು. ತಮಿಳಿನ ತೆರುಕೂಟಕ್ಕೆ, ತೆಲುಗಿನ ವೀಧಿನಾಟಕ, ಕನ್ನಡದ ಬಯಲಾಟ ಸಮ. ಗುಂಟೂರು ಜಿಲ್ಲೆಯಲ್ಲಿ ನೃತ್ಯಗೀತ ನಾಟಕಗಳಲ್ಲಿ ಪ್ರವೀಣರಾದ ' ಜಕ್ಕುಲವರು ' ಎಂಬ ಜಾತಿಯೇ

---

೪ ಶ್ರೀ. ರಾ. ಅನಂತಕೃಷ್ಣ ಶರ್ಮರ ಅಭಿಪ್ರಾಯ.

5 "Historically, the origin of Kathakkali is associated with Malabar and more particulerly Travancore which remains to this day the repository of this art. The Raja of Kottarakara [1575—1650 A.D.] is credited to be the first composer and originator of Kathakkali in its present form " The language of Kathakkli by Premkumar

೬ ಶ್ರೀ ಚಕ್ರಪಾಣಿ— ಜಯಕರ್ಣಾಟಕ. ೧೩ ನೆಯ ಸಂಪುಟ ಸಂಚಿಕೆ 2.

ಬಂದಿದೆ. 7 ಅಪ್ಪಕಾವ್ಯ (ತೆಲುಗು ೩೦೦ ವರ್ಷಗಳ ಹಿಂದಿನದು) ದಲ್ಲಿ ಯಕ್ಷಗಾನದ ಹಾಡುಗಳನ್ನು ಕಟ್ಟುವ ರೀತಿ ಹೇಳಿದೆ. ಯಕ್ಷಗಾನದ ಹಾಡುಗಳು 'ರಗದ' ಛಂದಸ್ಸಿನಲ್ಲಿರುತ್ತದೆಂದು ಹೇಳಿದೆ. 8 ಉತ್ತರಭಾರತದಲ್ಲಿ ಚಾರಣ ಗೀತ ಎಂಬ ಈ ಮಾದರಿಯ ಯಕ್ಷಗಾನಗಳಿವೆ. ಮೈಥಿಲಿ ಪ್ರಾಕೃತ ಭಾಷೆಯ ಹಾಡುಗಳುಳ್ಳ 'ಪಾರಿಜಾತಹರಣ' ಎಂಬ ಒಂದು ನಾಟಕ ಪ್ರಕಟವಾಗಿದೆ. ಅದು ನಮ್ಮ ಬಯಲಾಟದಂತೆ ಇದೆ. 9 ನೇ ಪಾಲದ 'ಗಂಧರ್ವಗಾನ,' ಹರಿಶ್ಚಂದ್ರ ನಾಟಕಗಳೂ, ಬಂಗಾಳದ 'ಯಾತ್ರಾ' ಎಂಬ ಆಟಗಳೂ ಇದೇ ಜಾತಿ. ಯಕ್ಷಗಾನಗಳು ೩೦೦–೪೦೦ ವರ್ಷಗಳಷ್ಟು ಹಿಂದಿನವೆಂಬುದು ಖಂಡಿತ– ಎಂದು ಜಯಕರ್ಣಾಟಕ–ನಾಟ್ಯಾಂಕ–ಸಂಪುಟ ೧೨, ಸಂಚಿಕೆ ೧೧ 1934– 'ಯಕ್ಷಗಾನ' ಎಂಬ ಲೇಖನದಲ್ಲಿ ತಿಳಿಸುತ್ತಾರೆ.

ಪ್ರೊ|| ಪಿ. ಎಸ್. ಶಾಸ್ತ್ರಿಯವರು 10 'ಯಕ್ಷ' ಎಂಬ ಪದಕ್ಕೆ ಅನೇಕ ಅರ್ಥಗಳನ್ನು ಸಂಗ್ರಹಿಸಿದ್ದಾರೆ. ಅತಿಮಾನುಷವ್ಯಕ್ತಿ, ಪ್ರಭೆಯನ್ನು ಬೆಳಗಿಸುವವರು, ಸಂತೋಷಕೂಟ, ದೊಡ್ಡ ಹಬ್ಬ (Feast and Festival), ಕೆಲವು ಕಡೆ ಪಾಪ ಭೀತಿ ಎಂದೂ, ಮತ್ತೆ ಕೆಲವೆಡೆ ಪ್ರಕೃತಿಯಲ್ಲಿನ ಕಣ್ಣಿಗೆ ಸುಂದರವಾದ ವಸ್ತು, ವಿಚಿತ್ರ ಪ್ರಾಣಿ ಎಂದೂ ಅನೇಕ ಅರ್ಥಗಳಿವೆ. ಈ ಅರ್ಥಗಳು ವೇದದಲ್ಲಿ ಸಿಗುತ್ತವೆ– ಎಂದೂ ಹೇಳಿದ್ದಾರೆ. ಪ್ರತಿಪದಕ್ಕೂ ಈಗ ನಿರ್ದಿಷ್ಟವಾದ, ನೈಘಂಟಿಕವಾದ ಅರ್ಥ ಈಗ ನಿರ್ಧಾರವಾಗಿದೆ, ಹಿಂದೆ ಇರಲಿಲ್ಲವೇನೊ. ಆದರೂ ಪದಗಳಿಗೆ ಅರ್ಥ ಬದಲಾವಣೆಯಾಗುವದು ಸಹಜ. ಅರ್ಥವಲಯ ಮತ್ತು ಭಾವ ಪರಿವೇಶ ಬೆಳೆದುಕೊಂಡು ಬರುತ್ತವೆ ಕಾಲಕ್ರಮದಲ್ಲಿ. ಆಗ ಅನಿರ್ದಿಷ್ಟತೆಯೂ ಆವಶ್ಯಕ. ರಸ ಒಸರುವುದೂ, ಧ್ವನಿ ಸೂಚಿತ

---

7 ಗುಂತಕಲ್ಲಿನಿಂದ 25 ಮೈಲು ದೂರದಲ್ಲಿ [ನಾಲ್ಕನೆಯ Railway Station] ಚಿಕ್ಕಲ ಚೆರುವು ಎಂಬ ಒಂದು ಊರಿದೆ.

8 ಕನ್ನಡದ ರಗಳೆ ಛಂದಸ್ಸು

9 'Journal of Bihar and Orissa Research Society.'

10 Prabhudda Bharath or Awakened India, Feb 1946 "The concept of beauty in Rig-Veda" ಎಂಬ ಲೇಖನ.

ವಾಗುವುದೂ ಕೂಡ ಇದರಿಂದಲೇ. "Poetry has saved us from language becoming Algebra" ಎಂಬಂತೆ. ಋಗ್ವೇದ ದಲ್ಲಿ 'ಯಕ್ಷ' ಎಂಬ ಮಾತಿಗೆ ಹನ್ನೊಂದು ಅರ್ಥಗಳಿವೆ. ಮೇಲಿನ ದೃಷ್ಟಿ ಯಿಂದ ಇದರ ಸ್ವಾರಸ್ಯವನ್ನು ಅರಿಯಬಹುದು. ಮುಖ್ಯವಾದ ಅರ್ಥಗಳೆಂದು ಇವನ್ನು ಗ್ರಹಿಸಬಹುದು. ಉತ್ಸವ, ಕಲಾಕೃತಿ, ದಿವ್ಯೌಷಧ ಮತ್ತು ದೇವಾ ರಾಧನೆ ಎಂದು. ಈ ಅರ್ಥ, ದೃಷ್ಟಿಗಳ ಬೆಳಕಿನಲ್ಲಿ 'ಯಕ್ಷಗಾನ'ವೆಂದರೇ ನೆಂಬುದನ್ನು ಗ್ರಹಿಸಬೇಕಾಗಿದೆ, ಗ್ರಹಿಸ ಬಹುದಾಗಿದೆ.

ಸಾಮಾನ್ಯವಾಗಿ ಜನರಿಗೆ ತೊಂದರೆಯಾದಾಗ ಅದರ ಪರಿಹಾರಕ್ಕಾಗಿ 'ಯಕ್ಷಗಾನ' ಆಡಿಸುವೆನೆಂಬ ಹರಕೆಹೊರುವ ರೂಢಿ ಈಗಲೂ ಇರುತ್ತದೆ. ನಮ್ಮಲ್ಲಿನ ಯಕ್ಷಗಾನ 'ಕಲೆಗಾಗಿ ಕಲೆ'ಯಾಗದೆ ಭಕ್ತಿ, ದೈವತೃಪ್ತಿ ಇತ್ಯಾದಿ ಗುರಿಗಳಿವೆ. ಈಗ ದೊರೆತಿರುವ ಯಕ್ಷಗಾನ ಕೃತಿಗಳಲ್ಲಿ ಎಲ್ಲವೂ ಪುರಾಣ ಕತೆಗಳಿಗೆ, ದೇವರಿಗೆ ಸಂಬಂಧಪಟ್ಟವೇ ಆಗಿವೆ. ಹಿಂದೆಯೇ ಸೂಚಿಸಿರುವಂತೆ ಯಕ್ಷಗಾನ ಪ್ರಾರಂಭವಾಗುವುದು ವರ್ಷದಲ್ಲಿ ದೀಪಾವಳಿ ಹಬ್ಬದಿಂದಲೇ. ಈ ಅರ್ಥಗಳಿಗೂ, ಈ ನಡೆವಳಿಕೆಗಳಿಗೂ ಪ್ರಾಯಶಃ ಸಂಬಂಧ ವನ್ನು ಕಲ್ಪಿಸಬಹುದೆಂದು ತೋರುತ್ತದೆ.

ಹಬ್ಬಹರಿದಿನಗಳಲ್ಲಿ ಜನರಿಗೆ ಸಂತೋಷವಾದಾಗ ಸಮಾಜದಲ್ಲಿ ಒಂದು ವಿಶೇಷ ನಡೆದಾಗ, ಅದನ್ನು ಯಾವುದಾದರೂ ಒಂದು ರೀತಿಯಲ್ಲಿ ಪ್ರದರ್ಶಿಸು ವುದು ಪದ್ಧತಿ. ಇದು ಪ್ರಪಂಚದ ಎಲ್ಲ ಭಾಗಗಳಲ್ಲೂ, ಜನಾಂಗಗಳಲ್ಲೂ ರೂಢಿ. ಗ್ರಾಮದ ಜನತೆಯಲ್ಲಿ ನಡೆಯುತ್ತಿದ್ದ ಇಂತಹ ಪ್ರದರ್ಶನಗಳೇ ಕಾಲಕ್ರಮದಲ್ಲಿ ಯಕ್ಷಗಾನಗಳಾಗಿರಬಹುದು. ಒಂದೊಂದು ಕಡೆ ಒಂದೊಂದು ಹೆಸರು ಇದಕ್ಕೆ ಪ್ರಚಾರದಲ್ಲಿ ಬಂದಿರಬಹುದು. ಜರ್ಮನಿ, ಫ್ರಾನ್ಸ್, ಗ್ರೀಸ್, ರೋಂ ಮತ್ತು ಇಟಲಿ, ಸ್ಪೇನ್ ಮತ್ತು ಪೋರ್ಚುಗಲ್, ಗ್ರೇಟ್‌ಬ್ರಿಟನ್, ಚೈನ ಎಲ್ಲಕಡೆಗಳಲ್ಲೂ ಇಂತಹ ಒಂದು ಪದ್ಧತಿ ಪ್ರಚಾರದಲ್ಲಿರುವುದಕ್ಕೆ ನಿದರ್ಶನಗಳಿವೆ. 11

---

11 "The Dramatic History of the World"
— By Sri K. Srinivasa Rao.

ಡಾ.ಎಫ್.ಕಿಟ್ಟೆಲ್ ಅವರು 'ಯಕ್ಷಗಾನ' ಎಂದರೆ 'St. Petersberg lexican' ನಲ್ಲಿ ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ 'Melody' ಎಂಬರ್ಥವಿದೆ ಎಂದು ನಾಗವರ್ಮನ ಕನ್ನಡ ಛಂದಸ್ಸಿನ ಪೀಠಿಕೆಯಲ್ಲಿ ಹೇಳುತ್ತಾರೆ.

ಚತ್ತಾಣ 12 ದಿಂದಲೇ ಯಕ್ಷಗಾನ ಬಂದಿತು. ಅವುಗಳಿಗೆ ಸಮೀಪ ಸಂಬಂಧವಿದೆ ಎಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಇಲ್ಲಿ ನೋಡಲು, ಕೇಳಲು, ಕೊಂಚ ಸಂಬಂಧ ಸಾಮೀಪ್ಯವಿದ್ದಂತೆ ತೋರಿದರೂ ಯಥಾವತ್ತಾಗಿ ವಿಚಾರ ಮಾಡಿದರೆ ಇದು ತುಂಬ ದೂರದ ಊಹೆಯೆಂದೇ ಹೇಳಬೇಕಾಗುತ್ತದೆ.

ಎಕ್ಕಡಿಗ–ಎಕ್ಕಲಗಾಣ ಎಂದು ಯಕ್ಷಗಾನ ಕೂಟದವರನ್ನು, ಭಾಗವತರನ್ನು ನಿರ್ದೇಶಿಸುವ ಪದ್ಯಗಳು ಕನ್ನಡ ಸಾಹಿತ್ಯದಲ್ಲಿ ಸಿಗುತ್ತವೆ. ಬಾಜನೆಗಬ್ಬ ಎಂದರೆ ಯಕ್ಷಗಾನವೇ 12 ಚತ್ತಾಣ, ಬೆದಂಡೆ, ಪದ, ಮೆಲ್ವಾಡು ಎಂದರೂ ಅದೇ. ಯಕ್ಷ–ಯಕ್ಕ–ಯಕ್ಕಲ–ಎಕ್ಕಡಿಗ ಎಂದು ತದ್ಭವ. ಈ ಪರಂಪರೆಯಲ್ಲಿ ಬೆಳೆದು–೧೮ನೇ ಶತಮಾನದಲ್ಲಿ ಪಾರ್ತಿ ಸುಬ್ಬನು-ಯಕ್ಷಗಾನ ವಾಲ್ಮೀಕಿ–ಎಂದು ಪ್ರಸಿದ್ಧನಾದ ಯಕ್ಷಗಾನದ ಆದಿಕವಿ! 13 ಯಕ್ಷಗಾನ ಎಂಬ ಹೆಸರಿನ ವಿಷಯದಲ್ಲಿ ಸದ್ಯಕ್ಕೆ ಇಷ್ಟು ವಿಷಯವನ್ನು ಹೇಳಬಹುದಾಗಿದೆ. ಆದರೂ ನಿರ್ದಿಷ್ಟವಾಗಿ ಹೀಗೇ ಎಂದು ಹೇಳಿದಂತೇನೂ ಆಗಲಿಲ್ಲವಾದರೂ ಮುಂದಿನ ಸಂಶೋಧನೆಗೆ ಇದು ಸಹಾಯಕವಾಗಬಹುದು ಎಂದು ತೋರುತ್ತದೆ.

---

12 "ಕಂದಂಗಳ್ ಪಲವಾಗಿರೆ।
ಸುಂದರ ವೃತ್ತಂಗಳಕ್ಕರಂ ಚೌಪದಿಮು॥
ತ್ತಂದಲ್ ಗೀತಿಕೆ ತಿವದಿಗ।
ಳಂದಂ ಬೆತ್ತೆಸೆಯೆ ಪೇಳ್ವೊಡದು ಚತ್ತಾಣಂ॥"

— ಕವಿರಾಜಮಾರ್ಗ.

12 ಧರ್ಮಸ್ಥಳದ ಶ್ರೀ. ಹೆಗ್ಗಡೆಯವರಿಗೆ ಅರ್ಪಿಸಿದ 'ಸಮರ್ಪಣೆ' ಎಂಬ ಗ್ರಂಥದಲ್ಲಿ ಶ್ರೀ. ಕೆ. ಪಿ. ವೆಂಕಪ್ಪಶೆಟ್ಟರವರ 'ಯಕ್ಷಗಾನ ಕಲೆ' ಎಂಬ ಲೇಖನ ನೋಡಿ.

13 ಅದೇ.

ಇನ್ನು ಯಕ್ಷಗಾನ ಸಾಹಿತ್ಯದ ಹುಟ್ಟು ಮತ್ತು ಬೆಳೆವಣಿಗೆಯನ್ನು ಕುರಿತು ವಿಚಾರಮಾಡುವುದು ಅಗತ್ಯ.

ಯಕ್ಷಗಾನ ಸಾಹಿತ್ಯ ಹೇಗೆ ಹುಟ್ಟಿತು ಎಂಬ ಪ್ರಶ್ನೆ ಏಳುವುದು ಸಹಜ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕ ಇದ್ದುದು ತಿಳಿದುಬಂದಿಲ್ಲ. ಸಂಸ್ಕೃತದ 'ರತ್ನಾವಳಿ'ಯ ಅನುವಾದವಾದ 'ಮಿತ್ರವಿಂದ ಗೋವಿಂದ'ವೇ ನಮ್ಮ ಮೊದಲನೆಯ ನಾಟಕ! ಇದರ ವಿಷಯವಾಗಿಯೂ ನಾವೇನೂ ಹೆಮ್ಮೆಪಟ್ಟು ಕೊಳ್ಳುವಂತಿಲ್ಲ. ಸ್ವತಂತ್ರ ನಾಟಕಗಳು ಹುಟ್ಟಿದ್ದು ಕೇವಲ ಈಚಿಗೆ ೧೯ ನೆಯ ಶತಮಾನದಲ್ಲಿ ಎನ್ನಬಹುದು. ಹಿಂದೆ ಕನ್ನಡದಲ್ಲಿ ನಾಟಕಗಳಿಲ್ಲದಿರುವುದಕ್ಕೆ ಕಾರಣವೇನು ? ೧೨ ನೆಯ ಶತಮಾನದವರೆಗೂ ಚಂಪೂಸಾಹಿತ್ಯವೇ ಹೆಚ್ಚು ರಚಿತವಾದುವು. ಅವುಗಳಲ್ಲಿ ನಾಟಕೀಯತೆ, ನಾಟಕೀಯ ಚಿತ್ರಗಳು, ಕವಿಗಳ ನಾಟಕ ರಚನಾ ಕೌಶಲ್ಯ ಇವು ಕಂಡುಬರಬಹುದು. ಕೆಲವನ್ನೂ ಸುಲಭವಾಗಿ ನಾಟಕಕ್ಕೆ ತಿರುಗಿಸಲೂಬಹುದು. ಈ ಪ್ರಯೋಗವೂ ನಡೆದಿದೆ ನಮ್ಮಲ್ಲಿ. 14 ಆದರೂ ಅಂದಿನದೆಂದು ಹೇಳುವ ನಾಟಕ ಯಾವುದೂ ಇದುವರೆಗೂ ದೊರೆತಿಲ್ಲ. ಹಾಗಾದರೆ, ಬಹುಕಾಲದವರೆಗೆ ನಾಟಕದ ಸ್ಥಾನವನ್ನು ಯಕ್ಷಗಾನವು ಆಕ್ರಮಿಸಿದ್ದಿತೆ ? ಹಾಗೆ ಒಂದು ವೇಳೆ ಹೇಳುವ ಸಾಹಸ ಮಾಡಿದರೂ, ದುರದೃಷ್ಟವಶದಿಂದ, ಯಕ್ಷಗಾನವೂ ಕೂಡ ಬಹಳ ಹಿಂದಿನದು ಯಾವುದೂ ಸಿಕ್ಕುವುದಿಲ್ಲ. ಈಗ ದೊರೆತಿರುವ ಯಕ್ಷಗಾನಗಳಲ್ಲೂ ಅತ್ಯಂತ ಪ್ರಾಚೀನವೆಂದರೆ ಸುಮಾರು ೧೬ ನೆಯ ಶತಮಾನದ್ದೇ. ಅದರ ಹಿಂದಿನ ಕಾಲದ ನಾಟಕ ಸಾಹಿತ್ಯವೆಂಥದು ? ಇಂಥ ಹಲವು ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಇದು ಒಂದು ಕಠಿಣ ಸಮಸ್ಯೆಯೇ ಆಗಿದೆ. ಈ ವಿಷಯದಲ್ಲಿ ಚರ್ಚೆನಡೆದಿದ್ದರೂ ವಿದ್ವಾಂಸರಲ್ಲಿ ಒಮ್ಮತ ಇಲ್ಲ.

ಕೆಲವರು ಯಕ್ಷಗಾನಕ್ಕೆ ಪುರಾತನವಾದ ಹಾಗೂ ಗೂಢವಾದ ಚರಿತ್ರೆ ಇದೆ. ಕುಬೇರ, ರಾವಣ, ಇವರ ಕಾಲದಷ್ಟು ಹಿಂದಕ್ಕೂ ಹಲವರು ಧೀರರು

---

14 'ಶ್ರೀ'ಯವರ ಗದಾಯುದ್ಧ ನಾಟಕ– ರನ್ನಕವಿಯ ಸಾಹಸಭೀಮ ವಿಜಯದಿಂದ

ಒಯ್ಯುತ್ತಾರೆ. ಕವಿರಾಜ ಮಾರ್ಗದ ಕಾಲಕ್ಕಿಂತಲೂ 15 ಹಿಂದೆ ಇದು ಕನ್ನಡನಾಡಿನಲ್ಲಿ ಪ್ರಚಾರದಲ್ಲಿತ್ತು ಎಂದು ಊಹಿಸುತ್ತಾರೆ; ಅಲ್ಲದೆ, ಇದು ಕನ್ನಡದ ದೇಶೀ ಸಾಹಿತ್ಯ. ಎಲ್ಲಿಂದಲೂ ನಾವು ಎರವಲು ತೆಗೆದುಕೊಂಡಿದ್ದಲ್ಲ. ಚಿತ್ತಾಣ ಬೆದಂಡೆಗಳು ಇದರಲ್ಲಿನ ಎರಡು ಪ್ರಭೇದಗಳು ಮಾತ್ರ. ಒಂದು ಶ್ರಾವ್ಯ, ಮತ್ತೊಂದು ದೃಶ–ನಾಟಕದಲ್ಲಿ ಪತಾಕ ಪ್ರಕರಿಗಳಂತೆ ಇಲ್ಲಿ ಪರ, ಮೇಲ್ಪಾಡು ಇತ್ಯಾದಿಗಳಿವೆ." 16 ಎಂದೂ ಅಭಿಪ್ರಾಯಪಡುತ್ತಾರೆ. ಯಕ್ಷಗಾನವು ಮಲೆಯಾಳದಿಂದ ಕನ್ನಡಕ್ಕೆ ಬಂತು ಎಂಬುದು ಮತ್ತೊಂದ ಅಭಿಪ್ರಾಯ. ಆದರೆ ಅಲ್ಲಿಯೂ ಅದು ಸ್ವತಂತ್ರವಲ್ಲ. ಸಂಸ್ಕೃತದ ಭರತಾದಿಗಳಿಂದ ಹುಟ್ಟಿ ಬಂದ ನಾಟಕದ ಒಂದು ಬಗೆ; ಲಕ್ಷಣಗಳನ್ನು ಮಲೆಯಾಳದ ಕಥಕಳಿಯಲ್ಲೂ ಕನ್ನಡದ ಯಕ್ಷಗಾನದಲ್ಲೂ ಕಾಣಬಹುದು; ಎರಡೂ ಜನ್ಮವೆತ್ತಿದ್ದು ಅಜ್ಞರಿಗಾಗಿ, ನಿರಕ್ಷರರಿಗಾಗಿ. ಬಡವರೇ ಬಡವರಿಗಾಗಿ ರಚಿಸಿದ್ದು. 17 ಮತ್ತೆ ಕೆಲವರ ಅಭಿಪ್ರಾಯದಂತೆ, ಸಂಸ್ಕೃತದ 'ರಾಸ'ವನ್ನು ಹೋಲುವ ದೃಶ್ಯ ನೃತ್ಯ ಪ್ರಕಾರಗಳು ದ್ರಾವಿಡ ಸಂಸ್ಕೃತಿಯಲ್ಲಿದ್ದುವು. ಇವು ಸಂಸ್ಕೃತ ನಾಟ್ಯಶಾಸ್ತ್ರದ ಪ್ರಭಾವದಿಂದ ಸಂಗೀತ, ನೃತ್ಯ, ತಾಳ, ವಿಕ್ಷೇಪಗಳನ್ನು ಅಳವಡಿಸಿಕೊಂಡು ಹೊಸರೂಪ ತಳೆದುವು. ಇವುಗಳ ಅವಶೇಷಗಳಲ್ಲೊಂದು ದಕ್ಷಿಣದೇಶದ ನಾಟಕ ಪರಂಪರೆ. ಪಾಶ್ಚಾತ್ಯರ 'ಅಪೆರಾ'ದಂತೆ ಇದು ಸಂಗೀತಯುಕ್ತ. ಇದೇ ಯಕ್ಷಗಾನ; ಇದರ ಇತಿಹಾಸ ೩೦೦–೪೦೦ ವರ್ಷಗಳಷ್ಟು ಹಿಂದಿನದು. ಭರತನ 'ಆದರ್ಶ' ನಾಟಕವನ್ನೂ ಇದು ಹೋಲುತ್ತದೆ. 18

---

15 ಒಂಭತ್ತನೆಯ ಶತಮಾನ.

16 ಮುಳಿಯ ತಿಮ್ಮಪ್ಪಯ್ಯನವರ ಲೇಖನ 'ಸಂಭಾವನೆ' ಗ್ರಂಥದಲ್ಲಿ ಮತ್ತು ಅವರ 'ಪಾರ್ತಿಸುಬ್ಬ' ಎಂಬ ಗ್ರಂಥ ಮತ್ತು 'ಪಂಚಕಜ್ಜಾಯ' (೧೯೨೭) ದಲ್ಲಿ 'ಯಕ್ಷಗಾನವೂ ಬಯಲಾಟವೂ' ಎಂಬ ಅವರ ಲೇಖನ ನೋಡಿ.

17 ಜಯಕರ್ನಾಟಕ ಸಂಪುಟ ೧೩. ಸಂಚಿಕೆ ೨—೧೯೩೫. ಶ್ರೀ ಚಕ್ರಪಾಣಿಯವರ ಲೇಖನ 'ಯಕ್ಷಗಾನ' ನೋಡಿ.

18 Dr. V. ರಾಘವನ್. ಜಯಕರ್ನಾಟಕ, ನಾಟ್ಯಕ— ೧೯೩೪.

ಲೂಯಿರೈಸ್‌ರವರು ಯಕ್ಷಗಾನದ ಇತಿಹಾಸವನ್ನು ಕೇವಲ ಇತ್ತೀಚಿನದೆಂದು ಕುಗ್ಗಿಸುವರು. ಹುಟ್ಟಿದ್ದು ೧೮ ನೆಯ ಶತಮಾನದಲ್ಲಿ ಎನ್ನುತ್ತಾರೆ. ತೆಲುಗಿನಲ್ಲಿ ಯಕ್ಷಗಾನವು ಸುಮಾರು ೧೪ ನೆಯ ಶತಮಾನದಲ್ಲಿ ಇದ್ದಂತೆ ತೋರುತ್ತದೆ. ' ಜಕ್ಕುಲು ' ಎಂಬ ಒಂದು ಗುಂಪಿನವರಿಂದ ಇದು ಪ್ರಚಾರಕ್ಕೆ ಬಂದಿತು. ' ಜಕ್ಕಿಣಿ ' ಎಂದರೆ ನರ್ತನದ ಒಂದು ಪ್ರಕಾರ. ಕಾಲ ಕ್ರಮದಲ್ಲಿ ಇದು ಹಳ್ಳಿಗಳಲ್ಲಿ ಬೆಳೆದು ಪಟ್ಟಣಗಳಿಗೂ ಬಂದು ರಾಜರು ಶ್ರೀಮಂತರೂ ಕೂಡ ಇದಕ್ಕೆ ಪ್ರೋತ್ಸಾಹ ಕೊಟ್ಟರೆಂದು ತಿಳಿಯುತ್ತದೆ. 19 ಅಲ್ಲದೆ ಸುಪ್ರಸಿದ್ಧ ವರಸಂಗೀತಜ್ಞರಾದ ತ್ಯಾಗರಾಜರ ತಾತಂದಿರಾದ ಗಿರಿರಾಜಕವಿ ತೆಲುಗಿನಲ್ಲಿ ಕೆಲವು ಯಕ್ಷಗಾನಗಳನ್ನು ಬರೆದಿರುವರೆಂದೂ ತಿಳಿಯುತ್ತದೆ. ದ್ರಾವಿಡರಲ್ಲಿ ಓದುವ ನಾಟಕಗಳು ಇಲ್ಲದಿದ್ದರೂ ಆಡುವ ನಾಟಕಗಳು ಇದ್ದೇಇದ್ದಿರಬೇಕು. ಸಂಸ್ಕೃತ ನಾಟಕಗಳು ಪ್ರಚಾರವಾದ ಕಾಲದಲ್ಲೂ ಇವು ಇದ್ದಿರಬೇಕು ಏಕೆಂದರೆ, ' ದ್ರಾವಿಡ ಸತ್ತ್ವ ' ಇವುಗಳಲ್ಲಿ ತುಂಬಿದೆ. ಸ್ವತಂತ್ರ ರೀತಿಯ ಛಂದಸ್ಸು ಇದೆ. ಎಂದರೆ ಮೊಲಿನಿಂದಲೂ ದ್ರಾವಿಡರಲ್ಲಿ ಆರ್ಯರಿಗಿಂತಲೂ ಹೆಚ್ಚಾಗಿಯೇ ನರ್ತನಾದಿಗಳು ಇದ್ದಿರಬೇಕು. ಆರ್ಯರೂ ಕೂಡ ಈ ದ್ರಾವಿಡ ಅಂಶವುಳ್ಳ ನಾಟಕಗಳನ್ನು ಉಪಯೋಗಿಸಿಕೊಂಡಿರಬೇಕು. ಕ್ರಮೇಣ ಇತರ ಕ್ಷೇತ್ರಗಳಲ್ಲಿ ಆಗಿರುವಂತೆ ಇಲ್ಲೂ ಸಂಸ್ಕೃತದ ಪ್ರಭಾವ ಇಂತಹ ಜನಪ್ರಿಯನಾಟಕಗಳ ಮೇಲೆ ಹೆಚ್ಚು ಹಬ್ಬಿ ಅದರಿಂದಲೇ ಇದು ಹುಟ್ಟಿತು ಎಂಬಷ್ಟು ಪ್ರಬಲವಾಗಿದೆ ಸಂಸ್ಕೃತದ ಪ್ರಭಾವ. ನಟರಾಜನಾದ ಶಿವ ದ್ರಾವಿಡದೇವತೆ. ಅವನ ' ತಾಂಡವ 'ಕ್ಕೆ ಸಂಸ್ಕೃತದಲ್ಲಿ ಇಂದಿಗೂ ಸರಿಯಾದ ನಿರುಕ್ತಿ ಹೇಳುವುದಕ್ಕಾಗುವುದಿಲ್ಲ. ಸಂಸ್ಕೃತ ನಾಟಕದ ಉತ್ಪತ್ತಿ ಸಂಬಂಧದಲ್ಲಿ ಈ ದ್ರಾವಿಡ ಪ್ರಭಾವದ ಸಂಶೋ

---

19 ಮೈಸೂರಿನ ಆಳಿದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ಯಕ್ಷಗಾನ ಮಂಡಳಿಗೆ ಪ್ರೋತ್ಸಾಹ ಕೊಡುತ್ತಿದ್ದರೆಂದು ತಿಳಿಯುತ್ತದೆ ಒಂದು ಆಧಾರವೂ ಸಿಗುತ್ತದೆ— ' ಸಮರ್ಪಕ್ಕೆ,' ಗ್ರಂಥದಲ್ಲಿ ಶ್ರೀ. ಕೆ. ಪಿ. ವೆಂಕಪ್ಪಶೆಟ್ಟಿಯವರ ' ಯಕ್ಷಗಾನ ಕಲೆ ' ಲೇಖನ ನೋಡಿ.

ಧನೆ ಅಗತ್ಯ ಎಂಬ ಅಭಿಪ್ರಾಯವೂ ಇದೆ. 20 ಈ ಊಹೆಯ ಪ್ರಕಾರ ಯಕ್ಷಗಾನಗಳ ಉಗಮ ಕ್ರಿ. ಪೂ. ಕ್ಕೂ ಹೋಗಬಹುದು.

ಸಂಸ್ಕೃತನಾಟಕಗಳು ಅವನತಿಗಿಳಿದು ಚರ್ವಿತಚರ್ವಣಪಥವನ್ನು ಹಿಡಿದಾಗ, ಭತ್ತದ ಬೆಲೆ ಹೆಚ್ಚಾದಾಗ ಗದ್ದೆಮಾಡುವಂತೆ–ಯಕ್ಷಗಾನಗಳು ಹೆಚ್ಚು ಪ್ರಚಾರವಾಗಿರಬೇಕು, ಎಂದರೆ ಸುಮಾರು ಕ್ರಿ. ಶ. ೮ ನೆಯ ಶತಮಾನದಲ್ಲಿ. ಏಕೆಂದರೆ ಸಂಸ್ಕೃತ ನಾಟಕ ಸಾಹಿತ್ಯದ ಮಹಾನಾಟಕ ಅಥವಾ ಹನುಮಾನ್ನಾಟಕ ಎಂಬುದು ಯಕ್ಷನಾಟಕ ಸಂಪ್ರದಾಯದಲ್ಲಿದೆ. ಇದು ೧೧ ನೆಯ ಶತಮಾನಕ್ಕಿಂತ ಹಿಂದಿನದು. ಇದರ ಪ್ರಭಾವ ಕನ್ನಡ ಯಕ್ಷಗಾನದ ಮೇಲೆ ಆಗಿದ್ದಿರಬಹುದು. ರಗಳೆ ಇತ್ಯಾದಿ ಛಂದಸ್ಸು ಕನ್ನಡದಲ್ಲಿ ೧೦ ನೆಯ ಶತಮಾನದಲ್ಲಿತ್ತು. 21

ಯಕ್ಷನಾಟಕಗಳು ಸುಮಾರು ಕ್ರಿ. ಶ. ೪-೫ ನೆಯ ಶತಮಾನಗಳಿಂದಲೂ ನಮ್ಮ ನಾಡಿನಲ್ಲಿ ಪ್ರಚಾರದಲ್ಲಿವೆ ಎಂದು ಶ್ರೀ. ಮಂ. ಗೋವಿಂದ ಪೈ ಅವರು ಹೇಳುತ್ತಾರೆ. 22

ಮೇಲೆ ಸೂಚಿಸಿರುವ ಅಭಿಪ್ರಾಯಗಳಿಂದ ಯಕ್ಷಗಾನವು ಪ್ರಾಚೀನವೆಂದು ಹೇಳಿದಂತಾಯಿತು. ಕನ್ನಡ ಸಾಹಿತ್ಯದ ಪ್ರಾರಂಭಕಾಲವನ್ನು ಹೇಳುವಾಗಲೂ ಈ ಸಮಸ್ಯೆ ಇದೆ. ಗ್ರಂಥ ೯-೧೦ ನೆಯ ಶತಮಾನಗಳಿಂದ ದೊರೆತಿರುವುದಾದರೂ, ಅದಕ್ಕಿಂತ ಹಿಂದೆ ಕನ್ನಡ ಸಾಹಿತ್ಯ ಇತ್ತು- ಕೃತಿಗಳೂ ಇದ್ದಿರಬೇಕು. ಸಿಕ್ಕಿಲ್ಲ ಎಂಬ ಅಭಿಪ್ರಾಯವಿದೆ. ದೊರೆತಿರುವ ಆಧಾರದಿಂದ ಹೇಳುವುದಾದರೆ ೯-೧೦ ನೆಯ ಶತಮಾನದಿಂದಲೇ ಕನ್ನಡ ಸಾಹಿತ್ಯ ಇದೆ ಎಂದು ಹೇಳಬೇಕಾಗುತ್ತದೆ. ಇದೇ ಸಮಸ್ಯೆ ಕನ್ನಡದ ಯಕ್ಷಗಾನಗಳಿಗೂ ಅನ್ವಯಿಸುತ್ತದೆ. ಇದು ಜಾನಪದ ಕಲೆ. ಈಗ ದೊರೆತಿರುವುದರ ಆಧಾರದಿಂದ ಯಕ್ಷ

---

20 ಶ್ರೀ. ಆರ್. ಕೃಷ್ಣಶಾಸ್ತ್ರಿಗಳ ' ಸಂಸ್ಕೃತ ನಾಟಕ ' ನೋಡಿ.

21 ಶ್ರೀ. ರಾಮಚಂದ್ರ ಭಟ್ಟ ಹಾಸಣಗಿಯವರ ' ಯಕ್ಷನಾಟಕಗಳು ' ನೋಡಿ.

22 ಸಂಯುಕ್ತಕರ್ಣಾಟಕ ಪತ್ರಿಕೆಯಲ್ಲಿ, ಅವರ ಭಾಷಣದ ವರದಿಯಿಂದ— Feb 1953

ಗಾನ ಹುಟ್ಟಿದ್ದು ಸುಮಾರು ೧೫-೧೬ ನೆಯ ಶತಮಾನವೆಂದೇ ಹೇಳಬೇಕಾಗುತ್ತದೆ.

ಈ ಎಲ್ಲ ಹೇಳಿಕೆಗಳಿಂದ ಯಕ್ಷಗಾನವು ತುಂಬ ಪ್ರಾಚೀನವೆಂಬ ಅಭಿಪ್ರಾಯ ಬಂದರೂ ನಮಗೆ ಗ್ರಂಥಗಳು ಸಿಕ್ಕಿರುವುದು ಬಹಳ ಹಿಂದಿನಿಂದಲ್ಲ. ಇವುಗಳಿಂದ ಇಷ್ಟವನ್ನು ಗ್ರಹಿಸಬಹುದು. ದೇಸಿಯಾಗಿದ್ದು ಸಂಸ್ಕೃತದ ಪ್ರಭಾವದಿಂದ ಬೆಳೆಯಿತು, ಬಹುಮಟ್ಟಿಗೆ 'ನಾಟಕ'ವನ್ನು ಅನುಸರಿಸುತ್ತದೆ. ಹೆಚ್ಚು ಹಳ್ಳಿಗಳಲ್ಲೇ ರೂಢಿ.

ಇಂದಿನ ಯಕ್ಷಗಾನಗಳ ಸಂಖ್ಯೆಯನ್ನು ಗಮನಿಸಿದರೆ ಅದು ತುಂಬ ಹಿಂದಿನಿಂದ ಹುಟ್ಟಿಬಂದು ಬೆಳೆದಿರಬೇಕೆಂದೂ ಒಪ್ಪುವಹಾಗಾಗುತ್ತದೆ. ಅಸಂಖ್ಯಾತ ಯಕ್ಷಗಾನಗಳಿವೆ. ಅನೇಕ ಪ್ರಭೇದಗಳಿವೆ. ಅನೇಕವು ಬರಿವಣಿಗೆಯಲ್ಲೂ ಪುಸ್ತಕರೂಪದಲ್ಲೂ ಇರುವುವಲ್ಲದೆ ಹಲವರ ಬಾಯಿಯಲ್ಲೂ ಇವೆ. ಪರಂಪರೆಯಾಗಿ ಒಬ್ಬರ ಬಾಯಿಂದ ಮತ್ತೊಬ್ಬರಿಗೆ ಹೋಗುವ, ಉಳಿದಿರುವ ಸಂಪ್ರದಾಯ ಉದಾಹರಣೆಗಳೂ ಉಂಟು. ಆದರೂ ೧೬ ನೆಯ ಶತಮಾನಕ್ಕಿಂತ ಹಿಂದಿನದು ಸಿಕ್ಕಬೇಕಾಗಿದೆ. ಇದೇ ಒಂದು ಸಮಸ್ಯೆ.

ದೊರೆತಿರುವ ಯಕ್ಷಗಾನ ಕೃತಿಗಳಿಂದ, ಅವುಗಳ ಪರಿಶೀಲನೆ, ವಿಮರ್ಶೆಗಳಿಂದ ಈ ಅಂಶಗಳನ್ನು ಗಮನಿಸಬಹುದಾಗಿದೆ.

Mystery play ಎಂಬುದು ಗ್ರೀಸಿನಲ್ಲೂ, Miracle play ಎಂಬುದು Great Britain ನಲ್ಲೂ ಒಂದು ಕಾಲದಲ್ಲಿ ವಿಶೇಷ ಪ್ರಚಾರದಲ್ಲಿದ್ದುವು— ಇವು ಗ್ರೀಕರ ದುರಂತ ನಾಟಕಗಳ ಅಪಭ್ರಂಶ. ಮೊದಲು ಅಲ್ಲಿ ಪೇಗನ್ನರ ಕತೆಗಳಿದ್ದು Roman Catholic ಕ್ರೈಸ್ತರು ಇವುಗಳಿಂದ ತಮಗೆ ಬೇಕಾದಂತೆ ಸಾಧುಸಂತರ ಕತೆಗಳನ್ನು ಕಟ್ಟಿ Mystery play ಮಾಡಿದರು. ಸೈತಾನನು ಪ್ರಮುಖನಾದನು. (ನಮ್ಮ ಪ್ರತಿನಾಯಕ, ಹನುಮನಾಯಕ, ಕೋಡಂಗಿ, ನಕಲಿ, ಮಾಧವಿಗಳು ಇದನ್ನು ಸ್ವಲ್ಪ ಮಟ್ಟಿಗೆ ಹೋಲುತ್ತವೆ) ಯೂರಿಪಿಡಸ್‌ನ ದುರಂತ ನಾಟಕಗಳಲ್ಲಿ Chorus— ಮೇಳಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಇದರೊಂದಿಗೆ ಯಕ್ಷಗಾನದ ಕೆಲವು ಲಕ್ಷಣಗಳನ್ನು ಹೋಲಿಸಬಹುದು. ದುರಂತನಾಟಕದ ಮೂಲ ಅಟ್ಟದ ಆಟ, ಮೇಕೆ ಆಟ ಇತ್ಯಾದಿ. ಅವುಗಳ ವಿಕಾಸನ ಕ್ರಮವೂ ಬೇರೆಯೇ.

ಜನರಿಗೆ ಅವರ ಆಹಾರ– ಬದುಕಿಗೆ ಹೇಗೆ ಪ್ರಾಮುಖ್ಯವೋ ಹಾಗೆಯೇ ಆಟ, ಸಂತೋಷಕೂಟ, ವಿರಾಮಕಾಲದಲ್ಲಿ ಅವರಿಗೆ ಮುಖ್ಯ. ಸಾಮಾನ್ಯ ಜನಕ್ಕೆ ಸರಿಹೊಂದುವಂತೆ ಯಾವುದೋ ಒಂದು ರೀತಿಯ ಆಟವಿದ್ದೇ ಇದ್ದಿರಬೇಕು. ಇದು ಪ್ರಪಂಚದ ಎಲ್ಲ ಜನಾಂಗಗಳಲ್ಲಿಯೂ ಕಾಣುತ್ತದೆ. ಯಕ್ಷಗಾನ ಹುಟ್ಟಿದಾಗ ಜನರಲ್ಲಿ ಒಂದು ಅಭಿರುಚಿ ಯಾವುದೋ ಒಂದು ರೂಪದಲ್ಲಿದ್ದಿರಬೇಕು. ಇತಿಹಾಸ ದಿಗಂತದ ಮಹಾಮುಸುಕಿನಲ್ಲಿ ಅದರ ಸ್ವರೂಪ ನಮಗೆ ತಿಳಿದುಬಂದಿಲ್ಲ. ಕನ್ನಡ ಸಾಹಿತ್ಯದಿಂದ ಒಂದೆರಡು ವಿಷಯಗಳು ತಿಳಿದು ಬರುತ್ತವೆ.

ಹಂಪೆಯ ಹರಿಹರ ಕವಿ ತನ್ನ ಗಿರಿಜಾ ಕಲ್ಯಾಣದಲ್ಲಿ (೧೩ ನೆಯ ಶತಮಾನ.)

> ಗೌರೀವರ ಕರ್ಣಾಟಾಲಂ
> ಕಾರಂ ರಸ ಪೂರಮತಿ ಗಂಭೀರಂ ಕಾವ್ಯಂ
> ನೀರಸರರಿವಂತೇನಿದು
> ತಾರೆಲೆಯೋ ಬೀದಿವಾಡೇ ನೆರವಿಯ ತುಮುಕೇ ಎಂದೂ

ಸುಮಾರು ಹದಿನಾಲ್ಕನೆಯ ಶತಮಾನದಲ್ಲಿದ್ದ ಮಧುರಕವಿ.

> ಪಂಡಿತರುಂ ವಿವಿಧಕಳಾ
> ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
> ಕಂಡರ್ ಕೇಳ್ವೊಡೆ ಗೊರವರ
> ದುಂಡುಪಿಯೆ ಬೀದಿವಟಿವ ಬೀರನಕತೆಯೇ ? ಎಂದೂ

ಕೇಳಿದ್ದಾರೆ. ಎಂದರೆ ಇವು ಆಗಿನ ಕಾಲದಲ್ಲಿದ್ದುವು ಎಂದಂತಾಯಿತು. ತಾರೆಲೆ, ಬೀದಿವಾಡು, ನೆರವಿಯ ತುಮುಕು, ಗೊರವರ ದುಂಡುಪಿ, ಬೀದಿವಟಿವ ಬೀರನ ಕತೆ ಇವೆಲ್ಲಾ ಏನು ? ಇವುಗಳ ಸ್ವರೂಪ ಯಾವ ರೀತಿ ಇದ್ದುವು ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಕ್ಕುವುದಿಲ್ಲ. ಇವುಗಳಿಗೂ ಯಕ್ಷಗಾನಗಳಿಗೂ ಏನಾದರೂ ಸಂಬಂಧವಿದೆಯೆ ? ಸಂಬಂಧವನ್ನು ಕಲ್ಪಿಸಬಹುದೆ ?

ಅಂತು ಇಂದಿನ–ದೊರೆತಿರುವ–ಕೃತಿಗಳ ಅವಲೋಕನದಿಂದ ಯಕ್ಷಗಾನ ಉತ್ತಮ ಸಾಹಿತ್ಯ ಕೃತಿಯ ಅಪಭ್ರಂಶವೇ ಹೊರತು, ಯಕ್ಷಗಾನದಿಂದ

ಉತ್ತಮ ಕೃತಿಯಾಗಲೀ, ನಾಟಕವಾಗಲೀ ಹುಟ್ಟಿತು ಎಂದು ಹೇಳುವುದು ಕಷ್ಟ. ಯಕ್ಷಗಾನದ ಜನನ-ಉಗಮವನ್ನು ಹೀಗೆ ಹೇಳಬಹುದೆಂದು ತೋರುತ್ತದೆ. ಪಂಡಿತರಿಗೆ ಮಾತ್ರ ದೊರೆಯುತ್ತಿದ್ದ ಸಾಹಿತ್ಯ ಸೊತ್ತನ್ನು ಪಾಮರ ಜನಕ್ಕೂ-ಎಂದರೆ ಅವಿದ್ಯಾವಂತರೂ, ಹಳ್ಳಿಯವರು ಕಾರಣಾಂತರದಿಂದ ವಿದ್ಯೆ ಜ್ಞಾನ ಪಡೆಯುವ ಅವಕಾಶ ಅದೃಷ್ಟವಿಲ್ಲದ ನಮ್ಮ ಬಂಧುಗಳು, ಸೋದರರು ಎಂದು ಮಾತು ಅರ್ಥ- ಒದಗಿಸಿಕೊಡುವ ಒಂದು ಯೋಜನೆ ಯಕ್ಷಗಾನವೆನ್ನಬಹುದೆ ? 23 ಕಥಾವಸ್ತು ಅದನ್ನೇ ಇಟ್ಟುಕೊಂಡು ಅಭಿರುಚಿ, ಅಭಿನಯ, ವೇಷ, ಭಾಷೆ, ಎಲ್ಲ 'ಪಾಮರರಿಗೆ' ಹಿಡಿವಂತೆ ಮಾರ್ಪಾಡು ಮಾಡಿರುವುದನ್ನು ಕಾಣಬಹುದು. ಇದೂ ಒಂದು ಊಹೆ ಮಾತ್ರ. ಮೂಲವಂತೂ ನಿರ್ದಿಷ್ಟವಾಗಿ ಸಿಕ್ಕಿಲ್ಲ.

ಹದಿನೈದನೆಯ ಶತಮಾನದ ಹೊತ್ತಿಗೆ ಕನ್ನಡದಲ್ಲಿ ಒಳ್ಳೆಯ ಸಾಹಿತ್ಯ ಸಿದ್ಧವಾಗಿತ್ತು. ಒಂದು ದೃಷ್ಟಿಯಿಂದ ಉತ್ತಮ ಸಾಹಿತ್ಯದ ಕಾಲವೂ ಮುಗಿದಿತ್ತು ಎನ್ನಬಹುದು. ಪಂಪ, ರನ್ನ, ಜನ್ನ, ಕುಮಾರವ್ಯಾಸ, ಹರಿಹರ, ರಾಘವಾಂಕ ಇತ್ಯಾದಿ ಮಹಾಕವಿಗಳು ಆಗಲೇ ಆಗಿ ಹೋಗಿದ್ದರು. ಕಥೆ, ವಸ್ತು, ವಿಷಯ, ತತ್ತ್ವ, ನೀತಿ ತಿಳಿಯಬೇಕೆಂಬ ಪಿಪಾಸೆ ಜನಕ್ಕೆ ಬಂದಿತ್ತು. ಇದರ ಮಾರ್ಪಾಡೇ ಯಕ್ಷಗಾನವೆನ್ನಬಹುದೆ ?

ಕನ್ನಡ ಸಾಹಿತ್ಯದಲ್ಲಿ ಮೊದಲೇ ನಾಟಕಗಳು ಹುಟ್ಟಿದ್ದರೆ, ಯಕ್ಷಗಾನಗಳು ಈಗ ಬಂದಿರುವ ಸಂಖ್ಯೆಯಲ್ಲಿ ಬರುತ್ತಿದ್ದುವೊ ಇಲ್ಲವೊ ಹೇಳುವುದು ಕಷ್ಟ. ಶಿವಶರಣರ, ಹರಿದಾಸರ ಚಳುವಳಿಯಲ್ಲಿ ಸ್ವಲ್ಪ ಜನರ-ಪಂಡಿತರ-

---

23 " They (yaKshaganas) were intended to please the masses rather than the classes. There was crude honeur and meaningless alliteration in some cases. Some of the Yakshaganas and vidhinatakas do not rise to dignified heights - " South Indian Music ' (BOOK IV) By Shri. P S. Samba Murthy, Madras, Chapter V11- Musical form PP 130-131.

ವಸ್ತುಗಳೆಲ್ಲ ಬಹುಜನರ ಆಸ್ತಿಯಾಗಿ ಅವರಿಗೆ ನಿಲುಕುವಂತಾಯಿತು. ಅವು ನಮ್ಮ ನಾಡಿನಲ್ಲಿ ಸಂಧಿಕಾಲಗಳು. ಪಂಡಿತ ಸಾಮಗ್ರಿಯನ್ನು ಸಾಮರಾಜಿ ರುಚಿ ಹೇಗೆ ಹೀರಬೇಕು ? ಸಾಮಗ್ರಿ ಸಿದ್ಧವಾಗಿತ್ತು. ಬಹುಶಃ ಬೇರೆ ಕಡೆ ಯಿಂದ ನಾಟಕದ ವಿಧಾನವೂ ತಿಳಿದಿತ್ತು. ಅದು ಯಕ್ಷಗಾನದ ರೂಪವನ್ನು ತಾಳಿ ಬಂದಿತು. ಮೂಲರೂಪ ತಿಳಿಯದಿದ್ದರೂ, ಅಭಿರುಚಿ ತಿಳಿಯುತ್ತದೆ. ನಾಟಕದ ಸ್ಥಾನವನ್ನು 'ತಾರೆಲೆ' ಇತ್ಯಾದಿಗಳು ಅಲಂಕರಿಸಿ ಆಕ್ರಮಿಸಿ ಯಕ್ಷಗಾನವಾಯಿತು. ಎಂದರೆ ಪಂಡಿತ ಸಾಹಿತ್ಯದ, ಪುರಾಣಗಳ 'ಕ್ಷುಲ್ಲಕ' ಅವತಾರ ಇದು ಎಂದಂತಾಯಿತು. ದೊಡ್ಡ ದೊಡ್ಡ ವಿಷಯಗಳನ್ನು, ಗೂಢ ತತ್ತ್ವಗಳನ್ನು ಸುಲಭವಾಗಿ ಸಾಮಾನ್ಯರೂ ತಿಳಿಯುವ ಒಂದು ಸಾಧನ ಮಾರ್ಗ ಯಕ್ಷಗಾನವಾಯಿತು. ತಾರ್ಕಿಕ ದೃಷ್ಟಿಯಿಂದ ಯಕ್ಷಗಾನದ ಮೂಲವನ್ನು ಈ ರೀತಿ ಊಹಿಸಬಹುದೆಂದು ತೋರುತ್ತದೆ. ಇದರ ಪ್ರಕಾರ ಇದರ ಕಾಲ ಪ್ರಾಚೀನವಾಗಲು ಸಾಧ್ಯವಿಲ್ಲ. ಈಚಿನದೇ ಆಗುತ್ತದೆ. ನಾಲ್ಕು ಅಥವಾ ಐದು ಶತಮಾನಗಳ ಹಿಂದಿನದು ಎಂದು ಹೇಳಬೇಕಾಗುತ್ತದೆ.

ಭಾಷಾದೃಷ್ಟಿಯಿಂದ ವಿಚಾರ ಮಾಡಿದರೂ 'ಜತ್ತಾಣ' ದಿಂದ ಯಕ್ಷ ಗಾನವಾಯಿತು ಎಂಬ ವಾದಸರಣಿ ತುಂಬ ದೂರದ, ಸಾಹಸದ ಮಾತು ಎಂದೇ ಹೇಳಬೇಕಾಗಿದೆ. ಅಪೂರ್ಣಧ್ವನಿಸಾಮ್ಯ ಮಾತ್ರ ನಿಷ್ಪತ್ತಿಯನ್ನು ಸಾಧಿಸಲಾರದು.

ಯಕ್ಷಗಾನಕ್ಕೆ ಕಲಾಪ್ರೇರಣೆಗಿಂತ ದೈವಪ್ರೇರಣೆಯೇ ಹೆಚ್ಚು. 'ಕಲೆ ಗಾಗಿ ಕಲೆ'– 'Art for Art's sake'– ಎಂಬ ಗುರಿಯಿಂದ ಖಂಡಿತ ವಾಗಿಯೂ ಇದು ಹುಟ್ಟಿದ್ದಲ್ಲವೆನ್ನಬಹುದು. ನಿಜವಾದ ಕಲೆ ಎಂದೂ ಹಾಗೆ ಬಾರದೆಂದೇ ತೋರುತ್ತದೆ. ಪಾಪಭೀತಿ, ಪಾಪನಿವಾರಣೆ, ಪುಣ್ಯಸಂಪಾದನೆ ಗಳಿಗಾಗಿ ಯಕ್ಷಗಾನ ಆಡಿಸುವ ರೂಢಿ ಈಗಲೂ ಇದೆ. 24 ಇದರಲ್ಲಿ

---

24 'ಅಂಧಕಾಸುರನ ಎದೆಯಲ್ಲಿ ಹರ ನಾಟ್ಯವಾಡಿದಂತೆ'
'ಕಾಳಿಯ ಶಿರದಲ್ಲಿ ಹರಿ ನಾಟ್ಯವಾಡಿದಂತೆ'
'ನಾವು ಸಣ್ಣವರಾದರೂ ವಾಗ್ವೇದಿ ಸಣ್ಣವಳಲ್ಲ'
— ಸಭಾ ಲಕ್ಷಣ ಎಂಬ ಯಕ್ಷಗಾನ ಕೃತಿಯಿಂದ

ತೆಂಕಣ, ಬಡಗಣ, ಆಟ, ತಾಳಮದ್ದಳೆ ಇತ್ಯಾದಿ ಪ್ರಭೇದಗಳು ಕಾಲಕ್ರಮದಲ್ಲಿ ಕೆಲವು ಅಗತ್ಯಗಳನ್ನನುಸರಿಸಿ ರೂಢಿಗೆ ಬಂದಿರಬೇಕು. ಸಂಖ್ಯೆಯಲ್ಲಂತೂ ವಿಶೇಷವಾಗಿ ಬೆಳೆಯಿತು.

ಇತ್ತೀಚೆಗೆ ಹೊಸತನದ ಗಾಳಿ ಯಕ್ಷಗಾನಕ್ಕೂ ಬೀಸತೊಡಗಿದೆ. ಆದರೆ ಇದು ಪೂರ್ಣವಾಗಿ ಇನ್ನೂ ಬ್ಬಂದಿಲ್ಲ. ಕೆಲವು ವಿಷಯಗಳಲ್ಲಿ ಮಾತ್ರ ನವೀನ ಮಾರ್ಗವನ್ನು ಅನುಸರಿಸುವುದು ಶೋಚನೀಯ. ಮೂಲ ಯಕ್ಷಗಾನವನ್ನು ಹಾಗೆಯೇ ಉಳಿಸಿಕೊಂಡರೆ ಒಳ್ಳೆಯದೆಂದು ತೋರುತ್ತದೆ. ಅದರ ಬೆಲೆಯೂ ಆಗಲೇ ಇರುವುದು. ಈ ಪದ್ಧತಿ ಪರಂಪರೆಯಿಂದ ಬಂದ ದ. ಕನ್ನಡ ಜಿಲ್ಲೆಯಲ್ಲಿ ಈಗಲೂ ಹೆಚ್ಚು ಪ್ರಚಾರದಲ್ಲಿದೆ. 'ಯಕ್ಷಗಾನ'ವನ್ನು ಹೋಲುವ ಅಥವಾ ಅನೇಕ ಕಡೆ ಇದಕ್ಕೆ ಸಮನಾದ ಗ್ರಾಮಾಭಿರುಚಿ ಮತ್ತು ಸಂತೋಷ ಆಟಗಳು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಪ್ರಚಾರದಲ್ಲಿರುವುದನ್ನು ಕಾಣಬಹುದು. 25 ಮೂಲದಲ್ಲಿ ಮಲೆಯಾಳದ ಕಥಕ್ಕಳಿಯಂತೆ ಬರೀ ನಾಟ್ಯವಾಗಿದ್ದು, ಅನಂತರ ಹಾಡು, ತಾಳಲಯಬದ್ಧ ಸಂಗೀತ ಬಂದು ಆ ಮೇಲೆ ಗದ್ಯವೂ ಸೇರಿರಬೇಕು. ಈಗಂತೂ ಈ ಮೂರು ಇವೆ. ಯಕ್ಷಗಾನದಲ್ಲಿ ನಾವು ನೋಡುವ ನರ್ತನ ನಮ್ಮ ನಾಡಿನ ರತ್ನವೆನ್ನಬಹುದು. ಎಂತಹ ನಾಡಿಗಾದರೂ ಭೂಷಣ, ಹೆಮ್ಮೆ ತರುವ ಸೊಬಗು ಅದರಲ್ಲಿದೆ. ಒಟ್ಟಿನಲ್ಲಿ ನಾಟ್ಯಕ್ಕೇ ಇಲ್ಲಿ ಪ್ರಾಧಾನ್ಯ ಹೆಚ್ಚು. Yakshagana mainly in a mode of dance ಎಂದು ಹೇಳುವವರೂ ಇದ್ದಾರೆ.

ಪುರಾಣ ಕತೆಗಳೇ ಹೆಚ್ಚಾಗಿ ಮೊದಲು ಹುಟ್ಟಿದುವು ಎಂದು ಕಾಣುತ್ತದೆ. ಕಾಲಕ್ರಮದಲ್ಲಿ ನಾಡಿನ ವೀರರ ಚರಿತ್ರೆಗೆ ಸಂಬಂಧಿಸಿದ, ಸ್ಥಳ ಮಹಾತ್ಮೆಯ, ಸಾಮಾಜಿಕತೆಗಳೂ ಸ್ವಲ್ಪಮಟ್ಟಿಗೆ ಬಂದು ಸೇರಿವೆ. ಆದರೆ ಇವುಗಳ ಸಂಖ್ಯೆ ಕಡಮೆಯೇ. ಕರೀ ಬಂಟನ ಕತೆ, ಕುಮಾರ ರಾಮನ ಕತೆ,

---

25 ಡಾ. ಕೆ. ಶ್ರೀನಿವಾಸರಾಯರವರ (ಬಳ್ಳಾರಿ) 'The Dramatic History of the world' ಎಂಬ ಪುಸ್ತಕದಲ್ಲಿ ಪ್ರತಿಯೊಂದು ದೇಶದ ಈ ಪದ್ಧತಿಯ ಮನೋರಂಜನ ಕೃತಿ ಪ್ರದರ್ಶನಗಳ ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ

ಸುರಾಭಾಂಡೇಶ್ವರೋಪಾಖ್ಯಾನ, ಭಾಗಾನಗರದ ಕತೆ ಮೊಲಾದುವು ಪೌರಾಣಿಕವಲ್ಲದಾದುಕ್ಕೆ ಉದಾಹರಣೆಗಳು. ಒಟ್ಟಿನಲ್ಲಿ ಯಕ್ಷಗಾನಗಳೆಲ್ಲ– ಬಹುಮಟ್ಟಿಗೆ– ವೀರರಸಪ್ರಧಾನವಾದುವುಗಳೇ.

ಸುಧಾರಣೆ ಎಂಬ ಹೆಸರಿನಲ್ಲಿ ವಿಷಯ, ಕಲೆ ಹಾಳಾಗದಂತೆ ನೋಡಬೇಕಾದದ್ದು ಅಗತ್ಯ. ಇರುವ ಕಲೆಯಷ್ಟನ್ನು ಉಳಿಸಿಕೊಳ್ಳುವ ಮನೋಭಾವ ಇರಬೇಕಾಗಿದೆ. ಮೇಲ್ತರಗತಿಯ ಮೇಲಾಟದ ವಿಧಾನವನ್ನು ಯಕ್ಷಗಾನದವರು ಅರಿತು ಅಭ್ಯಾಸ ಮಾಡಿ ನಾಡಿನ ಕಲೆಯನ್ನು ಸಂಗೋಪನ ಮಾಡಿ ಮುಂದುವರಿಸಬೇಕಾಗಿದೆ.

ಈಗ ದೊರೆತಿರುವ ಸಾಮಗ್ರಿಯಿಂದ ಇಂದಿಗೆ ಯಕ್ಷಗಾನದ ಹುಟ್ಟು ಮತ್ತು ಬೆಳೆವಳಿಗೆಯನ್ನು ಕುರಿತು ಇಷ್ಟನ್ನು ಹೇಳಬಹುದಾಗಿದೆ.

(೬) ಯಕ್ಷಗಾನಗಳಲ್ಲಿರುವ ಛಂದಸ್ಸು.

ಭಾಷೆಗೆ ವ್ಯಾಕರಣದಂತೆ ಛಂದಸ್ಸೂ ಸಾಧಕವಾಗಿದೆ. ವ್ಯಾಕರಣ ಗದ್ಯ-ಪದ್ಯಗಳೆರಡಕ್ಕೂ ಸಂಬಂಧಿಸಿದ್ದಾದರೆ, ಛಂದಸ್ಸು ಪದ್ಯಕ್ಕೆ ಮಾತ್ರ ಸಂಬಂಧಿಸಿದ್ದು. ಪದ್ಯಗಳ ನಿಯಮವನ್ನು ಛಂದಸ್ ಶಾಸ್ತ್ರ ತಿಳಿಸುತ್ತದೆ. 'ಛದ್' ಎಂದರೆ ಕುಣಿ ಎಂದರ್ಥವಾಗುತ್ತದೆ. ಶಬ್ದಗಳ, ಅಕ್ಷರಗಳ ಬಗೆಬಗೆಯ ಕುಣಿತವೇ 'ಛಂದಸ್ಸು' ಎನಿಸುವುದು. ಛಂದಸ್ಸಿನ ಸಹಾಯದಿಂದ ಪದ್ಯಕ್ಕೂ ಕಾವ್ಯಕ್ಕೆ ಒಂದು ವಿಶೇಷ ಕಳೆ, ಸೊಬಗು, ಸೊಗಸು ಉಂಟಾಗುತ್ತದೆ. ಅಲ್ಲದೆ ಪದ್ಯಸಾಹಿತ್ಯವನ್ನು ಮರೆಯದಂತೆ ನೆನಪಿನಲ್ಲಿಟ್ಟುಕೊಳ್ಳಲೂ ಇದು ಸಹಾಯ ಮಾಡುತ್ತದೆ. ಒಟ್ಟಿನಲ್ಲಿ ಪದ್ಯ ಎಲ್ಲಿರುವುದೋ ಅಲ್ಲಿ ಛಂದಸ್ಸು; ಇದ್ದೇ ಇರುವುದು.

ಯಕ್ಷಗಾನಗಳಲ್ಲಿ ಕಂಡುಬರುವ ಛಂದಸ್ಸು, ಅದರ ವೈವಿಧ್ಯ, ಗಮನಾರ್ಹವಾದುದು. "Yakshagana is poetry written rather to suit an air rather than according to the strict rules of Projidy" - Mr. S.V. Brown "But such licence is not to take place in Canarese, as it includes all the metres, respectively more metres, that are fit for being chanted. Kandas, Ragales and Shatpadis....... e. g. Sita Kalyana yakshagana." ಎಂದು F. Kittel ಅವರು 'ನಾಗವರ್ಮನ ಛಂದಸ್ಸು' ಎಂಬ ಗ್ರಂಥದ ಪೀಠಿಕೆಯಲ್ಲಿ "An essay on Canarese Litreature" ಎಂಬ ಶಿರೋನಾಮೆಯಲ್ಲಿ ಬರೆಯುತ್ತಾರೆ.

ಹನ್ನೆರಡನೆಯ ಶತಮಾನದ ಹಿಂದಿನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಂಸ್ಕೃತದಿಂದ ತೆಗೆದುಕೊಂಡ ಛಂದಸ್ಸಿನ ಪ್ರಭಾವವೇ ಹೆಚ್ಚು. ಕವಿಗಳಿಗೆ ಆ ಕಡೆಗೇ ಹೆಚ್ಚು ಒಲವಿರುವುದು ಕಂಡುಬರುತ್ತದೆ. ಅಲ್ಲಲ್ಲೇ ಕೆಲವು ಕಡೆ ಶುದ್ಧ ಕನ್ನಡ ಛಂದಸ್ಸಿನ ಪ್ರಯೋಗವೂ ಸ್ವಲ್ಪ ಮಾತ್ರ ಇರುತ್ತದೆ. ಹರಿಹರ, ರಾಘವಾಂಕ ಮತ್ತು ಶಿವಶರಣರ ಕೃತಿಗಳಿಂದಲೇ ದೇಶೀ ಛಂದಸ್ಸಿನ ಉಪಯೋಗ ಹೆಚ್ಚಾಗಿ ಪ್ರಯೋಗವಾದದ್ದು ನಮ್ಮ ಸಾಹಿತ್ಯದಲ್ಲಿ ಎಂದು ಹೇಳಬಹುದು.

ಯಕ್ಷಗಾನಗಳಲ್ಲಿ ಹಲವು ಛಂದಸ್ಸುಗಳ ಪ್ರಯೋಗವಾಗಿರುವುದನ್ನು ಗಮನಿಸಬಹುದು. ಅವುಗಳಲ್ಲಿಯೂ ಹೆಚ್ಚಾಗಿ ನಮ್ಮ ದೇಶೀ–ದ್ರಾವಿಡ ಮೂಲದ ಛಂದಸ್ಸೇ ಇರುವವು. ಸಂಸ್ಕೃತದಿಂದ ಬಂದ ಕಂದ ವೃತ್ತಗಳು ವಿಶೇಷವಾಗಿಲ್ಲ. 1

ಯಕ್ಷಗಾನಗಳಲ್ಲಿ ಪ್ರಯೋಗವಾಗಿರುವ ಛಂದಸ್ಸುಗಳನ್ನು ಒಂದೊಂದು ಉದಾಹರಣೆಯ ಮೂಲಕ ಇಲ್ಲಿ ನೋಡಬಹುದು.

1) **ಕಟಕ** (ಪುಟ ೨)

ಶ್ರೀನಿವಾಸನೆ ಭಕ್ತರ ಬಂಧು | ನಂಬಿದೆ ರಕ್ಷಿಸುಯೆಂದು ಶ್ರೀನಿವಾಸ || ಪ ||
ಮಾನಿನಿ ದ್ರೌಪದಿ ಮಾನವ ಕಾಯ್ದನೆ| ಹೀನರ ಮನಗರ್ವವ ನೆಲ್ಲಿಳಿಸಿದನೆ |
ಸಾನುರಾಗದಿ ಪ್ರಹ್ಲಾದನ ಕಾಯ್ದನೆ| ಧ್ಯಾನಿಸಿದಾ ಗಜ | ರಾಜನ ಪೊರೆದನೆ|
ಮುಂನಿಶಿ ಮಕರಿಗೆ ಮುಕ್ತಿಯನಿತ್ತನೆ....

2) **ಕಂದ** (ಪುಟ ೩.)

ಶೇಷ ಗಿರೀಶನೆ ನಿಂನಯ |
ವಾಸಿಯ ಪೊಗಳುವುದಕಾದಿಶೇಷನಿಗೊಳವೆ ||
ದಾಸಳ ಪೋಷಿಸಿ ಶ್ರೀಶನೆ |
ಕೂಸಿನ ನೀನಿತ್ತು ಕಾಯೊ ಪೆಂಗಳ ಪ್ರೇಮ ||

3) **ಲಾವಣಿ** (ಪುಟ ೩)

ಸತಿ ಪತಿ ಮಾಡಿದ ಕ್ಷಿತಿಯೊಳ್ ಹರಕೆಯ | ರತಿ ಪತಿ ಪಿತನಂ ಸ್ತುತಿಸುತಲಿ |
ಸುತನ ನೀ ನಿತ್ತರೆ ಸುರ ಮುನಿಪ್ರಿಯಗೆ | ಪ್ರಥುಮೆಯ ಮಾಳ್ಪೆ ಸುವರ್ಣದಲಿ ||
ಅತ್ತೆಯು ಮಾಡಿದಳತಿ ವೇಗದಲಿ | ಇತ್ತರೆ ಕೂಸನು ಸೊಸೆಗೆನುತ |
ಚಿತ್ತಜ ಪಿತನಿಗೆ ಭಂಗಾರದ ತೊಟ್ಲಿಟ್ಟು ಬರುವೆ ತಾನೆಂ-ದೆನುತ ||

---

1 ಯಕ್ಷಗಾನಗಳ ಕಾಲ ನಿಷ್ಕರ್ಷೆ ಮಾಡುವಾಗ ಇದರಿಂದಲೂ ಸಹಾಯವಾಗಬಹುದು

4) ಯಾಲಪದ (ಪುಟ ೫)

ಪನ್ನೆರಡನೇ ದಿನವು ಭೂಸುರರೆಲ್ಲರ ಕರಸಿ ||
ಧನ್ಯಳು ಪಡೆದ ಕೂಸಿಗೆ ನಾಮಕರಣವ ಘನವಾಗಿ
ಮಾಡಿಸಿದರು ||
ತುಪ್ಪಭಕ್ಷ್ಯಂಗಳುಂಡು ವಿಪ್ರರು ಸಂಭ್ರಮಗೊಂಡು |
ತಪ್ಪದೆ ತಾಂಬೂಲ ತಕ್ಕೊಂಡು ದೇಶಾವರ ಸಹಿತ ವಪ್ಪದಿಂದ
ಮನೆಗೆ ನಡೆದರು ||

5) ದ್ವಿಪದಿ (ಪುಟ ೬)

ಕನಕ ನವರತ್ನಮಯ ಪಾದವಸ್ತ್ರಪಟ್ಟ | ಮನಕೆ ಬೇಕಾದಷ್ಟು
ಮಗನಿಗೆಯುಟ್ಟು |
ದಿನದಿನಕೆ ಕೂಸುಮಾಡುವ ಚರ್ಯವಷ್ಟು |
ಮನೆಯರೆಲ್ಲರುನೋಡಿ ಸಂತೋಷಪಟ್ಟು || 2

6) ವಾರ್ಧಕ ಷಟ್ಪದಿ (ಪುಟ ೧೪)

ಅಭಿಮನ್ಯು ಬಿಟ್ಟ ಪ್ರತಿಕೂಲ ಶರ ಕಾಲ ಮಂರಿ |
ಪ್ರಭಟನ ಶಸ್ತ್ರಾಸ್ತ್ರದಿಂದ ತಡೆಗಡಿದೆಸೆದು ಬಡಿದು |
ಸುಭಟನ ಕರಿ ರಥ ತುರಂಗ ಕಾಲಾಳ್ಗಳಂ ಸವರಿ ಬಲು
ಸೈನಿಕರನೂ ||
ರಭಸದಿಂದೆದ್ದಾಗ ಕೊಚ್ಚಿದವು ಮುಚ್ಚಿದವು |
ಅಭಿನವೋದ್ಭಾಸದಿಂ ಚೀರಿದವು ಬೀರಿದವು |
ನಭಕಡರುವಂದದಿ ವರೂಥಗಳ ಯೂಥಗಳ ನಾಶ್ಚರಿಯ-
ನೇನೆಂಬೆನೂ ||

7) ಭಾಮಿನೀ ಷಟ್ಪದಿ (ಪುಟ ೧೪)

ರಾಯ ಕೇಳಭಿಮನ್ಯು ಬಾಣನಿ |
ಕಾಯವನು ಸದೆಬಡಿದು ಬ್ರಹ್ಮಾಸ್ತ್ರ |
ಸಾಯಕವ ಬಿಡಲದನು ಖಂಡಿಸಿ ಪಾರ್ಥಸುತನೆಂದಾ ||
ತಾಯಿಗವಮಾನವನು ಮಾಡಿದ |
ನಾಯಿ ನಿನ್ನನು ಕೊಲ್ವೆನೆಂದರೆ |
ವಾಯುಪುತ್ರನ ಭಾಷೆಗಂಜುವೆನೆಂದ ನಭಿಮನ್ಯು || 3

2 ವೆಂಕಟೇಶ ಮಹಾತ್ಮೆಯೆಂಬ “ಭಾಗವತರ ಚರಿತೆ” — ಯಕ್ಷಗಾನ ಗ್ರಂಥದಿಂದ

3 ‘ಅಭಿಮನ್ಯು ಕಾಳಗ’ ಯಕ್ಷಗಾನ ಕೃತಿಯಿಂದ.

8) ಸಾಂಗತ್ಯ (ಪುಟ ೧೯) ಹಲವು ಗಜಪೊಂದಾಗಿ ಸಿಹ್ಮದಮರಿಯನು |
ಕೊಲಿಸಿದಂತಾಯಿತೆಂದಿಂದಾ ||
ಕಳುಹಿದ ದಾಪ್ತ ಸ್ತ್ರೀಯರತಿಬೇಗದಿ |
ಹೊಳವ ನೀರನ ಕರತರಲು ||

9) ಗೀತಿಕೆ (ಪುಟ ೧೪) ಮಾನಹರನೆತ್ತಿ ಕರನನು ಮಾನವರಿಗೆ | ಪೋಗದಿರಿ
ಪಾಪಕೃತ್ಯಕೆ ಪೋಗದಿರಿಯೋ |
ಎಂದು ಸಾರುವನೋ ಯೆಂಬ ಛಂದದಿಂದ | ಜೆಳೆದವನ
ಬಾಳೆಸುಳಿಗಳು ಬಳುಕುತಿಹವು ||

10) ಸೀಸಪದ್ಯ (ಪುಟ ೨೦) ಕಸ್ತೂರಿ ಪನ್ನೀರ ಕರ್ಪೂರ ಕುಂಕುಮ ಜವಾದಿಗಳ
ಮಾರ್ವಜಾತಿಯುವರು |
ಕಂಚುಗಾರ ಪ್ರೌಢ | ಕಂಸಾರ ಚಿನಿವರರ್ ಗುಜರಾತಿ
ದೇವಾಂಗ ಕುಲಗಳವರು | ಮಾಲೆಗಾರರ್ಮತ್ತೆ ಮೇಲಾದ
ಚಿಪ್ಪಿಗರ್ ಜೀವ ಚಾರ್ವಕ ಬುದ್ಧ ಚಿಟಕಿನವರು ||

11) ಆರ್ಯ (ಪುಟ ೨೩) ಆತನ ಕುಲಸತಿ ಪಾತಿವ್ರತೆ ರೂಪಾತಿಶಯಳು
ಸುಗುಣಾನ್ವಿತಳು | ನೀತಿಪರಳು
ರತಿ ಚಾತುರಿಬಲ್ಲಳು | ಭೂತಲದೊಳು ರತಿಹೋಲುವಳು |
ಆತನ ಕುಲಸತಿ || 4

12) ಚೂರ್ಣಿಕೆ (ಪುಟ ೮೨) ಶ್ರೀ ಮದಖಿಲ ಭುವನ ಪರಿಶೋಧಿತ ರಜಿತ ಧರಣೀಧರ
ಶಿಖರಾಗ್ರ ವಿರಾಜಿತ
ಭವ್ರ ಕೈಲಾಸಪುರವರಾಧೀಶ ನಿಜ ಪದಾಂಬುಜ ಭಜನಾ
ಸಕ್ತ ಭಕ್ತ ಜನ
ಭವ ಭಯವ ತಿಮಿರ ಸಮುದಯ ವಿನಾಶ ದಿನೇಶ
ಅಮರಗರುಡ

4 ಸುರಾಭಾಂಡೇಶ್ವರ ಪ್ರಾಖ್ಯಾನದಿಂದ.

ಗಾಂಧರ್ವ ಕಿನ್ನರ ಕಿಂಪುರುಷ ಯಕ್ಷ ರಾಕ್ಷಸ ಪನ್ನಗ
ಸಿದ್ಧಚಾರಣ
ಸಂಸ್ತುತ ಪರಮೋನ್ನತ ಮಹೋನ್ನಾತ ಮಹಿಮುನ್ನತ....

ಇವಲ್ಲದೆ ಅಕ್ಕರ, ಚೌಪದಿ, ತ್ರಿಪದಿ, ರಗಳೆ, ತ್ರಿವುಡೆ, ತ್ಯಾಗಮಾನ ಮೊದಲಾದುವೂ ಇವೆ.

ಹೀಗೆ ಯಕ್ಷಗಾನಗಳಲ್ಲಿ ಛಂದಸ್ಸಿನ ಬಗೆಬಗೆಯ ಕುಣಿತವನ್ನೂ, ವೈವಿಧ್ಯವನ್ನೂ ಕಾಣಬಹುದು. ಛಂದಸ್ಸಿನ ವೈವಿಧ್ಯ ಇಲ್ಲಿಯ ವಿಶೇಷ. ವೃತ್ತ ಕಂದಗಳು ಬಹಳ ಕಡಮೆ. ದ್ರಾವಿಡ, ದೇಶೀ ಛಂದಸ್ಸುಗಳೇ ಹೆಚ್ಚು. ಒಟ್ಟಿನಲ್ಲಿ ಹಾಡುವ ಧಾಟಿಯ ಛಂದಸ್ಸನ್ನೇ ಹೆಚ್ಚಾಗಿ ಉಪಯೋಗಿಸಿಕೊಂಡಿರುವುದು ಕಾಣಬರುತ್ತದೆ. ಗದ್ಯ ಬಹಳ ಕಡಮೆ. ಕೆಲವು ಕಡೆ ಪದ್ಯಗಳು ಛಂದಸ್ಸಿನ ದೃಷ್ಟಿಯಿಂದ ದೋಷಯುಕ್ತವೂ ಆಗಿರುತ್ತವೆ. ಕೆಲವು ಕಡೆ ಈವರೆಗೂ ಹೆಚ್ಚಾಗಿ ಪರಿಚಯ, ಪ್ರಚಾರದಲ್ಲಿಲ್ಲದ ಒಂದೊಂದು ಬಗೆಯೂ ಕಂಡುಬರುತ್ತದೆ. 4 ಇದರ ಸಂಶೋಧನೆ ಅಗತ್ಯವಾಗಿದೆ.

ಯಕ್ಷಗಾನಗಳಲ್ಲಿ ಬಳಸಿರುವ ಕಂದಗಳಲ್ಲಿ ಅನೇಕಕಡೆ ಎರಡು ಮತ್ತು ನಾಲ್ಕನೇ ಪಾದಗಳ ಕೊನೆಯಲ್ಲೂ ಹ್ರಸ್ವವೇ ಬರುತ್ತದೆ, ದೀರ್ಘಕ್ಕೆ ಪ್ರತಿಯಾಗಿ ವಚನ ಎಂದು ಹೇಳಿದ್ದರೂ ಅನೇಕ ವೇಳೆ ತಾಳಲಯ ಬದ್ಧವಾಗಿಯೇ ಇರುವುದೂ ಉಂಟು. ಬೊಮ್ಮಣ್ಣಕವಿಯ 'ಆದಿಪುರಾಣ' ಯಕ್ಷಗಾನ ಕೃತಿಯಲ್ಲಿ 5 ಅನೇಕ ವೃತ್ತಗಳೂ ಕಂದಗಳೂ ಶಿಥಿಲವಾಗಿವೆ. ವೃತ್ತಗಳ ಕೊನೆಯಲ್ಲೂ ಲಘುಬರುತ್ತದೆ. ಹೊಸಗನ್ನಡಕ್ಕೆ ಇವು (ವೃತ್ತಕಂದಗಳು) ಹೊಂದುವುದಿಲ್ಲ ಎಂಬುದಕ್ಕೆ ಇದೂ ಉದಾಹರಣೆ ಎಂದಿಟ್ಟುಕೊಳ್ಳಲೂಬಹುದು. ಯಕ್ಷಗಾನಗಳಲ್ಲಿ ಅನೇಕ ಕಡೆಗಳಲ್ಲಿ ಛಂದಸ್ಸಿನ ಹೆಸರನ್ನು ಸೂಚಿಸಿದ್ದರೂ, ಪರಿಶೀಲಿಸಿದಲ್ಲಿ ಅಲ್ಲಿ ಹೇಳಿರುವ ಛಂದಸ್ಸು ಅದಾಗಿರುವುದಿಲ್ಲ. ಇದಕ್ಕೆ ಬಹುಮಟ್ಟಿಗೆ ಹೇಳುವವರ–ಮುದ್ರಿಸುವವರ ಅಜ್ಞಾನವೂ ಕಾರಣವಾಗಿಬಹುದು. ಪರಿಷ್ಕೃತ

---

4 'ಕರಿಬಂಟನ ಕತೆ' ಯಕ್ಷಗಾಯನದಲ್ಲಿ ನಾಲ್ಕು ಮಾತ್ರೆಗಣಗಳು ಮತ್ತು ಐದು ಪಾದಗಳುಳ್ಳ ಆದೊಂದು ಅಪೂರ್ವಛಂದಸ್ಸು ಸಿಗುತ್ತದೆ,

5 ಈ ಗ್ರಂಥ ಯಕ್ಷಗಾನ ಕೃತಿಗಳ ಪರಸ್ಪರ ಹೋಲಿಕೆಯಿಂದ ಪ್ರೌಢವಾಗಿದೆ.

ಶುದ್ಧ ಯಕ್ಷಗಾನ ಕೃತಿಯ ಪ್ರತಿಗಳು ಸಿಕ್ಕುವುದು ಅಪೂರ್ವ. ‘ಸುರಾಭಾಂಡೇಶ್ವರೋಪಾಖ್ಯಾನ’ವೆಂಬ ಯಕ್ಷಗಾನ ಕೃತಿಯಲ್ಲಿ ಒಂದು ಕಡೆ ಚಂಪಕಮಾಲೆ ಎಂದು ಸೂಚಿತವಾಗಿದ್ದೂ ‘ಕಂಡೆನನಾಥರಕ್ಷನನು’ ಎಂದು ಪ್ರಾರಂಭವಾಗುತ್ತದೆ !

ಛಂದಸ್ಸಿನ ಒಂದು ಚೌಕಟ್ಟನ್ನಿಟ್ಟುಕೊಂಡು ಅದರೊಳಗೆ ಮಧ್ಯೆ ಮಧ್ಯೆ ಕೆಲವು ಸಣ್ಣ ವ್ಯತ್ಯಾಸಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಯಕ್ಷಗಾನಕರ್ತರು ವಹಿಸಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದು ಸಾಮಾನ್ಯವಾಗಿ ಆಧುನಿಕ ಹೊಸಗನ್ನಡ ಕವನಗಳಲ್ಲಿ ಕಂಡುಬರುವ ಒಂದು ವಿಶೇಷ. ಇದನ್ನು ಇಂಗ್ಲಿಷ್ ಕವಿತೆಗಳಿಂದ ಅನುಕರಿಸಿ ಅನುಸರಿಸಿದ್ದು ಎಂದು ಅನೇಕರು ಕೊಡುವ ಕಾರಣ. ಆದರೆ ಇದು ಯಕ್ಷಗಾನಗಳಲ್ಲಿ ಆಗಲೇ ಪ್ರಯೋಗವಾಗಿರುವುದನ್ನು ನೋಡಿದರೆ ಹೊರದೇಶದಿಂದ ಬಂದುದೆಂದು ಹೇಳಬೇಕಾಗಿಲ್ಲ. ಕೆಲವರು ಅಲ್ಲಿ ನೋಡಿಯೇ ಇಲ್ಲಿ ಅದನ್ನು ಪ್ರಯೋಗಮಾಡಿರಬಹುದು. ಅಷ್ಟೆ. ಈ ಸ್ವತಂತ್ರ ಮನೋಭಾವ, ವೈವಿಧ್ಯತೆ ಎಲ್ಲೂ ಬೇರೆ ಕಡೆ-ನಮ್ಮಲ್ಲಿ- ಇಲ್ಲ ಎಂದು ಹೇಳಲಾಗದು. ಮೂರು ಮಾತ್ರೆಗಳ ಗಣಗಳಿದ್ದರೂ ಓದುವಾಗ ಒಟ್ಟಿಗೇ ಎರಡೆರಡರಂತೆ ಭಾಸವಾಗಿ ಮಧ್ಯೆ ಮಧ್ಯೆ ಒಂದು ಕೊಂಕು ಬಂದು ಹೊಸ ಛಂದಸ್ಸಿನ ವಿನ್ಯಾಸ ಗೋಚರವಾಗುತ್ತದೆ- ವೈವಿಧ್ಯ ಏರ್ಪಡುತ್ತದೆ.

∪ ∪ ∪ ∪ ∪ ∪ ∪ ∪ ∪

ಉದಾ : ಹಲವು ಗಜ ವೊಂದಾಗಿ ಸಿಹ್ಮನ ಮರಿಯನು

∪ ∪ ∪ — — ∪ — — —

ಕೊಲಿಸಿದಂತಾಯಿತೆಂದಿಂದಾ 6

3:4, 3·4:5 ಗಣಗಳಂತೆ ಕಂಡರೂ ಸಹ.

ಸೀಸಾರ್ಧಗಳು ಎಂದು ಹೇಳಿ 5 ಮಾತ್ರೆಗಳ ನಾಲ್ಕುಗಣ, 5 ಮಾತ್ರೆಗಳ ಮೂರುಗಣ, ಕೊನೆಯಲ್ಲಿ ಒಂದು ಗುರು ಇರುವುದನ್ನು ನೋಡಬಹುದು. ಇದರಲ್ಲಿಯೂ ನಾಲ್ಕು ಸಾಲುಗಳು ಸರಿಯಾಗಿ ಈ ನಿಯಮದ ಪ್ರಕಾರ ಬಂದು ಮುಂದೆ ಭಾವಕ್ಕೆ ತಕ್ಕಂತೆ ವೈವಿಧ್ಯವನ್ನು ತೋರಿಸುತ್ತಾನೆ- ೫×೨+೨ ಲಘು.

---

6 ‘ಸುರಾಭಾಂಡೇಶ್ವರೋಪಾಖ್ಯಾನ’ ಪುಟ ೧೯.

ಉದಾ : ಪರಮಾಯುರಾರೋಗ್ಯ ಸರಸ ಭೂಷಣಶೌರ್ಯ |
ಸಂಪದಭ್ಯುದಯ ದಾನ ಸಕಲಪುಣ್ಯ |
— — — — — — — — —
. . . .
ಶ್ರೀಶೈಲಧೀಶನೀವನು 7

— ‿ ‿ ‿ — — ‿ — ‿ ‿ ‿ ‿ ‿ —
8 ಕಣ್ಮನಕೆ |ಕಂಡಂತೆ| ತಾ ಕರವ ಮುಗಿ|ವ
— — ‿ — ‿ — — ‿ ‿ ‿ ‿ ‿ ‿ —
ಕಣ್ಮುಚ್ಚಿ|ಬೆಚ್ಚಿ ಬಿ| ಚ್ಚುತ್ತಕರೆ| ವ ಹರಿಯ ೫×೪

ಸೀಸಾರ್ಧದಲ್ಲಿ ಹೀಗೆ ವ್ಯತ್ಯಾಸಗಳೂ ಇವೆ. ಆದಿಯಲ್ಲಿ ಒಂದು ಗುರು ಮೂರು ಮಾತ್ರೆ ಹೆಚ್ಚಾಗಿ ಬಂದಿರುವುದನ್ನು ಗಮನಿಸಬಹುದು.

ಆದಿಯಲ್ಲಿ ಅಥವಾ ಅಂತ್ಯದಲ್ಲಿ ಕೊಸರನ್ನಿಡಬಹುದು. ಇದರಿಂದ ಮಾತ್ರೆ ಗಣಗಳ ಶಯ್ಯೆಗೆ ತೊಂದರೆಯೇನೂ ಬಾರದು.

ಮರುದಿನದೊಳು ಸುರನದಿಯೊಳಗಗೆದೆ ಮಿಾಯುತಂದು ಕಮಲ
‿ ‿ ‿ — — — ‿ ‿ ‿ ‿ ‿ ‿ ‿ ‿ ‿ — ‿ — ‿
ವರನಿಗರ್ಘ್ಯ ವಿತ್ತುವಿಮಲ ತಂತಪಕ್ಕೆ ನಿಂದನಾಗ 9

ಇದು ಸೊಗಸಾಗಿಯೇ ಇದೆ.

‿ ‿ ‿| ‿ ‿ ‿| ‿ ‿ ‿| ‿ ‿ ‿ | ‿ ‿ ‿ | ‿ — | ‿ ‿ ‿ | ‿ ‿ ‿ |
ಧರಿಸಿ| ಭಸಿತ| ವಸಿಸಿ| ಗಳದಿ | ಯಿರಿಶಿ | ಶಿವಾ | ಕ್ಷಗಳ |ಮುದದಿ |10

ಇಲ್ಲಿ ಒಂದು ಛಂದಸ್ಸಿನ ಚೌಕಟ್ಟಿನಲ್ಲಿರುವ ಒಳವಿನ್ಯಾಸವನ್ನು ಗುರುತಿಸಬಹುದು.

ಇಂದು ನಾವು ಯಾವುದನ್ನು ಆಧುನಿಕ, ಹೊಸಹಾದಿ, ಕ್ರಾಂತಿಕಾರಕ ಎಂದು ಕರೆಯುತ್ತೇವೆಯೋ ಅದು ಯಕ್ಷಗಾನಗಳಲ್ಲಿ ಆಗಲೇ ಇದೆ. ಆದ್ದರಿಂದ ಇದು ಹೊಸದೂ ಅಲ್ಲ, ಕ್ರಾಂತಿಕಾರಕವೂ ಅಲ್ಲ !

ಮತ್ತೆ ಕೆಲವು ಕಡೆ ವೃತ್ತಗಳೆಂದು ಅವುಗಳ ಹೆಸರೂ ಹೇಳಿ ವೃತ್ತಗಳನ್ನು ಬರೆದಿದ್ದರೂ, ಅಕ್ಷರಗಣಮಾತ್ರಾಗಣಕ್ಕೆ ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತ

7 ಅದೇ.
8 ನಂಜುಂಡ ಭಾಗವತರ 'ಪ್ರಹ್ಲಾದ ಚರಿತ್ರೆ' ಯಿಂದ.
9–10 ಲಿಂಗೇಂದ್ರನ 'ಇಂದ್ರಕೀಲ' ಯಕ್ಷಗಾನದಿಂದ.

ದೆಂಬುದನ್ನು ಉಳಿದ ಕಡೆಗಳಲ್ಲಿ, ನೋಡುವಂತೆ ಯಕ್ಷಗಾನಗಳಲ್ಲಿಯೂ ನೋಡಬಹುದು.

ಈ ಒಳವಿನ್ಯಾಸ ಸ್ವತಂತ್ರ ಮನೋಭಾವನೆಗೆ ಇನ್ನೊಂದು ಉದಾಹರಣೆ ಕೊಟ್ಟು, ಈ ಪ್ರಕರಣವನ್ನು ಮುಗಿಸಬಹುದು.

◡ ◡ ◡ ◡ | ◡ ◡ — | ◡ | ◡ ◡ ◡ ◡
ಜಲಧಿಶ | ಯನನಾ | ಗಿ | ಇರುತಿಹ ೪×೨+೧ ಲಘು. ೪ ಮಾತ್ರೆ ಚೂರು.

◡ ◡ — | ◡ ◡ — | —
ಜಲಜಾ | ಕ್ಷನ ತೋ | ಡೋ ೪×೨+೧ ಗುರು.

. . . | . . . . | . | . . .
◡ ◡ ◡ | — ◡ ◡ ◡ | ◡ | — ◡ —
ಹರಿಯ | ತೋರ ಲೆನ | ಗೆ | ಸಾಧ್ಯವೇ ೩×೫+೧ ಲಘು. ೫ ಮಾತ್ರೆ ಚೂರು.

◡ ◡ ◡ ◡ | — ◡ ◡ | —
— ತರಳನೆ | ಕೇಳ್ಜನ | ಗೇ 11 ೪×೨+೧ ಗುರು.

ಹೀಗೆ ಯಕ್ಷಗಾನ ಛಂದಸ್ಸಿನಲ್ಲಿ ನಿಯಮ ವೈವಿಧ್ಯಗಳ ಸಮನ್ವಯವನ್ನು ಸ್ವಲ್ಪಮಟ್ಟಿಗಾದರೂ ಕಾಣಬಹುದಾಗಿದೆ. ಅಷ್ಟರ ಮಟ್ಟಿನ ಯಶಸ್ಸು ಅದಕ್ಕಿದೆ.

---

11 ಅಳಿಯ ಲಿಂಗರಾಜನ 'ಬಬ್ರುವಾಹನ ಕಾಳಗ'ದಿಂದ.

(೭) ಸಾಹಿತ್ಯದಲ್ಲಿ ಯಕ್ಷಗಾನದ ಸ್ಥಾನ.

ಈ ವಿಷಯವಾಗಿ ಕನ್ನಡದಲ್ಲಿ ಲೇಖನಗಳಲ್ಲೂ, ಪುಸ್ತಕಗಳಲ್ಲೂ ಹಲವು ಅಭಿಪ್ರಾಯಗಳು ಬಂದಿವೆ. ಅವುಗಳನ್ನು ಮೊದಲು ತಿಳಿಸಿ ಅನಂತರ ಚರ್ಚಿಸ ಬಹುದೆಂದು ತೋರುತ್ತದೆ.

" ವಿದ್ವಾಂಸರ ಗಮನ ಇದರ ಮೇಲೆ ಹೆಚ್ಚು ಬಿದ್ದಿಲ್ಲ– ಅಳಿಯ ಲಿಂಗ ರಾಜ, ಶಾಲ್ಯದ ಕೃಷ್ಣರಾಜ ಮುಂತಾದ ಕವಿಗಳಿದ್ದರೂ ಸಹ ಯಕ್ಷಗಾನ ಜನ್ಮವೆತ್ತಿದ್ದು ಅಜ್ಞರಿಗಾಗಿ ನಿರಕ್ಷರರಿಗಾಗಿ. ಬಡವರೇ ರಚಿಸಿದ್ದು ಬಡವರಿಗಾಗಿ "— ಶ್ರೀ ಚಕ್ರಪಾಣಿ, ಮಂಗಳೂರು–ಜಯಕರ್ಣಾಟಕದಲ್ಲಿ.

" ದಕ್ಷಿಣದೇಶದ ದೇಶೀಗಬ್ಬಗಳಲ್ಲಿ ಯಕ್ಷಗಾನ ಅತಿಪ್ರಬಲ. ದೇಶೀಸಾಹಿತ್ಯ ಸಾಹಿತ್ಯವನ್ನು ಜೀವಂತವನ್ನಾಗಿ ಮಾಡುತ್ತದೆ. ಸುಬ್ಬ ಯಕ್ಷಗಾನಕವಿ. ಸುಬ್ಬನು ಅಷ್ಟೇನೂ ವಿದ್ವಾಂಸನಲ್ಲ. 1 ಪ್ರತಿಭೆ ಮಾತ್ರ ಇತ್ತು. ಹೊಸ ಹೊಸ ನುಡಿ– ನುಡಿಗಟ್ಟುಗಳು ಇವನಲ್ಲಿ ಸಿಗುತ್ತವೆ— ಬಣ್ಣಗಾರಿಕೆ, ಉಣ್ಣದುರಿ ಇತ್ಯಾದಿ. ಸೀತೆ ಸುಬ್ಬನ ಯಕ್ಷಗಾನ ಕೃತಿಯಲ್ಲಿ ' ಕನ್ನಡ ಜಾಣೆ 'ಯಾಗಿದ್ದಾಳೆ. ಸುಬ್ಬನದು ನವನವೋನ್ಮೇಷ ಶಾಲಿನಿಯಾದ ವೈಖರಿ ! " — ಶ್ರೀ ಮುಳಿಯ ತಿಮ್ಮಪ್ಪಯ್ಯನವರು– ' ಸಂಭಾವನೆ ' ಯಕ್ಷರು ಗಂಧರ್ವರಷ್ಟು ಸುಸಂಸ್ಕೃತರಲ್ಲ. ಇವರ ಗಾನವೂ ಹಾಗೆಯೇ. ವೀರರೌದ್ರರಸಗಳಿಗೇ ಪ್ರಾಶಸ್ತ್ಯ. ಗಂಧರ್ವ ಗಾನದಲ್ಲಿ ಶೃಂಗಾರಕ್ಕೆ ಪ್ರಾಶಸ್ತ್ಯ–ಪಂಚಕಜ್ಜಾಯ (1927) ರಲ್ಲಿ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು.

ಈತನನ್ನು 2 ಕರ್ಣಾಟಕದ ಮಹಾಕವಿಗಳಲ್ಲೊಬ್ಬನೆನ್ನಬಹುದು. ಯಕ್ಷಗಾನವನ್ನು ಸಾಹಿತ್ಯ ಎನ್ನಬಹುದೇ ಎಂಬ ಪ್ರಶ್ನೆ ಹಲವರಲ್ಲಿದೆ. " ಕವೇಃ ಕರ್ಮ ಕಾವ್ಯಂ " ಸಾಹಿತ್ಯದ ಗುಣಗಳೆಲ್ಲವೂ ಕಾಣಬರುವುದರಿಂದ ಸಾಹಿತ್ಯವೆಂದು ಧಾರಳವಾಗಿ ಹೇಳಬಹುದು. ಜನರಿಗೆ ಆಶಾಭಂಗವುಂಟಾಗಿ ರಂಗ ಭೂಮಿಗೆ ವಿಘ್ನ ಬರುವುದರಿಂದ ಯಕ್ಷಗಾನವನ್ನು ದ್ರಾಕ್ಷಾಪಾಕವಾಗಿಯೇ

---

1 ಪಾರ್ತಿ ಸುಬ್ಬನನ್ನು ನಿರಕ್ಷರನೆಂತಲೂ ಕೆಲವರು ಹೇಳುತ್ತಾರೆ.

2 ಪಾರ್ತಿ ಸುಬ್ಬನನ್ನು.

ರಚಿಸಿದ್ದಾರೆ. ಇದನ್ನು, ಕ್ಷುದ್ರಕಾವ್ಯ'ವೆಂದೂ ಕರೆಯುವುದುಂಟು— ಕೆಲವೆಡೆ ಸಂಪ್ರದಾಯಕ್ಕೆ ವಿರೋಧವಾಗಿರುವುದರಿಂದ— ಯಕ್ಷಗಾನ ನಾಟಕ ರೂಪದಲ್ಲಿರುವುದರಿಂದ, ಜನರು ಅಭಿನಯಿಸಿ ತೋರಿಸಬಹುದಾದುದರಿಂದ ಇದರಲ್ಲಿ ಎಲ್ಲ ಕಲೆಗಳೂ ಸೇರಿಕೊಂಡಿವೆ. .... 'ಕುಮಾರ ವಿಜಯ' 'ರತ್ನಾವಳೀ ಕಲ್ಯಾಣ'ಗಳು 3 ಕಾವ್ಯ ಲಕ್ಷಣಗಳಿಂದ ಕೂಡಿ ರಮ್ಯವಾಗಿದ್ದು ಯಕ್ಷಗಾನ ಕಲೆಗೆ ಉದಾಹರಣೆಯಂತಿವೆ. ಇವುಗಳ ಕರ್ತೃ, ನಂದಳಿಕೆ ಲಕ್ಷ್ಮೀನಾರಾಯಣಯ್ಯ ಕವಿಪುಂಗವ; ಅಸಾಧಾರಣ ಪ್ರತಿಭಾವಂತ .... ಶಿಷ್ಟಾಚಾರದಲ್ಲಿ. ಈತನೂ ಪಾರ್ತಿಸುಬ್ಬನನ್ನೇ ಅನುಸರಿಸಿದ್ದಾನೆ. 4 ಸಾಹಿತ್ಯದೃಷ್ಟಿಯಿಂದಲೂ ಉತ್ತಮವಾಗಿರುವುದರಿಂದ ಕರ್ಣಾಟಕ ವಾಙ್ಮಯದಲ್ಲಿ ಶಿಕ್ಷಣಕ್ಕೂ ಜನಾನುರಾಗಕ್ಕೂ ಉತ್ತಮವಾದ ಲಲಿತಕಲೆ ಇದು ಎಂದು ನಿರ್ಧರಿಸಬಹುದಾಗಿದೆ— 'ಪಂಚಕಜ್ಜಾಯ' (೧೯೩೭) ದಲ್ಲಿ 'ಯಕ್ಷಗಾನ ಪ್ರಬಂಧ ನಿಯಮ' ಎಂಬ ಶ್ರೀ ಕೆ. ಪಿ. ವೆಂಕಪ್ಪಶೆಟ್ಟಿಯವರ ಲೇಖನದಿಂದ ಪಾರ್ತಿಸುಬ್ಬನು ಯಕ್ಷಗಾನ ವಾಲ್ಮೀಕಿ ಎಂದು ಪ್ರಸಿದ್ಧನಾದ ಆದಿಕವಿ. ಇವನು ಇದ್ದುದು ಸುಮಾರು ೧೮ ನೆಯ ಶತಮಾನದಲ್ಲಿ! ಹಳ್ಳಿಗರಿಗೆ ಧಾರ್ಮಿಕ, ಸಾಮಾಜಿಕ, ಐತಿಹಾಸಿಕ, ಲೌಕಿಕ, ಪಾರ ಲೌಕಿಕಗಳ ಬೋಧನೆಯನ್ನಿತ್ತ ಪಾಠಶಾಲೆ ಯಕ್ಷಗಾನಕಲೆ. ಹಳ್ಳಿಯ ಲೋಗರಿಗೆ ಇದು ಹೆಚ್ಚು ಸೇವೆ ಮಾಡಿದೆ. ಪಾರ್ತಿಸುಬ್ಬ ಕನ್ನಡದ ತೊರವೆರಾಮಾಯಣದ ಕತೆಯನ್ನು ತೆಗೆದುಕೊಂಡು ಒಂಭತ್ತು ಯಕ್ಷಗಾಯನಗಳನ್ನು ರಚಿಸಿದ್ದಾನೆ. ಇದು ಇವನಲ್ಲಿ ಜೀವಂತ ಕಲೆಯಾಗಿದೆ. ಯಕ್ಷಗಾನ ಕಲೆ ಗೋಪಾಲನಿಂದ ಭೂಪಾಲನವರೆಗೆ ವ್ಯಾಪಿಸಿತ್ತು. — ಕವಿ ಭೂಷಣ ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟಿಯವರ 'ಯಕ್ಷಗಾನ ಕಲೆ' ಎಂಬ ಲೇಖನ— 'ಸಮರ್ಪಣೆ' ಗ್ರಂಥದಲ್ಲಿ

---

3 ಮುದ್ದಣ ವಿರಚಿತ

4 ಮುದ್ದಣ (ನಂದಳಿಕೆ ಲಕ್ಷ್ಮೀನಾರಾಯಣಪ್ಪ) ಕವಿಪುಂಗವ ಎಂಬುದು ನಿಜವಾದರೂ, ಅಸಾಧಾರಣ ಪ್ರತಿಭೆ ಆತನಲ್ಲಿರುವುದು ಸತ್ಯವಾದರೂ ಇವು ಕಂಡುಬರುವುದು ಮಾತ್ರ ಆತನ ಯಕ್ಷಗಾನ ಕೃತಿಗಳಲ್ಲಲ್ಲ. ಆತನ ಹೆಸರು ಕನ್ನಡ ಸಾಹಿತ್ಯದಲ್ಲಿ ಉಳಿದಿರುವುದು 'ರಾಮಾಶ್ವಮೇಧ'ದಿಂದಲೇ ಹೊರತು ಈ ಯಕ್ಷಗಾನ ಕೃತಿಗಳಿಂದಲ್ಲ.

" Some of the yakshaganas .... do not rise to dignified heights. They were some time used for Carrying on propaganda. There are yakshaganas written by Sainites wherein references to Vaishnavasim are in indecorus language. They were few dance- dramas and even the older characurens in the play had to dance. they were intended to please the masses rather than the classes. There was crude humour and meaningless alliteration in some cases "— south Indian music by Shri P. Samba murthy Book IV Page 130-131.

ರತ್ನಾವಳೀ ಕಲ್ಯಾಣವೂ ಕುಮಾರವಿಜಯವೂ ಈ ತನವೇ ಕೃತಿಗಳೆಂಬಲ್ಲಿ ಎದುರು ಮಾತಿಲ್ಲ. ಆದರೆ ಅಲ್ಲಿಯ ಕಂದ ಪದ್ಯಗಳಲ್ಲಿ ೬ ನೆಯ ಗಣವು ವಿಲಕ್ಷಣವಾಗಿವೆ........ ಅವೆರಡನ್ನೇ ರಚಿಸಿ ಅವನು ಕಾಲವಾಗಿದ್ದರೆ, ಅವನ ಹೆಸರು ಅವನೊಂದಿಗೇ ಜಗುಳಿ ಹೋಗುತ್ತಿತ್ತು. ಈಗ ಇರುವಂತೆ ಕನ್ನಡ ಸಾಹಿತ್ಯದಲ್ಲಿ ಅಮ್ಲಾನವಾಗಿ ಚಿರಸ್ಥಾಯಿಯಾಗಿ ನಿಲ್ಲುತ್ತಿರಲಿಲ್ಲ. ಇವನ ಇತರ ಗ್ರಂಥಗಳಿಂದ ಮುಖ್ಯವಾಗಿ ' ರಾಮಾಶ್ವಮೇಧ 'ದಿಂದ ಮುದ್ದಣನಿಗೆ ಕನ್ನಡ ಸಾಹಿತ್ಯದಲ್ಲಿ ಅಗ್ರಕವಿಗಳ ಶ್ರೇಣಿಯಲ್ಲಿ ಸ್ಥಾನಸಿಕ್ಕಿದೆ — ಶ್ರೀ ಎಂ. ಗೋವಿಂದ ಪೈ ಅವರು ' ಕನ್ನಡ ಕಬ್ಬಿಗರ ಬಲ್ಲಹನಾದ ಮುದ್ದಣ್ಣ ' ಎಂಬ ಲೇಖನ— ' ಕನ್ನಡ ನುಡಿ '— ೩೦-೧೧-೪೫.

" Illiterate Companies-stories coarse in language indecent in action................

Kumararamacharita............ is repulsive to the feelings of any man of refined taste........ details interwoven with immoralities..................... tends to demoralise the ignorant in society.

.... Foolish and coarse beaviour of the

inevitable buffoon................ there are here may obsurditie– pages 225....229 " "The Dramtic History of the world" by Shri K. Shrinivasarao, Pleader, Bellary (1908)" 5

ಈ ಹಲವು ಅಭಿಪ್ರಾಯಗಳ ಬೆಳಕಿನಲ್ಲಿಯೂ, ದೊರೆತಿರುವ ಯಕ್ಷಗಾನ ಕೃತಿಗಳ ಪರಿಶೀಲನೆ ವಿಮರ್ಶೆಗಳಿಂದಲೂ ಕನ್ನಡದ ಯಕ್ಷಗಾನ ಸಾಹಿತ್ಯ ವನ್ನು ಕುರಿತು ಹೀಗೆ ಹೇಳಬಹುದು.

ಯಕ್ಷಗಾನಗಳು ಕನ್ನಡದಲ್ಲಿ ಅಸಂಖ್ಯಾತವಾಗಿವೆ. ಬಹುಭಾಗ ಪುರಾಣಕಥೆಗಳಿಗೇ ಸಂಬಂಧಿಸಿದುವು– ಕೆಲವು ಕಡೆ ಮತಪ್ರಚಾರವೂ ಇದೆ. ಸಾಮಾಜಿಕ ಕತೆಗಳನ್ನು ಹೇಳುವ ಕೃತಿಗಳು ತುಂಬ ಕಡಮೆ. ಕಷ್ಟಪಟ್ಟು ಹುಡುಕಿದರೆ ಬೆರಳೆಣಿಸುವಷ್ಟು ಮಾತ್ರ ಸಿಕ್ಕಬಹುದು– ಎಲ್ಲೋ ಅಲ್ಲೊಂದು ಇಲ್ಲೊಂದು. ಆದರೆ ಕಥಾವಸ್ತು ಪುರಾಣದ, ಮತದ, ವಿಷಯಕ್ಕೆ ಸಂಬಂಧ ಪಟ್ಟರೂ, ಕೊಂಚ ಮಟ್ಟಿಗೆ ಆಗಿನ ಕಾಲದ ಜನಜೀವನ ತಿಳಿಯಲು ಸಾಧ್ಯ ಈ ಕೃತಿಗಳಿಂದ— ಕವಿಯ ಅನುಭವದ, ಮನೋಭಾವದ ಮುದ್ರೆ ಅವುಗಳ ಮೇಲೆ ಅನಿವಾರ್ಯವಾಗಿ ಬಿದ್ದಿರುವುದರಿಂದ. ಉದಾ : ಗಂಗೆ ಗೌರಿ ಸಂವಾದ, ಸುರಾಭಾಂಡೇಶ್ವರೋಪಾಖ್ಯಾನ, ಐರಾವತ ಇತ್ಯಾದಿ.

"Literature is the refined republica of life." "Litrature is the Criticisum of life" 6 ಸಾಹಿತ್ಯವು ಜೀವನದ ಸಂಸ್ಕಾರಗೊಂಡ ಪುನರಾವರ್ತನೆ (ಪ್ರತಿಬಿಂಬ). ಅದು ಜೀವನ ವಿಮರ್ಶೆ ಎಂದು ಹೇಳುವುದುಂಟು. "ವಾಕ್ಯಂ ರಸಾತ್ಮಕಂ ಕಾವ್ಯಂ," 'ರಸಾತ್ಮಕ ವಾಗಿದ್ದು ಜನಸಾಮಾನ್ಯಕ್ಕೂ ಹೃದಯಾನಂದವನ್ನುಂಟು ಮಾಡುವುದು ಸಾಹಿತ್ಯ.' 'ರಮಣೀಯತೆ'ಯ ಅನುಭವಕ್ಕೆ ರೂಪುಗೊಟ್ಟು ರಮಣೀಯ

---

5 ಯಕ್ಷಗಾನ ಮೇಳಕ್ಕೂ ಯಕ್ಷಗಾನ ಆಟಕ್ಕೂ ಸಂಬಂಧಿಸಿದಂತೆ ಇಲ್ಲಿ ಹೀಗೆ ಹೇಳುತ್ತಾರೆ. ಕುಮಾರರಾಮ ಚರಿತೆ ಎಂಬ ಯಕ್ಷಗಾನವೊಂದನ್ನು ವಿಮರ್ಶಿಸಿದ್ದಾರೆ.

6 Provided it does not lose poetic truth and beauty.

ವಾದ ರೀತಿಯಲ್ಲಿ ಶಬ್ದಗಳ ಜೋಡಣೆಯಿಂದ ರಚಿಸಿದರೆ ಕಾವ್ಯ. ಹೀಗೆ ತಿಳಿಸ ಬಲ್ಲವನೇ ಕವಿ. ಅವನ ಕುಶಲ ಕರ್ಮವೇ ಕಾವ್ಯ. ಕಾವ್ಯಗಳ ಸಮುದಾಯವೇ ಸಾಹಿತ್ಯ. ಸಾಹಿತ್ಯದ ಮುಖ್ಯೋದ್ದೇಶ ಆನಂದ—"ರಮಣೀಯಾರ್ಥ ಪ್ರತಿಪಾದಕ ಶಬ್ದಃ ಕಾವ್ಯಂ" 7 ಕವಿಗೆ ಪ್ರತಿಭೆಯೊಂದೇ ಇದ್ದರೆ ಸಾಲದು. "ಪ್ರತಿಭೆಯುಂ ಅಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯುಯುಂ ಕವಿತೆಗೆ ಕಾರಣಂ" 8 "ಪ್ರತಿಭಾನಂ ಕಾವ್ಯವಿದ್ಯಾಪ್ರಚಯ ಪರಿಚಯುಂ ವೃದ್ಧಸೇವಾನುರಾಗಂ ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ."9

ಈ ದೃಷ್ಟಿಗಳಿಂದ ಯಕ್ಷಗಾನ ಸಾಹಿತ್ಯವನ್ನು ಉತ್ತಮ ಸಾಹಿತ್ಯ ಎಂದು, ರಸವತ್ತಾದ ಕಾವ್ಯ ಎಂದು, ಕರೆಯಬಹುದೆ? ಇಲ್ಲಿ ಜೀವನದ ಪ್ರತಿಬಿಂಬ ಕೊಂಚ ಮಟ್ಟಿಗೆ ಕಂಡುಬರುವುದಾದರೂ ಸಂಸ್ಕಾರವಾಗಲೀ, ವಿಮರ್ಶೆಯಾಗಲೀ 'ರಮಣೀಯತೆ,' 'ರಸ' ಮತ್ತು ಇನ್ನಿತರ ಲಕ್ಷಣಗಳು ಇಲ್ಲಿ ಕಾಣುವುದು ಕಷ್ಟವೆಂದೇ ಹೇಳಬೇಕಾಗಿದೆ. ಕೆಲವೆಡೆಗಳಲ್ಲಿ ದೇವತ್ವವನ್ನು ಕೆಳಗಿಳಿಸಿಕೊಂಡಿರುವುದೂ ಮತ್ತೆ ಕೆಲವೆಡೆಗಳಲ್ಲಿ ಮಾನತ್ವವನ್ನು ದೇವತ್ವಕ್ಕೇರಿಸಿರುವುದೂ ಯಕ್ಷಗಾನಗಳಲ್ಲಿ ಕಂಡಬರುತ್ತದೆ.

ಮೇಲೆ ಉದ್ಧರಿಸಿರುವಂತೆ ಸಾಹಿತ್ಯದ, ಕಾವ್ಯದ ಮುಖ್ಯ ಉದ್ದೇಶ ಮನರಂಜನೆ, ಹೃದಯಾನಂದ. ಆನಂದ ಹೃದಯಕ್ಕೇ ಹೊರತು ಬುದ್ಧಿಗಲ್ಲ. ಕಾವ್ಯಾನಂದ ಎಂಬುದು ಬ್ರಹ್ಮಾನಂದ ಸದೃಶವಾದುದು ಎಂದೂ ಹೇಳುತ್ತಾರೆ. ಯಕ್ಷಗಾನಗಳ ಹಿನ್ನೆಲೆಯ ಗುರಿ ನೀತಿಬೋಧೆ ಮತ್ತು ಭಕ್ತಿಪ್ರದರ್ಶನವಾದರೂ, ವಿರಾಮವೇಳೆಯಲ್ಲಿ ಜನಸಾಮಾನ್ಯಕ್ಕೆ ಒಂದು ವಿನೋದವಾಗಿಯೂ ಅವು ಪರಿಣಮಿಸುತ್ತವೆ ಎಂಬುದನ್ನೂ ನಾವು ಮರೆಯಲಾಗದು. ಒಂದು ಮಟ್ಟದ ಜನಕ್ಕೆ ಅವರ ವಿದ್ಯಾಬುದ್ಧಿ ಸಂಸ್ಕೃತಿಗಳಿಗನುಸರಿಸಿ ಒಂದು ರೀತಿಯ ಆನಂದ ಇವುಗಳಿಂದ ನಿಜವಾಗಿಯೂ ಉಂಟಾಗುತ್ತದೆ. 'Recreation' or entertainment' ಗಾಗಿಯೂ ಯಕ್ಷಗಾನವನ್ನು ಉಪಯೋಗಿಸಿಕೊಳ್ಳಬಹುದು. ಅಷ್ಟರ ಮಟ್ಟಿಗೆ ಇದನ್ನು ಸಾಹಿತ್ಯ ಎಂದು ಕರೆಯಬಹುದು.

---

7 ಕನ್ನಡ ಕೈಪಿಡಿ– ಸಂಪುಟ 1- ಪುಟ 199–201.

8 ಕೇಳಿರಾಜನ ಶಬ್ದಮಣಿದರ್ಪಣ–ಪುಟ 175.

9 ನಾಗವರ್ಮನ ಕಾವ್ಯಾವಲೋಕನ–ಪುಟ 424.

ಕಲೆಯ ದೃಷ್ಟಿಯಿಂದ ವಿಚಾರ ಮಾಡಿದರೆ ಇಲ್ಲಿಯ ಅಭಿನಯ, ನಾಟ್ಯ ಕಲೆಗಳು ಇಲ್ಲಿ ಮುಖ್ಯವಾಗಿ ಗಮನಿಸತಕ್ಕವಾಗಿವೆ. ನಟನ ಕಲೆಗಿಂತ ಹೆಚ್ಚಾಗಿ, ಪರಂಪರೆಯಿಂದ ನಡೆದು ಬಂದ- ಬದಲಾವಣೆ ವ್ಯತ್ಯಾಸ ಹೊಂದದಿರುವ- ಯಕ್ಷಗಾನಗಳಲ್ಲಿನ ನಾಟ್ಯಕಲೆ ಮೆಚ್ಚತಕ್ಕದ್ದು; ಇದನ್ನು ಉಳಿಸಿ ಬೆಳೆಸಿಕೊಳ್ಳಬೇಕಾದುದು ಅಗತ್ಯ. ಇದು ನಿಜವಾಗಿಯೂ ನಮ್ಮ ನಾಡಿನ ಪುರಾತನ ಸ್ವತ್ತು. ಇದರಲ್ಲಿ ಕಲೆಯ ಅಂಶಯಥೇಚ್ಛವಾಗಿದೆ. ಯಕ್ಷಗಾನ ಮೂಲತಃ ನಾಟ್ಯವೇ- It is a mode of dance ಎಂದೇ ಕೆಲವರು ಅಭಿಪ್ರಾಯಪಡುತ್ತಾರೆ. ಜಕ್ಕಿಣಿ ಎಂಬುದು ನರ್ತನದ ಒಂದು ಭಾಗವಂತೆ. ಯಕ್ಷಗಾನದ ನರ್ತನವು ನಮ್ಮ ನಾಡಿನ ರತ್ನವೆನ್ನಬಹುದು. ಯಕ್ಷಗಾನಗಳಲ್ಲಿ ಕಾಳಗ ಇರುವುದೇ ಬಹಳ. ಸಮರಕಾಲದಲ್ಲಿ ವಿವಿಧ ಪಕ್ಷದವರು ಚಲಿಸುವ ರೀತಿ, ಆವೇಶ ತುಂಬಿ ಕಾಲನ್ನು ಅಪ್ಪಳಿಸಿ ಕುಣಿಯುವ ಅಬ್ಬರ ಎಂತಹವನಲ್ಲೂ ಪ್ರತಿಧ್ವನಿಯನ್ನು ಹುಟ್ಟಿಸುತ್ತದೆ. ಇದರ ಉಬ್ಬು ಉಕ್ಕಗಳಿಗೆ ಪ್ರತಿಯಾದುದು ಸ್ತ್ರೀ ನರ್ತನ. ಪೌರುಷಕ್ಕೂ ಲಾಲಿತ್ಯಕ್ಕೂ ಇರುವ ವ್ಯತ್ಯಾಸವನ್ನು ನರ್ತನದಲ್ಲಿ ಚೆನ್ನಾಗಿ ತೋರಿಸುತ್ತಾರೆ ಯಕ್ಷಗಾನಗಳಲ್ಲಿ. ಎಂತಹ ನಾಡಿಗೂ ಭೂಷಣ ತರುವ ನರ್ತನದ ಸೊಬಗು ಇಲ್ಲಿರುವುದನ್ನು ಗಮನಿಸಬೇಕು.

ಯಕ್ಷಗಾನಗಳಲ್ಲಿ ಸಂಗೀತಕ್ಕೆ ಸಂಬಂಧಪಡುವ ಅಂಶಗಳೂ ಕೆಲವು ಇವೆ. ಸಾಮಾನ್ಯವಾಗಿ ಪುಸ್ತಕಗಳಲ್ಲಿ ಪದಗಳಿಗೆ ಅನೇಕ ವಿವಿಧ ರಾಗಗಳನ್ನು ಸೂಚಿಸಿರುತ್ತಾರೆ. ಆದರೂ ಅದಷ್ಟು ಉಪಯೋಗದಲ್ಲಿ ಅಭ್ಯಾಸದಲ್ಲಿರುವುದಿಲ್ಲ. ಆರಂಭ ನಾಟಿ ರಾಗದಲ್ಲಿ ಆಗಿ ಬೆಳಗಾಗುವ ವೇಳೆಗೆ ಸೂರ್ಯೋದಯ ಕಾಲಕ್ಕೆ ಭೂಪಾಳಿ ಮೋಹನ. ರಾಗಗಳಲ್ಲಿ ಇವು ಮುಗಿಯುತ್ತವೆ. ಶಂಕರಾಭರಣ. ಆನಂದಭೈರವಿ ಭೈರವಿ, ಕಲ್ಯಾಣಿ, ಅಠಾಣ ರಾಗಗಳಲ್ಲಿ ಭಾವಗಳನ್ನು ತೋರಿಸುತ್ತಾರೆ. ವೀರರಸವನ್ನು ಪ್ರಧಾನವಾಗಿ ಅಠಾಣರಾಗದಿಂದ ತರುತ್ತಾರೆ. ಘೋರಣೆಯಲ್ಲಿ ಮಾತ್ರ ರಾಗ ಭಾವ, ಅಷ್ಟೆ. ಬಹುಶಃ ಸಂಗೀತ ಸಾಹಿತ್ಯಗಳ ಸರಿಸಮ್ಮಿಳನವನ್ನು ಯಕ್ಷಗಾನದಲ್ಲಿ ಕಾಣಬಹುದೆಂದು ತೋರುತ್ತದೆ. ಆದರೆ ಸಂಗೀತಶಾಸ್ತ್ರಜ್ಞರು ಯಕ್ಷಗಾನದ ಸಂಗೀತವನ್ನು ಅಷ್ಟೇನೂ ಮೆಚ್ಚುವುದಿಲ್ಲ.

" Sacred Music, dance music, Kalakshepan Music, Opera Music and the music of the Yakshaganas are the important branches of applied music. The Music of these songs is simple and there are neither tense sancharas nor sangathis. The range of the pieces rarely exceeds one and a half octaves. These do not have sections like chittasvara, svra sahitya etc. which adorn Kriti.... they are pure dance dramas " 10

ಪಂಪ, ಕುಮಾರವ್ಯಾಸ, ಷಡಕ್ಷರಿ ಮೊದಲಾದ ಕನ್ನಡದ ಹಿರಿಯ ಕವಿಗಳ ವರ್ಣನೆ ಇತ್ಯಾದಿ ವಿಷಯಗಳಲ್ಲಿ ಚಂಪೂಕಾವ್ಯಗಳ, ಷಟ್ಪದಿಗಳ ಹೆದ್ದಾರಿಯ ಅನುಕರಣೆ, ಅನುಸರಣೆ ಕೆಲವು ಯಕ್ಷಗಾನಗಳಲ್ಲಿ ಕಂಡು ಬಂದರೂ, ಇವು ಆ ಮಟ್ಟಕ್ಕೇರಲು ಸಾಧ್ಯವಿಲ್ಲವೆಂದೇ ಹೇಳಬೇಕಾಗಿದೆ. ಅನೇಕ ಯಕ್ಷಗಾನಗಳ ಕಥಾವಸ್ತುವಿಗೆ ಯಾವ ಆಧಾರವೂ ಇಲ್ಲ. ಅವು ಅನೇಕ ವೇಳೆ ಪ್ರಚಾರ ದೃಷ್ಟಿಯಿಂದ ರಚಿಸಿದುವಾಗಿದ್ದಂತೆ ತೋರುತ್ತವೆ. ಹಿಂದೆ ಬಹುಶಃ ಜನಸಾಮಾನ್ಯರಿಗೆ ನಾಟಕ ವಿಧಾನದ ಸಂತೋಷ ಮಾರ್ಗ ವಿದ್ದದ್ದು ಯಕ್ಷಗಾನದಿಂದಲೇ ಎಂದು ತೋರುತ್ತದೆ.

ಪಂಡಿತ ಸಾಮಗ್ರಿಯನ್ನು ಪಾಮರ ಜನ ಹೀರುವುದಕ್ಕೆ ಯಕ್ಷಗಾನ ಒಂದು ಸಾಧನವೆಂದು ತೋರುತ್ತದೆ. ಈ ದೃಷ್ಟಿಯಿಂದ ಇದು ಪ್ರೌಢ ಸಾಹಿತ್ಯದ ಅಪಭ್ರಂಶ ಎಂದು ಹೇಳಬಹುದೆ ? ಇದರಿಂದ ಪ್ರೌಢ ಸಾಹಿತ್ಯವಾಗಲೀ, ನಾಟಕ ಸಾಹಿತ್ಯವಾಗಲೀ ಹುಟ್ಟಲಿಲ್ಲ ಎಂದೇ ಹೇಳಬಹುದು. ೧೫ ನೆಯ ಶತಮಾನದಿಂದ ಈಚೆಗೆ ಮಾತ್ರ ಯಕ್ಷಗಾನ ಕೃತಿಗಳು ಸಿಕ್ಕಿರುವುದನ್ನು ಗಮನಿಸಿದರೆ ಈ ಅಭಿಪ್ರಾಯ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಇನ್ನೂ ಬಲಪಡುತ್ತದೆ. ಆ ಹೊತ್ತಿಗೆ ಕನ್ನಡದಲ್ಲಿ ಪ್ರೌಢ ಸಾಹಿತ್ಯದ ಪಂಡಿತ ಸಾಹಿತ್ಯ

---

10 ' South Indian Music '— P. Samba Murthy, Madras Book IV Chapter VII — PP. 118—119.

ಬೆಳೆದು ಸಿದ್ಧವಾಗಿತ್ತು. ಶಿವಶರಣರ, ಹರಿದಾಸರ ಪ್ರಯತ್ನದಿಂದ ಬಹುಜನರಿಗೆ ಈ ಸಾಂಸ್ಕೃತಿಕ ಆಸ್ತಿ ಲಭ್ಯವಾಯಿತು.

ಯಕ್ಷಗಾನ ರಚಿಸುವುದಕ್ಕೂ, ಆಡುವುದಕ್ಕೂ ಓದುವುದಕ್ಕೂ ಕಲಾ ಪ್ರೇರಣೆಗಿಂತ ದೈವ ಪ್ರೇರಣೆಯೇ ಹೆಚ್ಚು. ಕಲಾಸೃಷ್ಟಿ ಇಲ್ಲಿಯ ಗುರಿಯಲ್ಲ ವೇನೊ. ಶ್ರೀ ಮುಳಿಯ ತಿಮ್ಮಪ್ಪಯ್ಯ ಮತ್ತು ಇತರರು ಪಾರ್ತಿಸುಬ್ಬ ದೊಡ್ಡ ಕವಿ, ಪ್ರತಿಭಾಶಾಲಿ, ಜನಪದ ಸಾಹಿತ್ಯ ಶಿರೋಮಣಿ, ಯಕ್ಷಗಾನ ಪ್ರಪಂಚದ ನಾಡೋಜ (ಕನ್ನಡ ಸಾಹಿತ್ಯಲೋಕದ ಪಂಪನಂತೆ !) ಎಂದು ಹೊಗಳಿದ್ದಾರೆ. ಆದರೆ ಇವರು ಇಷ್ಟು ಹೊಗಳಿರುವ ಪಾರ್ತಿಸುಬ್ಬ ಇತರ ಯಕ್ಷಗಾನ ಕವಿಗಳಿಗಿಂತ ಸತ್ವಶಾಲಿ, ಶ್ರೇಷ್ಠ ಎಂದು ಒಪ್ಪಿಕೊಳ್ಳಬಹುದಾದರೂ ಅವರು ಹೇಳುವಂತೆ 'ಕರ್ಣಾಟಕದ ಮಹಾಕವಿಗಳಲ್ಲೊಬ್ಬನೆಂದು' ಹೇಳಲು ಮನಸ್ಸುಬಾರದು. ಶ್ರೀ ತಿಮ್ಮಪ್ಪಯ್ಯನವರೇ "ಮೇಲು ಮಟ್ಟದ ವಿದ್ವಾಂಸ ರೆಂಬುವರಿಗೆ ಬೋಧಿಸುವುದು ಆತನ ಗುರಿಯಾಗಿರಲಿಲ್ಲ. ಅವನೇನು ದೊಡ್ಡ ವಿದ್ವಾಂಸನೂ ಆಗಿರಲಿಲ್ಲ. ದೋಷಗಳನ್ನೇ ನೋಡಿದರೆ ಅವನ ಪ್ರಬಂಧಗಳಲ್ಲಿ ಅವು ಎಷ್ಟೋ ಸಿಕ್ಕಬಹುದು. ಸಾಮಾನ್ಯರಾದ ನಾಡವರನ್ನು ವಿಕೃತಿಯ ಬಲೆ ಯಿಂದ ಬಿಡಿಸಿ ಸಂಸ್ಕೃತಿಯತ್ತ ಸೆಳೆವುದೇ ಅವನ ಉದ್ದೇಶ." ಎಂದು ಹೇಳಿ ದ್ದಾರೆ.11 ಶ್ರೀ ಮಂ. ಗೋವಿಂದ ಪೈಗಳು ಮುದ್ದಣನ ಯಕ್ಷಗಾನಗಳ ವಿಷಯ ವಾಗಿಯೂ, ಆತನ 'ಅಮ್ಲಾನ'ವಾದ ಹೆಸರಿಗೆ ಕಾರಣವನ್ನು ಹೇಳಿರುವುದನ್ನು ಇದೇ ಪ್ರಕರಣದ ಮೊದಲಲ್ಲಿಯೇ ಉದ್ಧರಿಸಿದೆ. ಆತನಿಗೆ ಅಗ್ರಕವಿಗಳ ಶ್ರೇಣಿ ಯಲ್ಲಿ ಸಿಕ್ಕಿರುವ ಸ್ಥಾನಕ್ಕೆ 'ರಾಮಾಶ್ವಮೇಧ' ಗದ್ಯ ಕೃತಿ ಕಾರಣವೇ ಹೊರತು ರತ್ನಾವಳೀ ಕಲ್ಯಾಣ ಮತ್ತು ಕುಮಾರ ವಿಜಯ ಯಕ್ಷಗಾನ ಪ್ರಬಂಧಗಳಲ್ಲ.

ಈ ದೃಷ್ಟಿ ಕಾರಣಗಳಿಂದ ಯಕ್ಷಗಾನವನ್ನು ಸಾಹಿತ್ಯ ಎಂದು ಕರೆಯ ಬಹುದಾದರೂ ಹೆಚ್ಚಿನ ಮಟ್ಟದ ಸ್ಥಾನವನ್ನು ಕೊಡಲು ಸಾಧ್ಯವಿಲ್ಲವೇನೊ ಎನ್ನಿಸುತ್ತದೆ. "It is for the masses not for the classes" ಜನಪದ ಸಾಹಿತ್ಯ ಎಂದು ಹೇಳಬಹುದು.

11 ಅವರ 'ಪಾರ್ತಿಸುಬ್ಬ' ಗ್ರಂಥದಲ್ಲಿ ಪುಟ ೧೧೮ ನೋಡಿ.

ಯಕ್ಷಗಾನಗಳು ಎಷ್ಟೋ ಕಾಲದಿಂದ ನಡೆದುಬಂದಿದ್ದರೂ, ಇದರಲ್ಲಿ ಕಲಾವೃದ್ಧಿಯೇನೂ ಆದಂತೆ ತೋರುವುದಿಲ್ಲ. ಅನೇಕ ಕಡೆ ಅವನತಿಯಾಗಿರುವುದು ಮಾತ್ರ ಕಂಡಬರುತ್ತದೆ. ಕಲಾದೃಷ್ಟಿಯಿಂದ ಇದನ್ನು ನೋಡುವ ಗಮನವೂ ಇದ್ದಂತೆ ತೋರುವುದಿಲ್ಲ. ಇತ್ತೀಚೆಗೆ ಆಧುನಿಕ ಯಕ್ಷಗಾನಗಳಲ್ಲಿ ಈ ದೃಷ್ಟಿ ತುಸು ಮಟ್ಟಿಗೆ ಬಂದು ಅಲ್ಲಲ್ಲಿ ಪುನರುಜ್ಜೀವನದ ಕೆಲಸವೂ ನಡೆಯುತ್ತಿದೆ. ಇದು ಶುಭ ಸೂಚನೆ; ಸಂತೋಷದಾಯಕ.

ಒಟ್ಟಿನಲ್ಲಿ ಯಕ್ಷಗಾನವನ್ನು ನೋಡಲು ವಿರಾಮ ತಾಳ್ಮೆ ಎರಡೂ ಬೇಕು. ಅನೇಕ ವೇಳೆ ಅರ್ಧವಿರಾಮ, ಪೂರ್ಣವಿರಾಮಗಳ ಕುರುಹೇ ಇಲ್ಲದ ವಾಕ್ಯಗಳೂ ಒಂದೇ ಸಮನಾಗಿ ಹರಿಯುತ್ತವೆ. ಮಾತುಗಾರರು ಎಂದೆನ್ನಿಸಿಕೊಳ್ಳುವ ಬಯಕೆ ನಟರಲ್ಲಿದ್ದಂತೆಯೂ ಕಾಣುತ್ತದೆ. ಸುಧಾರಣೆಯ ಹೆಸರಿನಲ್ಲಿ ಅನೇಕ ಕಡೆ ಕಲೆ ಹಾಳಾಗುವುದೂ ಕಂಡುಬರುತ್ತಿದೆ. ಅಂತು ಹಿಂದೂ ಇಂದೂ ನಮ್ಮ ಹಳ್ಳಿಯ ಜನಗಳಿಗೆ ಯಕ್ಷಗಾನ ಆನಂದವನ್ನು ಕೊಡುತ್ತಿತ್ತು, ಕೊಡುತ್ತಾ ಇದೆ.

ಯಕ್ಷಗಾನದ ಕುಣಿತ ಮತ್ತು ಹಾಡುಗಳು ಆಶಾಬದ್ಧವಾಗಿವೆ. ಸಂಗೀತಕ್ಕೂ ಸಾಹಿತ್ಯಕ್ಕೂ ಮೇಳ ಇಲ್ಲಿ ಬಹುಮಟ್ಟಿಗೆ ಸಿಕ್ಕುತ್ತದೆ. ಇಲ್ಲಿ ರಾಗ ಮುಖ್ಯವಲ್ಲ. ಧೋರಣೆಯಲ್ಲಿ ಮಾತ್ರ ರಾಗ ಪದ್ಧತಿ ಕಾಣುತ್ತದೆ. ಅಳತೆ ಮೀರಿ ಇದು ಬರುವುದಿಲ್ಲ. ರಾಗ ಒಂದು ಸಾಧನ ಅಷ್ಟೆ. ಹಿಂದಿನ ಯಕ್ಷಗಾನ ಪರಂಪರೆಯಲ್ಲಿ ಉಳಿಸಿಕೊಳ್ಳುವುದನ್ನು ಇಟ್ಟುಕೊಂಡು, ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಈ ಜಾನಪದ—ಕಲೆಯನ್ನು ಪ್ರಚಾರದಲ್ಲಿ ತರಲೇಬೇಕಾಗಿದೆ. ಇದು ಕಲಾಕೋವಿದರ, ನಾಟಕಕಾರರ ಮುಂದಿರುವ ಕೆಲಸ.

(೮) ಯಕ್ಷಗಾನಗಳ ಪಟ್ಟಿ.

ಯಕ್ಷಗಾನ ಸಾಹಿತ್ಯ ಯಥೇಚ್ಛವಾಗಿದೆ ಎಂದು ಹಿಂದೆಯೇ ಹೇಳಿದೆ. ನನಗೆ ತಿಳಿದಿರುವ ಕೃತಿಗಳ ಪಟ್ಟಿಯೊಂದನ್ನು ಓದುಗರ ಅವಗಾಹನೆಗಾಗಿ ಇಲ್ಲಿ ಕೊಟ್ಟಿದೆ.—

ಅ ನಂ.	ಕೃತಿಯ ಹೆಸರು.	ಕವಿ.	ಇತರ ಹೆಚ್ಚಿನ ವಿಷಯ
೧	ಅಜಾಮಿಳನ ಚರಿತ್ರೆ	ಅನಂತರಾಮಯ್ಯ.	
೨	ಪ್ರಹ್ಲಾದ ಚರಿತ್ರೆ	,,	
೩	ಬಾಣಾಸುರನ ಕತೆ	,,	
೪	ಬಾಲಲೀಲೆ	,,	
೫	ಭಾಗಾನಗರದ ಕತೆ	,,	
೬	ಕೃಷ್ಣವಿಲಾಸ	ಕೃಷ್ಣಾಚಾರ್ಯ	
೭	ಕೃಷ್ಣ ಬಾಲಲೀಲೆ	ಖಾದ್ರಿ ನರಸಿಂಹ	
೮	ಚಂದ್ರಹಾಸನ ಕತೆ	ಗುರುಸಿದ್ಧಪ್ಪ	
೯	ಗೋವಿನ ಕತೆ	,,	
೧೦	ಶೃಂಗಾರ ಗೋಪೀಜಾರ ಕತೆ	ಚನ್ನಪ್ಪ	
೧೧.	ಶರಣಲೀಲಾಮೃತ	,,	
೧೨	ಶನಿದೇವರ ಮಹಾತ್ಮೆ	ಚಿನ್ಮಯದಾಸರು	ಹಾಡಿನರೂಪದಲ್ಲಿದ್ದು, ಜನಜನಿತವಾಗಿದೆ.
೧೩	ಕಾಳೀಯ ಮರ್ದನ	ತಿಪ್ಪಣಾಚಾರ್ಯ	
೧೪	ಕುಚೇಲೋಪಾಖ್ಯಾನ	,,	
೧೫	ಕುಶಲವರ ಕಾಳಗ	,,	
೧೬	ಕೃಷ್ಣದಾನಾವರ್ತ	,,	
೧೭	ಹನುಮದ್ವಿಲಾಸ	,,	
೧೮	ಗಾಲವ ಚರಿತ್ರೆ	ತಿಮ್ಮಪ್ಪದಾಸರು	
೧೯	ಲಕ್ಷಗೃಹ ದಹನ	,,	
೨೦	ಸುಭದ್ರಾಪರಿಣಯ	,,	
೨೧	ಸುರತ-ಸುಧನ್ವರ ಕಾಳಗ	,,	

ಅ. ನಂ.	ಕೃತಿಯ ಹೆಸರು	ಕವಿ.	ಇತರ ಹೆಚ್ಚಿನ ವಿಷಯ
೨೨	ಪ್ರಹ್ಲಾದ ಚರಿತ್ರೆ	ತಿರುಮಲಾರ್ಯ	
೨೩	ಅಟವೀಶ್ವರ ಗೀತಾಮಂಜರಿ	ನಂಜುಂಡ ಶಿವಯೋಗಿ	
೨೪	ಅಟವೀಶ್ವರ ಚರಿತೆ	,,	
೨೫	ಸುರಾಭಾಂಡೇಶ್ವರೋಪಾಖ್ಯಾನ	,,	ಕಾಶೀಮಹಾತ್ಮೆಯನ್ನು ಸಾರುವ, ಸುರವಿಕ್ರಯಿಯ ಕತೆ
೨೬	ಗೋಚರಿತ್ರೆ	ನಂಜಂಡ ಭಟ್ಟ	
೨೭	ಗೋಪೀಜಾರ ಕಥೆ	,,	
೨೮	ಹರಿಶ್ಚಂದ್ರನ ಕತೆ	ನಂಜುಂಡ ಭಾಗವತ	
೨೯	ಪ್ರಭುಚರಿತೆ	ನಂಡಪ್ಪ ಸೇವ	
೩೦	ಗರುಡ ಹನುಮದ್ವಿಲಾಸ	ವಿ. ಪುಟ್ಟಣ್ಣಕವಿ.	
೩೧	ದ್ರೌಪದೀ ಸ್ವಯಂವರ	ವಿ. ಪುಟ್ಟಣ್ಣಕವಿ.	
೩೨	ಧ್ರುವಚರಿತ್ರೆ	,,	
೩೩	ನಳಚರಿತ್ರೆ	,,	
೩೪	ನೇತ್ರಾವತೀ ಕಥೆ	,,	
೩೫	ಪಂಚವಟೀ ರಾಮಾಯಣ	,,	
೩೬	ರತಿಕಲ್ಯಾಣ	,,	
೩೭	ರಾಮಾಶ್ವಮೇಧ	,,	
೩೮	ಶನಿದೇವರ ಮಹಾತ್ಮೆ	,,	
೩೯	ಸಾನಂದಗಣೇಶನ ಕತೆ	,,	
೪೦	ಸಭಾವಂದನೆ	ಪುಟ್ಟಶಾಮಾಚಾರ್ಯ	ಈ ಪುಸ್ತಕದಲ್ಲಿ ವಿಮರ್ಶಿಸಿದೆ
೪೧	ಅನಸೂಯ ಕತೆ	ಪುರಂದರ ದಾಸರು	
೪೨	ಅಭಿಮನ್ಯು ಕಾಳಗ	ಮಧ್ವಪತಿ	ಪದಬಂಧ ಚೆನ್ನಾಗಿದೆ
೪೩	ಇಂದ್ರಜಿತು ಕಾಳಗ	,,	
೪೪	ಉದ್ದಾಳೀಕನ ಕತೆ	,,	
೪೫	ಐರಾವತ	,,	
೪೬	ಕಂಸವಧ	,,	

ಅ. ನಂ.	ಕೃತಿಯ ಹೆಸರು	ಕವಿ.	ಇತರ ಹೆಚ್ಚಿನ ವಿಷಯ
೪೭	ಹರಿಶ್ಚಂದ್ರ ಚರಿತ್ರೆ	ಮಹಾಂತ ದೇಶಿಕ	
೪೮	ಗಂಗೆ ಗೌರೀ ಸಂವಾದ	ರಾಮಕೃಷ್ಣಕವಿ	
೪೯	ಚೋರ ಕಥೆ	ಗೋ. ರಾಮಶಾಸ್ತ್ರಿ	
೫೦	ಜಟಾಸುರನ ಕಾಳಗ	,,	
೫೧	ಜಲಂಧರ ಕಾಳಗ	,,	
೫೨	ದುಶ್ಯಾಸನನ ಕತೆ	,,	
೫೩	ಮಾರ್ಕಂಡೇಯ ಚರಿತ್ರೆ	ರುದ್ರಕವಿ	
೫೪	ಮೀನಾಕ್ಷಿ ಕಲ್ಯಾಣ	,,	
೫೫	ಪಾರಿಜಾತಾಪಹರಣ	ಲಕ್ಷ್ಮೀನರಸಿಂಹ	
೫೬	ಪಾರ್ವತಿ ಕೊರವಂಜಿ	,,	
೫೭	ಪುತ್ರಕಾಮೇಷ್ಟಿ	,,	
೫೮	ಮದಾಲಸಾ ಪರಿಣಯ	ಲಿಂಗರಾಜ ಅರಸು	
೫೯	ಮಾರ್ಕಾಂಡೇಯನ ಕತೆ	,,	
೬೦	ಕೃಷ್ಣಸಂಧಾನ	ವೆಂಕಟರಮಣ	
೬೧	ಕೃಷ್ಣಾರ್ಜುನರ ಕಾಳಗ	,,	
೬೨	ಮೈರಾವಣನ ಚರಿತ್ರೆ	ವೆಂಕಟ ಕವಿ	
೬೩	ರುಕ್ಮಿಣೀಕಲ್ಯಾಣ	ವೆಂಕಟರಾಯ	
೬೪	ಕೃಷ್ಣಮೋಹಿನಿ	ಶಾಂತಕವಿ	
೬೫	ಸುಧನ್ವನ ಕತೆ	ಶಾಮಣ್ಣ	
೬೬	ಶಬರ ಧನಂಜ ಸುವಿಲಾಸ	ಶಿವರಾಮಶಾಸ್ತ್ರಿ	
೬೭	ವೈಕುಂಠ ನಳಚರಿತ್ರೆ	ಶೇಷಪ್ಪದಾಸರು	
೬೮	ಕೈವಲ್ಯ ಪದ್ಧತಿ	ಷಡಕ್ಷರದೇವ	
೬೯	ಖಾಂಡವದಹನ	,,	
೭೦	ಗಂಗೆ ಗೌರೀ ಸಂವಾದ	,,	ಗಂಗೆ-ಗೌರಿ ಜಗಳ-ಈಶ್ವರನ ಸಂಧಾನ-ವಿಚಿತ್ರ ಕತೆ
೭೧	ಸಾರಂಗಧರನ ಕತೆ	ಸಾಂಬಯ್ಯ	
೭೨	ಸೀತಾಸ್ವಯಂವರ	,,	

ಅ. ನಂ.	ಕೃತಿಯ ಹೆಸರು	ಕವಿ.	ಇತರ ಹೆಚ್ಚಿನ ವಿಷಯ
೭೩	ಸೂಕ್ತಿಮಂಜರಿ	ಸೀತಾರಾಮಶಾಸ್ತ್ರಿ	
೭೪	ಸೇತುಬಂಧನ	,,	
೭೫	ಸೈಂಧವನ ಕತೆ	,,	
೭೬	ಕರಿಯಬಂಟನ ಕತೆ	ಸುಬ್ಬರಾಯ	
೭೭	ಸಾನಂದ ಗಣೇಶನ ಕತೆ	ಸುಬ್ಬಯ್ಯ	
೭೮	ಹನುಮದ್ವಿಜಯ ಮಂಜರಿ	ಸುಬ್ಬಣ್ಣ	

ಈ ಎಪ್ಪತ್ತೆಂಟು ಕೃತಿಗಳೂ ಸಹ ಅಚ್ಚಾಗಿದ್ದು, ಮೈಸೂರು ವಿಶ್ವ ವಿದ್ಯಾ ನಿಲಯದ Oriental Research Institute, Mysore– ಪ್ರಾಚ್ಯ ಕೋಶಾಗಾರ (ಮೈಸೂರು) ದಲ್ಲಿ ದೊರೆಯುತ್ತವೆ.

೭೯	ಲಕ್ಷ್ಮಣವಿಲಾಸ	ಕೃಷ್ಣಗಿರಿ ಕೃಷ್ಣಯ್ಯ–ಕಾಲ	ಸುಮಾರು	೧೬೮೦
೮೦	ಕೃಷ್ಣಾರ್ಜುನರ ಕಾಳಗ	ವಿಮಲಾನಂದ	,,	೧೬೮೫
೮೧	ಗಂಗೆ ಗೌರೀ ಸಂವಾದ	?	,,	೧೭೦೦
೮೨	ಚೂಡಿಕುಡುತ್ತ ನಾಚ್ಚಾರ್ ವಿವಾಹ	?	,,	೧೭೦೦
೮೩	ಅಹಿಂಸಾ ಕಥೆ	ಅಂತಪ್ಪ	,,	೧೭೨೦
೮೪	ಪದ್ಮಾವತಿಯ ಕೊರವಂಜಿ	ರಾಯಣ್ಣ	,,	೧೭೩೦
೮೫	ಕುಶಲವರ ಕಾಳಗ	?	,,	೧೭೫೦
೮೬	ಬಭ್ರುವಾಹನ ಕಾಳಗ	?		,,
೮೭	ಯಾಗ ಚರಿತ್ರೆ	?		,,
೮೮	ಗಯಚರಿತ್ರೆ	?		,,
೮೯	ರಾಮಚರಿತೆ	?		,,
೯೦	ಶಿವಶರಣಲೀಲಾಮೃತ	ಚನ್ನಪ್ಪ		,,

ಅ ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೯೧	ಬಸವನ ಮತ್ತು ಅವನ ಸಮಕಾಲೀನ ಪುರಾತನರ ಚರಿತೆ	ಚನ್ನಪ್ಪ	೧೭೫೦	
೯೨	ಪದ್ಮಾವತೀ ಯಕ್ಷಗಾನ	ರಾಮ	೧೭೫೦.	

ಅ ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೯೩	ಜಿನದತ್ತರಾಯನು ಪದ್ಮಾವತಿಯನ್ನು ತಂದ ಕತೆ	ರಾಮ	೧೭೫೦	
೯೪	ಕಪೋತಕಾವ್ಯ (ರಾಮನು ಸುಗ್ರೀವನಿಗೆ ಹೇಳಿದ ಕಪೋತಕತೆ	ನಂಜಯ್ಯ	,,	
೯೫	ವಿಜಯ ಕುಮಾರನ ಕತೆ	ಪದ್ಮರಾಜ	,,	
೯೬	ಗಿರಿಜಾ ಕಲ್ಯಾಣ	ಗಂಗ	,,	
೯೭	ಬಿಳಿಯಕಲ್ಲ ರಂಗಸ್ವಾಮಿಯ ಪಾರಿಜಾತ ಪ್ರಸಂಗ	ಸಾಮಿಕವಿ	,,	
೯೮	ಮಲ್ಲಿಕಾರ್ಜುನ ಚರಿತೆ	ಕಾಶೀರಾಮ	,,	
೯೯	ಮನ್ಮಥ ಕೊರವಂಜಿ	ಅನಂತನಾಥ	೧೮೦೦	
೧೦೦	ಪ್ರಭಾವತೀ ಸ್ವಯಂವರ	ಹರಿಹರಪುರದ ಪರಮೇಶ್ವರ ಭಟ್ಟ	?	ಯಕ್ಷಗಾನಕವಿ ಸಾರ್ವಭೌಮನಂತೆ
೧೦೧	ಕಾಲನೇಮಿ ಕಾಳಗ		,,	
೧೦೨	ಅಭಿಮನ್ಯು ಕಾಳಗ		,,	
೧೦೩	ಶ್ರೀರಾಮ ಕಥಾಪ್ರಸಂಗ	ರಾಮಕೃಷ್ಣರಾಯ	?	
೧೦೪	ಅಭಿಮನ್ಯು ಕಾಳೆಗ	ಮಧ್ವದಾಸ	೧೮೦೦	
೧೦೫	ಚಿತ್ರಸೇನ ಕಾಳೆಗ	,,	,,	
೧೦೬	ಪ್ರಹ್ಲಾದ ಚರಿತ್ರೆ	ರಾಮಾಚಾರ್ಯ	,,	
೧೦೭	ಚೋರ ಕಥೆ	ಕಸ್ತೂರಿಸಿದ್ದ	,,	
೧೦೮	ಶ್ರೀನಿವಾಸ ಕಲ್ಯಾಣ	ಏರಿಶೇಷ	,,	ಇದು ಹಾಡಿನರೂಪದಲ್ಲಿದ್ದು ಇಂದಿಗೂ ಬಹಳ ಜನಪ್ರಿಯವಾಗಿದೆ. ಸ್ವಾರಸ್ಯವಾಗಿದೆ.
೧೦೯	ಪಾರ್ವತಿ ಕೊರವಂಜಿ	ವೆಂಕ	,,	
೧೧೦	ಕರಿಬಂಟನ ಕತೆ	ಭಾಳಾಕ್ಷ	,,	
೧೧೧	ಗಯಚರಿತ್ರೆ	,,	,,	
೧೧೨	ಐರಾವತ	,,	,,	

ಅ. ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೧೧೩	ಲವಕುಶರ ಕಾಳಗ	ಭಾಳಾಕ್ಷ	೧೮೦೦	
೧೧೪	ಭಸ್ಮಾಸುರನ ಕಾಳಗ	,,	,,	
೧೧೫	ತಾರಾಶಶಾಂಕ ನಾಟಕ	ಸುಬ್ರಹ್ಮಣ್ಯ	೧೮೩೦	
೧೧೬	ಏಕಾದಶೀ ಪ್ರಸಂಗ	ಗೇರುಸೊಪ್ಪೆ ಶಾಂತಯ್ಯ	..	
೧೧೭	ಕರ್ಣಪರ್ವ	,,	,,	
೧೧೮	ಜರಾಸಂಧನ ಕಾಳಗ	,,	,,	
೧೧೯	ದ್ರೋಣಪರ್ವ	,,	,,	
೧೨೦	ಭೀಷ್ಮಪರ್ವ	,,	,,	
೧೨೧	ರಾವಣದಿಗ್ವಿಜಯ	,,	,,	
೧೨೨	ಲವಣಸಂಹಾರ	,,	,,	
೧೨೩	ಸೀತಾಕಲ್ಯಾಣ	,,	,,	
೧೨೪	ಸೀತಾವಿಯೋಗ	,,	,,	
೧೨೫	ಸುಭದ್ರಾಕಲ್ಯಾಣ	,,	,,	
೧೨೬	ಸುರಥಸುಧನ್ವ ಕಾಳಗ	,,	,,	
೧೨೭	ಅಮ್ಮಣ್ಣಿ ಪಾರಿಜಾತ	?	,,	
೧೨೮	ರುಕ್ಮಾಂಗದ ಚರಿತ್ರೆ	?	,,	
೧೨೯	ಸುಭದ್ರಾ ಕಲ್ಯಾಣ	?	,,	
೧೩೦	ಸುಧನ್ವ ಕಾಳಗ	?	,,	
೧೩೧	ಪುತ್ರಕಾಮೇಷ್ಠಿ	?	..	
೧೩೨	ಶಂಬರಾಸುರನ ಕಾಳಗ	ಸುಬ್ರಹ್ಮಣ್ಯ	೧೮೪೦	
೧೩೩	ಭಾವನಾ ಕತೆ	ಮುಮ್ಮಡಿ ಕೃಷ್ಣರಾಜ	೧೭೯೪-೧೮೬೮	
೧೩೪	ಪಾರಿಜಾತಾಪಹರಣದ ಕತೆ	,,	,,	
೧೩೫	ದಕ್ಷಾಧ್ವರದ ಕತೆ	,,	,,	
೧೩೬	ಮಕರಾಂಕಸೇನ ಕತೆ	ಲಿಂಗ	೧೮೫೦	
೧೩೭	ಕೃಷ್ಣಪಾರಿಜಾತ	ಅಪರಾಳ ತಮ್ಮಣ್ಣ	,,	
೧೩೮	ಪ್ರಭುಚರಿತ್ರೆ	ನಂದಪ್ಪ	,,	

ಅ. ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೧೩೯	ಗಯಚರಿತ್ರೆ	ಅಳಿಯ ಲಿಂಗರಾಜ	೧೮೨೩-೧೮೭೪	
೧೪೦	ನಳಕೂಬರ ವಿಲಾಸ	,,	,,	
೧೪೧	ಗಿರಿಜಾಕಲ್ಯಾಣ	,,	,,	
೧೪೨	ಪುತ್ರಕಾಮೇಷ್ಠಿ	,,	,,	
೧೪೩	ಕೃಷ್ಣಾರ್ಜುನ ಕಾಳಗ	,,	,,	
೧೪೪	ತ್ರಿಪುರದಹನ	,,	,,	
೧೪೫	ರಾಧಾವಿಲಾಸ	,,	,,	ಅಂಕಿತ ಮಂಜುನಾಥ
೧೪೬	ಸೋಮಶೇಖರ-ಚಿತ್ರಶೇಖರ ಕತೆ	”	,,	
೧೪೭	ರತ್ನಾವಳೀ ಕಲ್ಯಾಣ	ನಂದಳಿಕೆ ಲಕ್ಷ್ಮೀನಾರಣಪ್ಪ	೧೮೯೯	ಮುದ್ದಣ ಕವಿ
೧೪೮	ಕುಮಾರ ವಿಜಯ	,,	,,	
೧೪೯	ದುಶ್ಯಾಸನ ನಾಟಕ	ವೀರನಗೆರೆ ಪುಟ್ಟಣ್ಣ	೧೯೦೦	
೧೫೦	ಗರುಡ ಹನುಮದ್ವಿಲಾಸ	,,	,,	
೧೫೧	ದ್ರೌಪದೀ ಸ್ವಯಂವರ	,,	,,	
೧೫೨	ಧ್ರುವಚರಿತ್ರೆ	,,	,,	
೧೫೩	ನಳಚರಿತ್ರೆ	,,	,,	
೧೫೪	ನೇತ್ರಾವತೀ ಕತೆ	,,	,,	
೧೫೫	ಉಷಾಹರಣ ನಾಟಕ	ಶಾಂತಕವಿ (ಬಾಳಾಚಾರ್ಯ ಸಕ್ರಿ)	,,	ಇವರು ಸುಮಾರು ಎಪ್ಪತ್ತು ಕೃತಿಗಳನ್ನು ರಚಿಸಿರುವರೆಂದು ಹೇಳುತ್ತಾರೆ.
೧೫೬	ಕೀಚಕವಧೆ	,,	,,	
೧೫೭	ಗಜೇಂದ್ರ ಮೋಕ್ಷ	,,	,,	
೧೫೮	ಗಿರಿಜಾಕಲ್ಯಾಣ	,,	,,	
೧೫೯	ಚಂದ್ರಾವಳೀ ಚರಿತೆ	,,	,,	

ಅ. ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೧೬೦	ಬಾಣಾಸುರನ ನಾಟಕ	„	„	
೧೬೧	ಮನೋರಮ ನಾಟಕ	„	„	
೧೬೨	ವತ್ಸಲಾಹರಣ	„	„	
೧೬೩	ಸಿರಿಯಾಳ ಸತ್ವಪರೀಕ್ಷೆ	„	„	
೧೬೪	ಸೀತಾರಣ್ಯಪ್ರವೇಶ	„	„	
೧೬೫	ಸಂದೋಪಸಂದ ವಧೆ	„	„	
೧೬೬	ಬಕಾಸುರನ ಕತೆ	ಧಾರಾಪುರದ ತಿಮ್ಮಪ್ಪದಾಸ	„	
೧೬೭	ಮೂರೂವರೆ ವಜ್ರದ ಕತೆ	„	„	
೧೬೮	ನರಕಾಸುರನ ಕಾಳಗ		„	
೧೬೯	ಸಭಾಪರ್ವ	ಹಟ್ಟಿಯಂಗಡಿ ಮಂಜಯ್ಯ	೧೮೬೦	
೧೭೦	ಧ್ರುವಚರಿತೆ	ಹಟ್ಟಿಯಂಗಡಿ ರಾಮಭಟ್ಟ	„	
೧೭೧	ಸುಭದ್ರಾ ಕಲ್ಯಾಣ	„	„	
೧೭೨	ಪುತ್ರಕಾಮೇಷ್ಟಿ	ಪಾರ್ತಿಸುಬ್ಬಯ್ಯ	ಹದಿನೆಂಟನೆಯ ಶತಮಾನದ ಕೊನೆ	
೧೭೩	ಪಂಚವಟಿ	„	„	
೧೭೪	ವಾಲಿ-ಸುಗ್ರೀವರ ಕಾಳಗ	„	„	
೧೭೫	ಉಂಗುರ ಸಂಧಿ	„	„	
೧೭೬	ಸೇತುಬಂಧನ	„	„	
೧೭೭	ಅಂಗದ ಸಂಧಾನ	„	„	
೧೭೮	ಸಭಾಲಕ್ಷಣ	„	„	
೧೭೯	ಬಾಲಲೀಲೆ	„	„	
೧೮೦	ಬಿಲ್ಲಹಬ್ಬ	„	„	
೧೮೧	ಪಟ್ಟಾಭಿಷೇಕ	ಪಾರ್ತಿಸುಬ್ಬಯ್ಯ „	„	
೧೮೨	ಕುಂಭಕರ್ಣ ಕಾಳಗ	„	„	
೧೮೩	ಸಭಾಲಕ್ಷಣ	ಬೆನಕಯ್ಯ ಭಾಗವತ	೧೮೬೦	

ಅ. ನಂ.	ಕೃತಿಯ ಹೆಸರು	ಕವಿ.	ಕಾಲ	ಇತರ ಹೆಚ್ಚಿನ ವಿಷಯ
೧೮೪	ದುಂದುಭಿ ಆಖ್ಯಾನ	ಬೋಳಾರವಾಸುದೇವಯ್ಯ	೧೮೬೦	
೧೮೫	ಚಂದ್ರಮೌಳೀ ಕಾಳಗ	,,	,,	
೧೮೬	ಕರಿಬಂಟನ ಕತೆ	ಸಿದ್ಧೇಶ	?	ಈ ಗ್ರಂಥದಲ್ಲಿ ವಿಮರ್ಶೆ ಮಾಡಿದೆ.
೧೮೭	,,	ವೀರನಗೆರೆ ಪುಟ್ಟಣ್ಣ	೧೯೦೦	
೧೮೮	ಹಾಲಾಹಲ ಭಕ್ಷಣೆ	ನಂಜುಂಡ ಶಿವಯೋಗಿ		
೧೮೯	ಭಾಗಾನಗರದ ಕತೆ	?	?	ವಿಮರ್ಶೆ ಮಾಡಿದೆ
೧೯೦	ಇಂದ್ರಕೀಲ	ಲಿಂಗೇಂದ್ರ	?	,,
೧೯೧	ಸಭಾಲಕ್ಷಣ ಸಂಗ್ರಹ–	ಬಿ. ರಾಮರಾಯರು	?	,,
೧೯೨	ಚಂದ್ರಹಾಸನ ಕತೆ	ನಂಜುಂಡಕವಿ	?	
೧೯೩	ಕನಕಾಂಗೀ ಕಲ್ಯಾಣ	?	?	
೧೯೪	ಕುಮಾರ ರಾಮನ ಕತೆ	?	?	
೧೯೫	ಆದಿಪುರಾಣ	ಬೊಮ್ಮಣ್ಣ ಕವಿ	?	
೧೯೬	ಐರಾವತ	?	?	
೧೯೭	ಸೀತಾಕಲ್ಯಾಣ	ಹೆಳವನಕಟ್ಟೆ ಗಿರಿಯಮ್ಮ	೧೮ ನೆಯ ಶತಮಾನ	
೧೯೮	ಚಂದ್ರಹಾಸನ ಕತೆ	,,	,,	
೧೯೯	ಪ್ರಹ್ಲಾದ ಚರಿತ್ರೆ	ಅನಂತಾದ್ರೀಶ ಮುದ್ರಿಕೆ	?	
೨೦೦	ವೆಂಕಟೇಶ ಕಲ್ಯಾಣ	,,	?	
೨೦೧	ನಳಚರಿತ್ರೆ	ಭೀಮೇಶ ಕೃಷ್ಣಮುದ್ರಿಕೆ	?	
೨೦೨	ಕೃಷ್ಣದಾನಾವರ್ತ	,,	?	
೨೦೩	ದ್ರೌಪತಿ ವಸ್ತ್ರಾಪಹರಣ	ಶೇಷಗಿರಿದಾಸ	?	
೨೦೪	ಪ್ರಹ್ಲಾದ ಚರಿತ್ರೆ	ಶ್ರೀಗುರುರಾಮವಿಠಲ		

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೯	ಕೊನೆಯಿಂದ ಮೂರು	ಕ್ರುತಿಯವರು	ಶ್ರುತಿಯವರು
೧೧	೧	ಪ್ರದಶನಕ್ಕೂ	ಪ್ರದರ್ಶನಕ್ಕೂ
,,	೫	ಗಿತೂಂಯುರ	ತಂಗಿಯರೂ
೧೬	೧೯	ವಾದ್ನ	ವಾದ
೧೭	೨	ಬಂಡೆ	ಚಂಡೆ
,,	೩	ಚಮನವಾದ್ಯ	ಚರ್ಮವಾದ್ಯ
,,	೪	ಪಾತ್ರದಾರರ ಆಶ....	ಪಾತ್ರದಾರರ ಆಶ
,,	ಕೊನೇ	ಸಪ್ಪೆಯಂದರೆ ಆಟವು	ಸಪ್ಪೆಯಾದರೆ ಆಟವೂ
೨೧	ಕೊನೇ	ಕೃತಜ್ಞರೂ	ಕೃತಿಜ್ಞರೂ
೨೨	೨೦	ಪಾಂಡವ	ತಾಂಡವ
೨೨	ಕೊನೇ	ಶೃತಿ	ಶ್ರುತಿ
,,	,,	ಸಪ್ರಾಂಗ	ಸಪ್ತಾಂಗ
೨೫	೧೪	ಗಧಾದರಾ	ಗದಾಧರಾ
೨೬	೨೦	ಹೋಗುವುದಿಲ್ಲ	ಹೇಸುವುದಿಲ್ಲ
,,	೨೪	ಸಂಪ್ರದಾಯಕನಿಗೂ	ಸಂಪ್ರದಾಯ ಶರಣನಿಗೂ
೨೭	೧೦	ಭೋದಿಸುತ್ತಾನೆ.	ಬೋಧಿಸುತ್ತಾನೆ
,,	೧೧	ಹಾಸ್ಯದವರೆಗೆ	ಹಾಸ್ಯದ ದವಡೆಗೆ
೨೯	೧೨	ಬಾಟೋಕ್ತಿ	ಚಾಟೋಕ್ತಿ
,,	೨೧	'ಮೃಚ್ಛಟಿಕ	''ಮೃಚ್ಛಕಟಿಕ
೩೨	೧೭	ಕಿಳೇ	ಕೀಳೇ
೩೩	೨	ಗ್ರಹಚಾಮರ	ಗೃಹಚಾಮರ
೩೪	೧೨	ಮುಂದೆ ಬರು ಪಾತ್ರಗಳೆಲ್ಲ	ಮುಂದೆ ಬರುವ ಪಾತ್ರಗಳೆಲ್ಲ

ಪುಟ	ಸಾಲು	ತಪ್ಪು	ಒಪ್ಪು
೩೪	೧೫	(Frailar)	(Trailar)
,,	೧೯	ಈ ಗ್ರಥದಲ್ಲಿ	ಈ ಗ್ರಂಥದಲ್ಲಿ
,,	ಕೊನೇ	ಪದಳೂ	ಪದಗಳೂ
೩೫	೬	ಶೃತಿ	ಶ್ರುತಿ
,,	೧೭	ನಾಟ್ಯ	ನಾಟೀ
೩೬	೭	ಗ್ರುದರ್ಶನದ	ಪ್ರದರ್ಶನದ
,,	೧೩	ಕ್ರತಿಗಳ	ಕೃತಿಗಳ
,,	೧೪	ಪಟ್ಟಿಯೊಂದನ್ನೆಲ್ಲ	ಪಟ್ಟಿಯೊಂದನ್ನು
೩೮	೨೪	ಮೂಲಪದಗಳ	ಯಾಲಪದಗಳ
೪೩	೧೦	ವೈದೇಶ	ವೈದ್ಯೇಶ
೪೯	೬	ಅನಘನ್ಯವಾದ	ಅನರ್ಘ್ಯವಾದ
,,	೨೦	ಬಲಿಗೆ	ಬಲೆಗೆ
೫೧	೧೮	ಉಪಮಾತುಗಳು	ಉಪಮಾನಗಳು
೫೪	೧೩	ಕಂಡುಹಿಡಿಯುಡು	ಕಂಡುಹಿಡಿಯಲು
೫೫	೩	ಭವನಕ್ಕೆ	ಭವಕ್ಕೆ
೬೨	೧೫	ಅಭಿನಯಿಸಿರುವುದರಿಂದ	ಅಭಿನಯಿಸುವುದರಿಂದ
೬೩	೯	ಭಾಗವದ್ಭಕ್ತಿ	ಭಗವದ್ಭಕ್ತ
೬೩	೨೪	ಹೊತ್ತಿಗೆ	ಹೊತ್ತಗೆ
೬೪	೧೫	ಅದೆ	ಇದೆ
೬೫	೧೫	ಆಗ್ಗಳೆ	ಅಗ್ಗಳ
೬೫	೧೯	'ಚಿತ್ರಾಣ'	'ಚತ್ರಾಣ'
೬೫	೨೦	'ಬೆಪಂಡೆ'	'ಬೆದಂಡೆ'
೭೧	ಅಡಿಟಿಪ್ಪಣಿ ಕೊನೇ	ನಾಟ್ಯಕ	ನಾಟ್ಯಾಂಕ
೭೨	೧೩	ಮೊಲಿನಿಂದಲೂ	ಮೊದಲಿನಿಂದಲೂ
೭೨	ಅಡಿಟಿಪ್ಪಣಿ ೩ನೇ ಸಾಲು	'ಸಮರ್ಪಕ್ಕೆ'	'ಸಮರ್ಪಣೆ'
೭೩	" "	ಶ್ರೀ.ಆರ್....	ಶ್ರೀ. ಎ. ಆರ್....
೭೪	೫	ಇಷ್ಟವನ್ನು	ಇಷ್ಟನ್ನು
೭೫	೧೯	ದುಂಡುಪಿಯೆ	ದುಂಡುಬಿಯೆ

ಪುಟ	ಸಾಲು	ತಪ್ಪು	ಒಪ್ಪು
೭೫	೧೯	ಬೀದಿವ ಮಿವ	ಬೀದಿವ ಯಿವ
೭೫	೧೯	ಂದೂ	ಎಂದೂ
೭೫	೨೧	ದುಂಡುಪಿ	ದುಂಡುಬಿ
೭೫	೨೨	ವಮಿವ	ವಯಿವ
೭೬	೬	ಮಾತು	ಮಾತ್ರ
೭೬	ಅಡಿಟಿಪ್ಪಣಿ ೩	hareur	humour
೭೭	ಅಡಿಟಿಪ್ಪಣಿ ೩	ವಾಗ್ವೇದಿ	ವಾಗ್ದೇವಿ
೭೮	೧೮	in	is
೭೮	೨೧	ಸಃಮಾಜಿಕತೆಗಳೂ	ಸಾಮಾಜಿಕ ಕತೆಗಳೂ
೭೯	೧–೨	ಪೌರಾಣಿಕ ವಲ್ಲದಾದುಕ್ಕೆ	ಪೌರಾಣಿಕವಲ್ಲದುದಕೆ
೮೦	೧೩	Prosidy	Prosody
೮೪	೩	ಮಹೋನ್ನಾತ	ಮಹೋನ್ನತ
೮೪	೩	ಮಹಿಮಾನ್ವತ	ಮಹಿಮಾನ್ವಿತ
೮೬	೧೧	ತಂತಪಕ್ಕೆ	ತರತಪಕ್ಕೆ
೯೦	೪	Sainites	Saints
೯೦	೬	charaunves	characters
೯೧	೧	may	many
೯೧	೧೭	republica	replica
೯೧	೧೮	Criticisolm cf	Criticism of
೯೨	ಅಡಿಟಪ್ಪಣಿ–೨	ಕೇಳಿರಾಜನ	ಕೇಶಿರಾಜನ
೯೨	ಅಡಿಟಪ್ಪಣಿ–೩	ಕಾವ್ಯಾವಲೋಕ-ನ	ಕಾವ್ಯಾವಲೋಕನ-
೯೪	೧	Kalakshapau	Kalakshepam
೯೪	ಕೊನೇಸಾಲು	ಸಾಹಿತ್ಯದ	ಸಾಹಿತ್ಯ